ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

## ಸಮಾಜ ವಿಜ್ಞಾನ ಶಿಕ್ಷಕರ ವೇದಿಕೆ

## ಹಾಗೂ

### ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬಸವಕಲ್ಯಾಣ

### ಇವರ ಸಂಯುಕ್ತಾಶ್ರಯದಲ್ಲಿ


## “ಬಸವಕಲ್ಯಾಣದ ನಡೆ ಜ್ಞಾನ ದೆಡೆಗೆ”

ಸಮಾಜವಿಜ್ಞಾನ ವಿಷಯದ ಸಂಪನ್ಮೂಲ ಸಾಹಿತ್ಯ

# ಜ್ಞಾನ ಸಿಂಚನ

ಪ್ರಕಟಣೆ

ಸಮಾಜ ವಿಜ್ಞಾನ ಶಿಕ್ಷಕರ ವೇದಿಕೆ ಬಸವಕಲ್ಯಾಣ



# ಪರಿವಿಡಿ/Index


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 01 | ಭಾರತಕ್ಕೆ ಯುರೋಪಿಯನ್ನರ ಆಗಮನ– 1<br>Advent of Europeans to India–1 | 1-9 |
| 02 | ಬ್ರಿಟೀಷ್ ಆಳ್ವಿಕೆಯ ವಿಸ್ತರಣೆ–2<br>The extension of the British Rule-2 | 10-13 |
| 03 | ಬ್ರಿಟೀಷ್ ಆಳ್ವಿಕೆಯ ಪರಿಣಾಮಗಳು–3<br>The Impact of British Rule in Indai-3 | 14-23 |
| 04 | ಕರ್ನಾಟಕದಲ್ಲಿ ಬ್ರಿಟೀಷ್ ಆಳ್ವಿಕೆಯ ಪ್ರತಿರೋಧಗಳು–4<br>Opposition to British Rule in Karnataka-4 | 24-28 |
| 05 | ಸಾಮಾಜಿಕ ಮತ್ತು ಧಾರ್ಮಿಕ ಸ್ಮಧಾರಣಾ ಚಳವಳಿಗಳು–5<br>Social And Religious Reformation Movements-5 | 29-35 |
| | **ರಾಜ್ಯಶಾಸ್ತ್ರ** | |
| 01 | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು–1<br>The Problems Of India And Their Solutions-1 | 36-40 |
| 02 | ಭಾರತದ ವಿದೇಶಾಂಗ ನೀತಿ–2<br>Indian Foreign Policy-2 | 41-44 |
| 03 | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ–3<br>Indain's Relationship With Other Countries-3 | 45-48 |
| | **ಸಮಾಜಶಾಸ್ತ್ರ** | |
| O1 | ಸಾಮಾಜಿಕ ಸ್ತರವಿನ್ಯಾಸ –1<br>Social Stratification -1 | 49-51 |

| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| | **ಭೂಗೋಳ** | |
| 01 | **ಭಾರತದ ಸ್ಥಾನ ಮತ್ತು ವಿಸ್ತೀರ್ಣ–1**<br>**Indian Position And Extension–1** | **52-54** |
| 02 | **ಭಾರತದ ಮೇಲ್ಮೈ ಲಕ್ಷಣಗಳು–2**<br>**Indian Physiography-2** | **55-58** |
| 03 | **ಭಾರತದ ಮಾಯುಗುಣ–3**<br>**Indian Climate-3** | **59-64** |
| 04 | **ಭಾರತದ ಮಣ್ಣುಗಳು–4**<br>**Indian Soils -4** | **65-68** |
| | **ಅರ್ಥಶಾಸ್ತ್ರ** | |
| 01 | **ಅಭಿವೃದ್ಧಿ–1**<br>**Development -1** | **69-72** |
| 02 | **ಗ್ರಾಮೀಣ ಅಭಿವೃದ್ಧಿ–2**<br>**Rural Development-2** | **73-76** |
| | **ವ್ಯವಹಾರ ಅಧ್ಯಯನ** | |
| 01 | **ಬ್ಯಾಂಕ್ ವ್ಯವಹಾರಗಳು–1**<br>**Banking Transactions -1** | **77-83** |
| 02 | **ಉದ್ಯಮಗಾರಿಗೆ–2**<br>**Entrepreneurship-2** | **84-89** |

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

# ಸರ್ಕಾರಿ ಪ್ರೌಢಶಾಲೆ, ಹಿರನಾಗಾಂವ

ಬಸವಕಲ್ಯಾಣ ತಾಲೂಕು. ಬೀದರ ಜಿಲೆ–585437

## ಎಸ್.ಎಸ್.ಎಲ್.ಸಿ ನೂತನ ಪಠ್ಯಕ್ರಮಕ್ಕೆ ಅನುಸಾರ ರಚಿಸಲಾದ ಸಮಾಜ ವಿಜ್ಞಾನ ಪ್ರಶ್ನೋತ್ತರ ಕೈಪಿಡಿ

ಆತ್ಮೀಯ ಶಿಕ್ಷಕ ಮಿತ್ರರೇ

ಎಸ್.ಎಸ್.ಎಲ್.ಸಿ ವಿಧ್ಯಾರ್ಥಿಗಳನ್ನು ದೃಷಿಯಲ್ಲಿ ಇಟ್ಟು ಈ ನೋಟ್ಸ ತಯಾರಿಸಲಾಗಿದೆ. 2018–19 ನೇ ಸಾಲಿನಲ್ಲಿ ಪಠ್ಯ ಪುಸ್ತಕ ಸಂಪೂರ್ಣ ಬದಲಾಗಿದ್ದು. ಹಂತ ಹಂತವಾಗಿ ಉಳಿದ ಅಧ್ಯಾಯವಾರು ನೋಟ್ಸ್ ತಯಾರಿಸಲಾಗುದು. ಎಸ್.ಎಸ್.ಎಲ್.ಸಿ ಪರೀಕ್ಷಾ ಸದ್ಧತೆಯ ಬಗ್ಗೆ ಇದರಲ್ಲಿ ಗಮನ ನೀಡಲಾಗಿದೆ. ಪಠ್ಯ ಪುಸ್ತಕದಲ್ಲಿ ಬರುವ ಕ್ಲಿಷ್ಟಕರವಾದ ಪರಿಕಲ್ಪನೆಗಳನ್ನು ಸುಲಭವಾಗಿ ಬಿಡಿಸಲು ಪ್ರಯತ್ನಿಸಲಾಗಿದೆ. ಮುಂದೆ ಎಸ್.ಎಸ್.ಎಲ್.ಸಿ ಬೋರ್ಡಿನಿಂದ ಪರೀಕ್ಷಾ ಸೂಚನೆಗಳು ಮತ್ತು ನೀಲನಕ್ಷೆ ಬಂದ ನಂತರ ಈ ಸಮಾಜ ವಿಜ್ಞಾನದ ನೋಟ್ಸನ್ನು ಸಂಪೂರ್ಣವಾಗಿ ಪರಿಷ್ಕರಿಸಲಾಗುವುದು. ಪ್ರಸ್ತುತವಾಗಿ ಕೆಲವೂಂದು ಅಧ್ಯಾಯಗಳಿಗೆ ಮಹತ್ವ ನೀಡಿ ಈ ನೋಟ್ಸ ತಯರಿಸಲಾಗಿದೆ.

**ಸಮಾಜ ವಿಜ್ಞಾನ ಪ್ರಶ್ನೋತ್ತರ ಕೈಪಿಡಿ**

ಈ ಬಗ್ಗೆ ತಮ್ಮೆಲ್ಲರ ಸಲಹೆ, ಸೂಚನೆಗಳಿಗೆ ಮುಕ್ತವಾದ ಅವಕಾಶವಿದೆ

ವಂದನೆಗಳು



ನಿಮ್ಮೆಲ್ಲರ ಸ್ನೇಹಿತ
ಶ್ರೀ ಬಾಳೇಶ ಹತ್ತರಕಿ. ಸ.ಶಿ
ಸರಕಾರಿ ಪ್ರೌಢ ಶಾಲೆ ಹಿರನಾಗಾಂವ
ತಾ:ಬಸವಕಲ್ಯಾಣ ಜಿ:ಬೀದರ
ಮೊ ನಂ: 9972032339.
Email Id: ballappa57@gmail.com

# ಅಧ್ಯಾಯ–1
# ಭಾರತಕ್ಕೆ ಯುರೋಪಿಯನ್ನರ ಆಗಮನ

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರ ಯಾವಾಗ ವಶಪಡಿಸಿಕೊಂಡರು?
ಉತ್ತರ : 1453

2. ಭಾರತ ಮತ್ತು ಯುರೋಪ ನಡುವೆ ಹೊಸ ಜಲಮಾರ್ಗ ಕಂಡು ಹಿಡಿದವರು ಯಾರು?
ಉತ್ತರ : ವಾಸ್ಕೋಡಗಾಮ

3. ಪ್ಲಾಸಿ ಕದನ ಯಾವಾಗ ನಡೆಯಿತು?
ಉತ್ತರ : 1757

4. ಭಾರತಕ್ಕೆ ಬಂದ ಪೋರ್ಚುಗೀಸರ ಮೊಟ್ಟ ಮೊದಲ ವೈಸರಾಯ ಯಾರು?
ಉತ್ತರ : ಫ್ರಾನ್ಸಿಸ್ಕೋ ಡಿ ಆಲ್ಮೇಡ್

5. 'ನೀಲಿ ನೀರಿನ ನೀತಿ' ಜಾರಿಗೆ ತಂದ ಪೋರ್ಚುಗೀಸರ ವೈಸರಾಯ ಯಾರು?
ಉತ್ತರ : ಫ್ರಾನ್ಸಿಸ್ಕೋ ಅಲ್ಮೇಡ್

6. ಭಾರತದಲ್ಲಿ ಪೋರ್ಚುಗೀಸರ ಸಾಮ್ರಾಜ್ಯದ ನಿಜವಾದ ಸ್ಥಾಪಕ ಯಾರು?
ಉತ್ತರ : ಆಲ್ಫೋನ್ಸೊ–ಡಿ–ಅಲ್ಬುಕರ್ಕ

7. ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು ಡಚ್ಚರು ಯಾವಾಗ ಸ್ಥಾಪಿಸಿದರು?
ಉತ್ತರ : 1602

8. ಇಂಗ್ಲೀಷ ಈಸ್ಟ್ ಇಂಡಿಯಾ ಕಂಪನಿ ಯಾವಾಗ ಸ್ಥಾಪಿಸಲಾಯಿತು?
ಉತ್ತರ : ಸಾ.ಸ.1600 ಡಿಸೆಂಬರ್ 31

9. 'ದಸ್ತಕಗಳು' ಎಂದರೇನು?
ಉತ್ತರ : ಪರವಾನಿಗೆ ಪತ್ರ

10. ಬಂಗಾಳದಲ್ಲಿ ದ್ವಿ ಪ್ರಭುತ್ವ ಪದ್ಧತಿ ಯಾರು ಜಾರಿಗೆ ತಂದರು.
ಉತ್ತರ : ರಾಬರ್ಟ್ ಕ್ಲೈವ್

11. ಈಸ್ಟ್ ಇಂಡಿಯಾ ಕಂಪನಿಗೆ ದಿವಾನಿ ಹಕ್ಕನ್ನು ಯಾರು ನೀಡಿದರು?
ಉತ್ತರ : ಎರಡನೇ ಷಾ ಅಲಂ

12. ಭಾರತದಲ್ಲಿ ಫ್ರೆಂಚರ್ ರಾಜಧಾನಿ ಯಾವುದು?
ಉತ್ತರ : ಪಾಂಡಿಚೇರಿ

13. ಎರಡನೇ ಕರ್ನಾಟಿಕ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?
ಉತ್ತರ : ಪಾಂಡಿಚೇರಿ ಒಪ್ಪಂದ

14. ಮೂರನೇ ಕರ್ನಾಟಿಕ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?
ಉತ್ತರ : ಪ್ಯಾರಿಸ ಒಪ್ಪಂದ

15. ದಿವಾನಿ ಹಕ್ಕು ಎಂದರೇನು?
ಉತ್ತರ : ಭೂ ಕಂದಾಯ ವಸೂಲಿ ಮಾಡುವ ಹಕ್ಕು

16. ಕಾನ್‌ಸ್ಟಾಂಟಿ ನೋಪಲ್ ನಗರವನ್ನು ವಶಪಡಿಸಿಕೊಂಡವರು ಯಾರು?
ಉತ್ತರ : ಅಟೋಮನ ಟರ್ಕರು

17. ಅಸ್ಟ್ರೋಲೋಬ್ ಎಂದರೇನು?
ಉತ್ತರ : ನಕ್ಷತ್ರ ಉನ್ನತಿ ಮಾಪನ

18. ಯೂರೋಪಿಯನ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದವರು ಯಾರು?
ಉತ್ತರ : ಇಟಲಿಯ ವರ್ತಕರರು

19. ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿ ಯಾವುದು?
ಉತ್ತರ : ಕಾನ್‌ಸ್ಟಾಂಟಿ ನೋಪಲ್ ನಗರ

20. ಯೂರೋಪಿಯನ ವ್ಯಾಪಾರದ ಹೆಬ್ಬಾಗಿಲು ಯಾವುದು?
ಉತ್ತರ : ಕಾನ್‌ಸ್ಟಾಂಟಿ ನೋಪಲ್ ನಗರ

21. ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದವರು ಯಾರು?
ಉತ್ತರ : ಅರಬ್ಬರು

22. ಪೂರ್ವ ರೋಮನ್ ಸಾಮ್ರಾಜ್ಯದ ಮತ್ತೊಂದು ಹೆಸರೇನು?
ಉತ್ತರ : ಬೈಜಾಂಟೀನ್

23. ವಾಸ್ಕೋಡಗಾಮನು ಯಾವ ದೇಶದ ನಾವಿಕ?
ಉತ್ತರ: ಪೋರ್ಚುಗಲ್ ದೇಶದ ನಾವಿಕ

24. ವಾಸ್ಕೋಡಗಾಮನು ಭಾರತದ ಯಾವ ನಗರಕ್ಕೆ ಬಂದು ತಲುಪಿದನು?
ಉತ್ತರ : "ಕಾಪ್ಪಡ್"

25. ಭಾರತವನ್ನು ತೊರೆದ ಕೊನೆಯ ಯೂರೋಪಿಯನ್ನರು ಯಾರು?
ಉತ್ತರ : ಪೋರ್ಚುಗೀಸರು

26. ಪೋರ್ಚುಗೀಸರ ಆಡಳಿತ ಕೇಂದ್ರ ಯಾವುದು?
ಉತ್ತರ : ಗೋವಾ

27. ಡಚ್ಚರು ಯಾವ ದೇಶದವರು?
ಉತ್ತರ: ಹಾಲೆಂಡ್ ಅಥವಾ ನೆದರಲ್ಯಾಂಡ್ ದೇಶದವರು

## ಪ್ರಮುಖ ಯುದ್ಧಗಳು ಮತ್ತು ಒಪ್ಪಂದಗಳು

| ಕ್ರ. ಸಂ. | ಪ್ರಮುಖ ಯುದ್ಧಗಳು | ಇಸ್ವಿಗಳು | ಒಪ್ಪಂದಗಳು |
|---|---|---|---|
| 1 | 1ನೇ ಕರ್ನಾಟಕ ಯುದ್ಧ | 1746–48 | ಎಕ್ಸ್–ಲಾ–ಚಾಫೇಲ್ ಒಪ್ಪಂದ |
| 2 | 2ನೇ ಕರ್ನಾಟಕ ಯುದ್ಧ | 1749–54 | ಪಾಂಡಿಚೇರಿ ಒಪ್ಪಂದ |
| 3 | 3ನೇ ಕರ್ನಾಟಕ ಯುದ್ಧ | 1756–63 | ಪ್ಯಾರಿಸ್ ಒಪ್ಪಂದ |
| 4 | ಪ್ಲಾಸಿ ಕದನ | 1757 | – |
| 5 | ಬಕ್ಸಾರ ಕದನ | 1764 | – |

## ಪ್ರಮುಖ ಘಟನಾವಳಿಗಳು

| ಕ್ರ. ಸಂ. | ಪ್ರಮುಖ ಇಸ್ವಿಗಳು | ಪ್ರಮುಖ ಘಟನೆಗಳು |
|---|---|---|
| 1 | 1453 | ಅಟೋಮನ ಟರ್ಕರು ಕಾನಸ್ಟಾಂಟಿನೋಪಲ್ ನಗರ ವಶಪಡಿಸಿಕೊಂಡರು. |
| 2 | 1498 | ಪೋರ್ಚುಗಲ ನಾಯಕ ವಾಸ್ಕೋಡಿಗಾಮನು ಕೇರಳದ "ಕಾಪ್ಪಡ್" ಪ್ರದೇಶಕ್ಕೆ ಬಂದು ತಲುಪಿದನು. |
| 3 | 1510 | ಅಲ್ಫಾನ್ಸೋ ಡಿ. ಅಲ್ಬುಕರ್ಕ ಬಿಜಾಪುರದ ಸುಲ್ತಾನನಿಂದ ಗೋವಾ ವಶಪಡಿಸಿಕೊಂಡನು. |
| 4 | 1600 | ಇಂಗ್ಲೀಷ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ |
| 5 | 1602 | ಯುನೈಟೇಡ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ |
| 6 | 1664 | ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ |
| 7 | 1760 | ವಾಂಡಿವಾಷ ಕದನ |
| 8 | 1757 | ಪ್ಲಾಸಿ ಕದನ |
| 9 | 1764 | ಬಕ್ಸಾರ ಕದನ |
| 10 | 1765 | ರಾಬರ್ಟ ಕ್ಲೈವ್ ಬಂಗಾಳದಲ್ಲಿ ದ್ವಿಮುಖ ಸರ್ಕಾರ ಪದ್ಧತಿ ಜಾರಿಗೆ ತಂದನು. |

ಪ್ರಸ್ತುತಿ : ಶ್ರೀ ಬಾಳೇಶ ಹತ್ತರಕಿ, ಸ.ಶಿ., ಸ.ಪ್ರೌ.ಶಾಲೆ, ಹಿರನಾಗಾಂವ ತಾ.ಬಸವಕಲ್ಯಾಣ, ಜಿ:ಬೀದರ, ಮೊ.ನಂ.9972032339

## ವ್ಯಕ್ತಿ ವಿಶೇಷಗಳು

| ಕ್ರ. ಸಂ. | ವ್ಯಕ್ತಿಗಳು | ವಿಶೇಷಗಳು |
|---|---|---|
| 1 | ವಾಸ್ಕೋಡಿ ಗಾಮಾ | 1498 ರಲ್ಲಿ ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿದನು. |
| 2 | ಫ್ರಾನ್ಸಿಸ್ಕೋ ಅಲ್ಮೇಡ್ | * ಭಾರತಕ್ಕೆ ಬಂದ ಮೊದಲ ಪೋರ್ಚುಗೀಸರ ವೈಸರಾಯ<br>* 'ಜಲ ನೀರಿನ ನೀತಿ' ಜಾರಿಗೆ ತಂದನು. |
| 3 | ಆಲ್ಫಾನ್ಸೋ–ಅಲಬುಕರ್ಕ | ಭಾರತದಲ್ಲಿ ಪೋರ್ಚುಗೀಸರ ಸಾಮ್ರಾಜ್ಯದ ನಿಜವಾದ ಸ್ಥಾಪಕ |
| 4 | ಜಹಾಂಗೀರ | ಬ್ರಿಟಿಷರಿಗೆ ಭಾರತದಲ್ಲಿ ಮೊದಲ ವ್ಯಾಪಾರಿ ಕೋಠಿ ತೆರೆಯಲು ಅನುಮತಿ ನೀಡಿದನು. |
| 5 | ಸರ್ ಥಾಮಸ ರೋ | ಇಂಗ್ಲೇಂಡಿನ ರಾಜ 1ನೇ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು. |
| 6 | ಡುಪ್ಲೆ | ಫ್ರೆಂಚರ್ ಪ್ರಸಿದ್ಧ ಗವರ್ನರ ಜನರಲ್ |
| 7 | ಲಾಬೋರ್ಡಿನಾ | ಫ್ರೆಂಚ್ ಸೇನಾ ಅಧಿಕಾರಿ ಮತ್ತು 1ನೇ ಕರ್ನಾಟಿಕ ಯುದ್ಧದಲ್ಲಿ ಮದ್ರಾಸ್ ವಶಪಡಿಸಿಕೊಂಡನು. |
| 8 | ಹೆಕ್ಟರ್ ಮನ್ರೊ | ಬಕ್ಸಾರ ಕದನದಲ್ಲಿ ಮೀರ ಖಾಸೀಂನ ಸಂಯುಕ್ತ ಸೈನ್ಯವನ್ನು ಸೋಲಿಸಿದನು. |
| 9 | ಮೀರ ಜಾಫರ | * ಸಿರಾಜು ಉದ್ದೌಲನ ಸೇನಾಪತಿ<br>* ಬ್ರಿಟೀಷರ ಗೆಲುವಿಗಾಗಿ ಸಹಕರಿಸಿದ |

## ಅಧ್ಯಾಯ–1
## ಭಾರತಕ್ಕೆ ಯುರೋಪಿಯನ್ನರ ಆಗಮನ

### II. ಎರಡು ಅಂಕದ ಪ್ರಶ್ನೋತ್ತರಗಳು.

1. ಪ್ರಾಚೀನ ಕಾಲದಿಂದಲೂ ಭಾರತ ಮತ್ತು ಯೂರೋಪಿನ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು? ಯೂರೋಪಿಗೆ ರಫ್ತಾಗುತ್ತಿದ್ದ ಸಾಂಬಾರು ಪದಾರ್ಥಗಳಾವುವು?

* ಕಾನಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು.
* ಮೆಣಸು, ಜಿರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ

2. ಮಧ್ಯಕಾಲದಲ್ಲಿ ಭಾರತ ಮತ್ತು ಯೂರೋಪ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?

* ಮಧ್ಯ ಕಾಲದಲ್ಲಿಯು ಯೂರೋಪ್ ಮತ್ತು ಭಾರತ ದೇಶಗಳ ನಡುವೆ ವ್ಯಾಪಾರ ಮುಂದುವರಿಯಿತು.
* ಮಧ್ಯಕಾಲದಲ್ಲಿ ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವರೋಮನ್ ಸಾಮ್ರಾಜ್ಯದ ರಾಜಧಾನಿಯಾದ ಕಾನಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು.
* ಅಲ್ಲಿಂದ ಇಟಲಿಯ ವರ್ತಕರು ಅವುಗಳನ್ನು ಕೊಂಡು ಯೂರೋಪಿನ ದೇಶಗಳಲ್ಲಿ ಮಾರುತ್ತಿದ್ದರು.
* ಕಾನಸ್ಟಾಂಟಿ ನೋಪಲ್ ನಗರವು ಅಂತರರಾಷ್ಟೀಯ ಸರಕು ವಿನಿಮಯ ಕೇಂದ್ರ ಮತ್ತು ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದು ಪರಿಗಣಿಸಲ್ಪಟ್ಟಿತು.

3. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿಯಲು ಸಹಾಯಕವಾದ ಅಂಶಗಳನ್ನು ಚರ್ಚಿಸಿರಿ.

* ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು
* ಭಾರತದ ಸಾಂಬಾರು ಪದಾರ್ಥಗಳಿಗಿದ್ದ ಅಪಾರ ಬೇಡಿಕೆ
* ನಾವಿಕರ ದಿಕ್ಸೂಚಿ, ಆಸ್ಟ್ರೋಲೋಬ,ಸಿಡಿಮದ್ದು.
* ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್, ದೇಶಗಳ ರಾಜರು ಭಾರತಕ್ಕೆ ಸಮುದ್ರ ಮಾರ್ಗ ಹುಡಕಲು ನಾವಿಕರನ್ನು ಪ್ರೋತ್ಸಾಹಿಸಿದರು.

4. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿದವರು ಯಾರು? ಅವನು ಎಲ್ಲಿಗೆ ತಲುಪಿದನು?

* ಪೋರ್ಚುಗಲ್ ನಾವಿಕ ವಾಸ್ಕೋಡಿಗಾಮ್
* ಸಾ.ಸ 1498ರಲ್ಲಿ ಇತ ಭಾರತದ ಪಶ್ಚಿಮದ ಕರಾವಳಿಯ ತೀರದ ಕಲ್ಲಿಕೋಟೆ ಸಮೀಪದ " ಕಾಪ್ಪಡ್" ಎಂಬಲ್ಲಿಗೆ ಬಂದು ತಲುಪಿದನು.

5. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರನ್ನು ಪಟ್ಟಿ ಮಾಡಿರಿ?

* ಪೋರ್ಚುಗೀಸರು
* ಡಚ್ಚರು
* ಬ್ರಿಟೀಷರು
* ಫ್ರೆಂಚರು

6. ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ ಯಾರು? ಅವನು ಯಾವ ನೀತಿಯನ್ನು ಜಾರಿಗೆ ತಂದನು?

* ಫ್ರಾನ್ಸಿಸ್ಕೊ ಡಿ ಆಲ್ಮೇಡ್
* "ನೀಲಿ ನೀರಿನ ನೀತಿಯನ್ನು" ಜಾರಿಗೆ ತಂದನು.

7. "ನೀಲಿ ನೀರಿನ ನೀತಿ" ಎಂದರೇನು? ಅದನ್ನು ಯಾರು ಜಾರಿಗೆ ತಂದರು?

* ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವದೇ ನೀಲಿ ನೀರಿನ ನೀತಿಯಾಗಿದೆ.
* ಇದನ್ನು ಫ್ರಾನ್ಸಿಸ್ಕೊ ಡಿ ಆಲ್ಮೇಡ್ ಜಾರಿಗೆ ತಂದನು

8. ಭಾರತದಲ್ಲಿ ಪೋರ್ಚುಗೀಸರ ಸಾಮ್ರಾಜ್ಯದ ನಿಜವಾದ ಸ್ಥಾಪಕ ಯಾರು? ಆತನ ಸಾಧನೆ ಏನು?

* ಅಲ್ಫೋನ್ಸೊ ಆಲ್ಬುಕರ್ಕ್
* ಇವನು ಸಾ.ಸ 1510 ರಲ್ಲಿ ಬಿಜಾಪೂರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವನ್ನಾಗಿ ಮಾಡಿದನು.

9. ಡಚ್ಚರ ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ ಯಾವುದು? ಮತ್ತು ಅವರ ವ್ಯಾಪಾರಿ ಕೋಠಿಗಳಾವುವು?

* ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ 1602 ರಲ್ಲಿ ಸ್ಥಾಪನೆಯಾಯಿತು
* ಸೂರತ್, ಬ್ರೋಚ್, ಕ್ಯಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲಿಪಟ್ಟಣ, ಚಿನ್ಸೂರ್.

10. ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ ಯಾವುದು? ಮತ್ತು ಈ ಕಂಪನಿಗೆ ಪೂರ್ವದ ದೇಶಗಳಲ್ಲಿ ವ್ಯಾಪಾರ ನಡೆಸಲು ಪರವಾನಿಗೆಯನ್ನು ನೀಡಿದವರು ಯಾರು?

* ಸಾ.ಶ 1600 ಡಿಸೆಂಬರ 31

* ಇಂಗ್ಲೆಂಡಿನ ಎಲಿಜಬೆತ್

11. ಇಂಗ್ಲೀಷ ಈಸ್ಟ್ ಇಂಡಿಯಾ ಕಂಪನಿಯು ಔಪಚಾರಿಕವಾಗಿ ವ್ಯಾಪಾರ ಆರಂಭಿಸಿದ್ದು ಯಾವಾಗ? ಈ ಕಂಪನಿಗೆ ಭಾರತದಲ್ಲಿ ಮೊದಲ ಫ್ಯಾಕ್ಟರಿ ತೆರೆಯಲು ಫರ್ಮಾನು ನೀಡಿದವರು ಯಾರು?

* ಸಾ. ಶ 1613
* ಮೊಗಲ್ ಸಾಮ್ರಾಟ ಜಹಾಂಗಿರ್

12. ಬ್ರಿಟಿಷರು ಭಾರತದಲ್ಲಿ ಸ್ಥಾಪಿಸಿದ ಎರಡು ಕೋಟೆಗಳನ್ನು ಬರೆಯಿರಿ?

* ಮದ್ರಾಸನಲ್ಲಿ ಸೆಂಟ್ ಜಾರ್ಜ್ ಪೋರ್ಟ
* ಕಲ್ಕತ್ತಾ ಸಮೀಪದ ಪೋರ್ಟ್ ವಿಲಿಯಂ ಕೋಟೆ

13. ಪ್ರೆಂಚ್ ಈಸ್ಟ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ ಮತ್ತು ಅವರ ಪ್ರಥಮ ದಾಸ್ತಾನು ಮಳಿಗೆ (ಕೋಠಿ) ಯಾವುದು?

* ಸಾ.ಸ 1664
* ಸೂರತ್

14. ಪ್ರೆಂಚರ ಮಹತ್ವಾಕಾಂಕ್ಷಿ ಗವರ್ನರ್ ಯಾರು ? ಅವನು ಪ್ರೆಂಚರ್ ಅಧಿಪತ್ಯವನ್ನು ಎಲ್ಲಿ ಸ್ಥಾಪಿಸಲು ಹವಣಿಸಿದನು?

* ಡೂಪ್ಲೆ
* ದಕ್ಷಿಣ ಭಾರತದ ಮೇಲೆ

15. ಮೊದಲ ಕರ್ನಾಟಿಕ ಯುದ್ಧವನ್ನು ವಿವರಿಸಿರಿ?

* ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು.
* ಬ್ರಿಟಿಷರು ಅನ್ವರುದ್ದೀನನ ಮೊರೆ ಹೋದರು ಅನ್ವರುದ್ದೀನನ ಸೈನ್ಯ ಸೋತಿತು.
* ಲಾಬೋರ್ಡಿನನು ಬ್ರಿಟಿಷರಿಂದ ಹಣ ಪಡೆದು ಮದ್ರಾಸನ್ನು ಬಿಟ್ಟುಕೊಟ್ಟನು.
* ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯಲು ವಿಫಲ ಪ್ರಯತ್ನವನ್ನು ನಡೆಸಿದನು ಅಂತಿಮವಾಗಿ

ಯೂರೋಪಿನಲ್ಲಿ ನಡೆದ “ಏಕ್ಸ್ –ಲಾ–ಚಾಫೆಲ್” ಒಪ್ಪಂದದೊಂದಿಗೆ ಈ ಯುದ್ಧ ಮುಕ್ತಾಯವಾಯಿತು.

16. ಎರಡನೇ ಕರ್ನಾಟಿಕ ಯುದ್ಧವನ್ನು ವಿವರಿಸಿರಿ?

* ಫ್ರೆಂಚರು ಅಸಫ್ ಜಾನ ಮಗನಾದ ಸಲಾಬತ್‌ಜಂಗನನ್ನು ಹೈದಾರಾಬಾದಿನ ನಿಜಾಮನಾಗಿ ಮಾಡಿದರು. ಆತನ ರಕ್ಷಣೆಗಾಗಿ ಬುಸ್ಸಿ ಎಂಬ ಅಧಿಕಾರಿಯನ್ನು ನೇಮಿಸಿದರು.
* ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನ್ನು ಕರ್ನಾಟಿಕ್‌ನ ನವಾಬನಾಗಿದ್ದನು.
* ರಾಬರ್ಟ್ ಕ್ಲೈವ್‌ನು ಕರ್ನಾಟಿಕ ರಾಜಧಾನಿ ಆರ್ಕಾಟಿನ ಮೇಲೆ ಅಕ್ರಮಣ ಮಾಡಿ ಫ್ರೆಂಚರನ್ನು ಮತ್ತು ಚಂದಾಸಾಹೇಬನನು ಸೋಲಿಸಿ ಕೊಂದನು.
* ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ಕರ್ನಾಟಿಕನ ನವಾಬನನ್ನಾಗಿ ಮಾಡಿದರು.
* ಈ ಯುದ್ಧವು “ಪಾಂಡಿಚೇರಿ” ಒಪ್ಪಂದದೊಂದಿಗೆ ಮುಕ್ತಾಯವಾಯಿತು.
* ಈ ಯುದ್ಧವು ಬ್ರಿಟಿಷರಿಗೆ ಪ್ರತಿಷ್ಠೆ ಹಾಗೂ ಫ್ರೆಂಚರಿಗೆ ಹಿನ್ನಡೆಯಾಯಿತು.

17. ಮೂರನೇ ಕರ್ನಾಟಿಕ ಯುದ್ಧವನ್ನು ವಿವರಿಸಿರಿ?

* ಫ್ರೆಂಚರ ಕೌಂಟ–ಡಿ–ಲಾಲಿಯು 1760ರಲ್ಲಿ ಬ್ರಿಟಿಷರ್ ವಾಂಡಿವಾಷ ಕೋಟೆಗೆ ಮುತ್ತಿಗೆ ಹಾಕಿದನು.
* ಬ್ರಿಟಿಷ್ ಸೇನಾಧಿಕಾರಿ ಸರ್ ಐರ್ ಕೂಟನು ಫ್ರೆಂಚರನ್ನು ಸೋಲಿಸಿದನು.
* ಬುಸ್ಸಿಯನ್ನು ಸೆರೆಹಿಡಿದನು.
* ಸರ್ ಐರ್ ಕೂಟ ಫ್ರೆಂಚರ ರಾಜಧಾನಿ ಪಾಂಡಿಚೇರಿಗೂ ಮುತ್ತಿಗೆ ಹಾಕಿದನು ಅಲ್ಲಿ ಲಾಲಿಯು ಶರಣನಾದನು.
* ಪ್ಯಾರಿಸ ಒಪ್ಪಂದದೊಂದಿಗೆ ಈ ಯುದ್ಧ ಮುಕ್ತಾಯವಾಯಿತು.

18. ಕರ್ನಾಟಿಕ ಯುದ್ಧಗಳ ಪರಿಣಾಮಗಳನ್ನು ಬರೆಯಿರಿ?

* ಫ್ರೆಂಚರು ಭಾರತದಲ್ಲಿನ ತಮ್ಮ ಎಲ್ಲಾ ನೆಲೆಗಳನ್ನು ಕಳೆದುಕೊಂಡರು.
* 1763 ರಲ್ಲಿ “ಪ್ಯಾರಿಸ ಒಪ್ಪಂದದ” ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು.

19. ಪ್ಲಾಸಿ ಕದನದ ಕಾರಣ & ಪರಿಣಾಮ ಬರೆಯಿರಿ?

**ಕಾರಣಗಳು :–**

* ದಸ್ತಕಗಳ ದುರುಪಯೋಗ
* ನವಾಬನ ಅನುಮತಿ ಇಲ್ಲದೆ ಬ್ರಿಟೀಷರು ಪೋರ್ಟ್ ವಿಲಿಯಂ ಕೋಟೆ ಬಲಪಡಿಸಿಕೊಂಡದ್ದು.
* ಕಪ್ಪು ಕೋಣೆ ದುರಂತ.

**ಪರಿಣಾಮ :-**

* ಸಿರಾಜ್ –ಉದ್ –ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.
* ಭಾರತೀಯರಲಿದ್ದ ಅನೈಕ್ಯತೆ, ಅಸಂಘಟನೆ ಹಾಗೂ ಲೋಭಿತನವನ್ನು ಪ್ರದರ್ಶಿಸಿತು.
* ಮೀರ್ ಜಾಫರ್ ಬಂಗಾಳದ ನವಾಬನಾದನು

20. ಬಕ್ಸಾರ ಕದನದ ಪರಿಣಾಮವೇನು?

* ಮೀರ ಖಾಸಿಂನ ಒಕ್ಕೂಟ ಸೈನ್ಯಕ್ಕೆ ಸೋಲಾಯಿತು.
* ಎರಡನೇ ಷಾ ಆಲಂ ಬ್ರಿಟೀಷರಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕುನ್ನು ನೀಡಿದನು.
* ಬ್ರಿಟಿಷ್‌ರು ಬಂಗಾಳ ಬಿಹಾರ, ಓರಿಸ್ಸಾದ ನಿಜವಾದ ಒಡೆಯರೆಂದು ಧೃಢವಾಯಿತು.

21. 'ದ್ವಿ ಪ್ರಭುತ್ವ' ಪದ್ಧತಿಯನ್ನು ವ್ಯಾಖ್ಯಾನಿಸಿರಿ.

* ರಾಬರ್ಟ ಕ್ಲೈವನು ಬಂಗಾಳದಲ್ಲಿ ದ್ವಿ ಪ್ರಭುತ್ವ ನೀತಿಯನ್ನು ಜಾರಿಗೆ ತಂದನು
* ಈ ಪದ್ದತಿಯಂತೆ ಬ್ರಿಟಿಷ್‌ರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದ್ದರು.
* ಆದರೆ ನವಾಬವನು ಆಡಳಿತ, ನ್ಯಾಯ ತೀರ್ಮಾನ, ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

*********ಮುಕ್ತಾಯ*********

# ಅಧ್ಯಾಯ-2
# ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಮೊದಲ ಆಂಗ್ಲೋ–ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?
ಉತ್ತರ : ಸಾಲ್‌ಬಾಯ್ ಒಪ್ಪಂದ

2. ಸಹಾಯಕ ಸೈನ್ಯ ಪದ್ದತಿಯನ್ನು ಯಾರು ಜಾರಿಗೆ ತಂದರು?
ಉತ್ತರ : ಲಾರ್ಡ್ ವೆಲ್ಲೆಸ್ಲಿ.

3. ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಯಾವಾಗ ಜಾರಿಗೆ ತಂದನು?
ಉತ್ತರ : 1798

4. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು?
ಉತ್ತರ : ಹೈದ್ರಾಬಾದ ಸಂಸ್ಥಾನ

5. ಎರಡನೇ ಆಂಗ್ಲೋ–ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?
ಉತ್ತರ : ಬೆಸ್ಸಿನ್ ಒಪ್ಪಂದ

6. ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಯಾವುದು?
ಉತ್ತರ : ಲಾಹೋರ್ ಒಪ್ಪಂದ

7. "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯನ್ನು ಜಾರಿಗೆ ತರಲಾದ ವರ್ಷ ಯಾವುದು?
ಉತ್ತರ : 1848

8. "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿಯನ್ನು ಯಾರು ಜಾರಿಗೆ ತಂದರು?
ಉತ್ತರ : "ಲಾರ್ಡ್ ಡಾಲ್ ಹೌಸಿ"

9. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿ ಕೊಂಡವರು ಯಾರು?
ಉತ್ತರ : "ಲಾರ್ಡ್ ಡಾಲ್ ಹೌಸಿ"

10. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ರಾಜ್ಯಗಳಾವುವು?
ಉತ್ತರ : ಹೈದ್ರಾಬಾದ್ ಸಂಸ್ಥಾನ, ಮೈಸೂರು,ಔದ, ತಂಜಾವೂರು,ಮರಾಠ,ಆರ್ಕಾಟ್,
ಪೂನಾ,ಬಿರಾರ್,ಗ್ವಾಲಿಯಾರ್

11. ಲಾರ್ಡ್ ವೆಲ್ಲೆಸ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಲು ಕಾರಣವೇನು?
ಉತ್ತರ : ಇವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿದ್ದರಿಂದ

12. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗೆ ಒಳಪಟ್ಟ ರಾಜ್ಯಗಳಾವುವು?
ಉತ್ತರ : ಸತಾರ, ಝಾನ್ಸಿ, ಜೈಪುರ, ಉದಯಪುರ, ನಾಗಪುರ, ಸಂಬಲ್‌ಪುರ,

| | |
|---|---|
| 13. ಪಂಜಾಬಿನ ಮೇಲೆ ಬ್ರಿಟಿಷರು ನೇರ ಆಳ್ವಿಕೆಯನ್ನು ಹೇರಲು ಹೋರಟಾಗ ಪ್ರತಿಭಟಿಸಿದವರು ಯಾರು ?<br>ಉತ್ತರ : ಲಾಹೋರನಲ್ಲಿ –ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮುಲ್ತಾನಿನಲ್ಲಿ – ಮೂಲರಾಜನು | |
| 14. ಡಾಲ್ ಹೌಸಿಯು ತನ್ನ ವಿಸ್ತರಣಾ ನೀತಿಯನ್ನು ಯಾವ ನೀತಿಯ ಮೂಲಕ ಸಾಧಿಸಿದನು?<br>ಉತ್ತರ : ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ | |
| 15. ಬ್ರಿಟಿಷರು ಭಾರತದಲ್ಲಿ ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದ ನೀತಿ ಯಾವುದು?<br>ಉತ್ತರ : ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ | |

## ಆಂಗ್ಲೋ–ಮರಾಠಾ ಯುದ್ಧಗಳು

| ಕ್ರ.ಸಂ | ಯುದ್ಧಗಳು | ವರ್ಷ | ಒಪ್ಪಂದ |
|---|---|---|---|
| 1 | 1 ಆಂಗ್ಲೋ–ಮರಾಠಾ ಯುದ್ಧ | 1775–1782 | ಸಾಲಬಾಯ್ ಒಪ್ಪಂದ |
| 2 | 2 ಆಂಗ್ಲೋ ಮರಾಠಾ ಯುದ್ಧ | 1803–1805 | ಬೆಸ್ಸಿನ್ ಒಪ್ಪಂದ |
| 3 | 3 ಆಂಗ್ಲೋ ಮರಾಠಾ ಯುದ್ಧ | 1817–18 | – |

## ಇಂಗ್ಲೀಷರ ಪ್ರಮುಖ ನೀತಿಗಳು

| ಕ್ರ.ಸಂ | ನೀತಿಗಳು | ವರ್ಷ | ವ್ಯಕ್ತಿಗಳು |
|---|---|---|---|
| 1 | ಸಹಾಯಕ ಸೈನ್ಯ ಪದ್ಧತಿ | 1798 | ಲಾರ್ಡ ವೆಲ್ಲಸ್ಲಿ |
| 2 | ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ | 1848 | ಲಾರ್ಡ ಡಾಲ್ ಹೌಸಿ |

# ಅಧ್ಯಾಯ -2
# ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತೀಯ ರಾಜ್ಯಗಳನ್ನು ಉಪಾಯವಾಗಿ ಕಬಳಿಸಿದ ಬ್ರಿಟಿಷರ ಎರಡು ನೀತಿಗಳಾವುವು?

ಉತ್ತರ:- 1) ಸಹಾಯಕ ಸೈನ್ಯ ಪದ್ಧತಿ
2) ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ

2. ಸಹಾಯಕ ಸೈನ್ಯ ಪದ್ಧತಿಯ ನಿಭಂದನೆಗಳಾವುವು?

* ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ಲಾರ್ಡ ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು.
* ಈ ಒಪ್ಪಂದಕ್ಕೆ ಒಳಗಾದ ರಾಜರು ಬ್ರಿಟಿಷ್ ಸೈನ್ಯದ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕಾಗಿತ್ತು
* ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕಾಗಿತ್ತು.
* ಬ್ರಿಟಿಷರ ಅನುಮತಿ ಇಲ್ಲದೇ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನುರನ್ನು ನೇಮಿಸಿಕೊಳ್ಳವಂತಿರಲಿಲ್ಲ
* ಸೈನ್ಯದ ವೆಚ್ಚವನ್ನು ದೇಶಿಯ ರಾಜರೇ ನೋಡಿಕೊಳ್ಳಬೇಕಾಗಿತ್ತು
* ಭಾರತೀಯ ರಾಜರು ಯುದ್ಧ ಅಥವಾ ಸಂಧಾನ ಮಾಡಿಕೊಳ್ಳುವುದಕ್ಕೆ ಗವರ್ನರ್ ಜನರಲ್ ಅನುಮತಿ ಬೇಕಿತ್ತು.
* ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುತ್ತಿತ್ತು.
* ದೇಶಿಯ ರಾಜ್ಯರು ಯುದ್ಧ ಮತ್ತು ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ ಜನರಲ್ ಅನುಮತಿ ಪಡೆಯಬೇಕಾಗಿತ್ತು

3. ಬ್ರಿಟಿಷರ ಅಧಿಕಾರ ವಿಸ್ತರಣೆಯಲ್ಲಿ "ದತ್ತು ಮಕ್ಕಳಿಗೆ ಹಕ್ಕಿಲ್ಲ" ಎಂಬ ನೀತಿ ಹೇಗೆ ಸಹಕಾರಿಯಾಯಿತು?

* ಲಾರ್ಡ ಡಾಲ್ ಹೌಸಿ 1848 ರಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ ಜಾರಿಗೆ ತಂದನು.
* ಈ ನೀತಿಯ ಪ್ರಕಾರ "ಭಾರತೀಯ ರಾಜರು ಮಕ್ಕಳಿಲ್ಲದೇ ಮೃತರಾದರೆ ಅವರು ದತ್ತು ತೆಗೆದುಕೊಂಡಿದ್ದ ಪುತ್ರರರಿಗೆ ಉತ್ತಾರಾಧಿಕಾರತ್ವದ ಹಕ್ಕಿರಲಿಲ್ಲ"
* ಇಂತಹ ರಾಜ್ಯಗಳು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.
* ಈ ನೀತಿಗೆ ಒಳಪಟ್ಟ ರಾಜ್ಯಗಳೆಂದರೆ-ಸತಾರಾ, ಜೈಪುರ, ಸಂಬಲಪುರ್, ಉದಯಪುರ, ಝಾನ್ಸಿ,ನಾಗಪುರ

4. ಮೊದಲ ಆಂಗ್ಲೊ-ಮರಾಠ ಯುದ್ಧಕ್ಕೆ ಕಾರಣಗಳೇನು?

* ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್‌ನ ಮರಣದ ನಂತರ ಅವನ ತಮ್ಮ ನಾರಾಯಣರಾಯನು ಪೇಶ್ವೆ ಸ್ಥಾನಕ್ಕೆ ಬಂದನು
* ಆದರೆ ರಘುನಾಥರಾಯನಿಂದ ಪೇಶ್ವೆ ನಾರಾಯಣರಾಯನ ಕೊಲೆಯಾಯಿತು.
* ಪೇಶ್ವೆ ಸ್ಥಾನದ ಕಲಹದಲ್ಲಿ ನಾನಾ ಫಡ್ನವೀಸ್‌ನ ನೇತೃತ್ವದಲ್ಲಿ ನಾರಾಯಣರಾಯನ ಮಗ ಎರಡನೇ ಮಾಧವರಾವನಿಗೆ ಮರಾಠರು ಪಟ್ಟಕಟ್ಟಿದರು.
* ರಘೋಬನು ಬ್ರಿಟಿಷರ ಬೆಂಬಲವನ್ನು ಕೋರಿದನು.
* ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು.
* ಬ್ರಿಟಿಷರ ಮತ್ತು ಮರಾಠರ ನಡುವೆ ಯುದ್ಧ ನಡೆದು ಕೊನೆಗೆ ಸಾಲ್‌ಬಾಯ್ ಒಪ್ಪಂದದೊಂದಿಗೆ ಕೊನೆಗೊಂಡಿತು

5. ಎರಡನೇ ಆಂಗ್ಲೋ-ಮರಾಠಾ ಯುದ್ಧವನ್ನು ವಿವರಿಸಿರಿ?

* ಮರಾಠರ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣ.
* ಹೋಳ್ಕರ ಮನೆತನದ ಯಶವಂತರಾವ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್‌ರಾವ ಹಾಗೂ ಪೇಶ್ವೆ ಎರಡನೇ ಬಾಜಿರಾವ ಇನ್ನೊಂದು ಕಡೆಗಿದ್ದರು.
* ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು
* ಇದು ಲಾರ್ಡ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ದೊರೆಯಿತು.
* ಪೇಶ್ವೆಯು "ಬಸ್ಸಿನ್ ಒಪ್ಪಂದಕ್ಕೆ" ಸಹಿ ಹಾಕುವ ಮೂಲಕ ಸಹಾಯಕ ಸೈನ್ಯಪದ್ಧತಿಯನ್ನು ಒಪ್ಪಿದನು.
* ಈ ಒಪ್ಪಂದವನ್ನು ಅನೇಕ ಮರಾಠ ನಾಯಕರು ವಿರೋಧಿಸಿದರು.
* ಎಲ್ಲಾ ನಾಯಕರನ್ನು ಲಾರ್ಡ ವೆಲ್ಲೆಸ್ಲಿ ಅನೇಕ ಯುದ್ಧಗಳಲ್ಲಿ ಸೋಲಿಸಿದನು.

6. ಮೂರನೇ ಆಂಗ್ಲೋ-ಮರಾಠಾ ಯುದ್ಧವನ್ನು ವಿವರಿಸಿರಿ?

* ಮರಾಠರ ಮನೆತನಗಳು ತಮ್ಮ ಘನತೆ ಹೆಚ್ಚಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು.
* ಮರಾಠರ ಪೇಶ್ವೆ ಕೂಡಾ ಬ್ರಿಟಿಷ್‌ರ ನಿಯಂತ್ರಣದಿಂದ ಪಾರಲಾಗಲು ಹವಣಿಸುತ್ತಿದ್ದನು.
* ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು.
* ನಾಗಪುರದ ಅಪ್ಪಾಸಾಹೇಬ & ಮಲ್ಹಾರರಾವ ಹೋಳ್ಕರ ಕೂಡಾ ಬ್ರಿಟಿಷರ ವಿರುದ್ಧ ದಂಗೆ ಎದ್ದು ಬ್ರಿಟಿಷರ ಕೈಯಲ್ಲಿ ಸೋತರು.
* ಎರಡನೇ ಬಾಜೀರಾವನು ಬ್ರಿಟಿಷರ ವಿರುದ್ಧ ಕೋರೆಗಾವ್ ಮತ್ತು ಅಷ್ಟಿ ಯುದ್ಧದಲ್ಲಿ ಸೋತು ಶರಣಾದನು
* ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜೀರಾಯನಿಗೆ ವಿಶ್ರಾಂತಿ ವೇತನ ನೀಡಿದರು.

## ಅಧ್ಯಾಯ-3
## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

### I. ಒಂದು ಅಂಕದ ಪ್ರಶ್ನೋತ್ತರಗಳು.

1. ಭಾರತದ ಯಾವ ಪರಿಸ್ಥಿಯನ್ನು ಬ್ರಿಟಿಷರು ತಮ್ಮ ರಾಜಕೀಯ ಏಳಿಗೆಗೆ ಬಳಸಿಕೊಂಡರು?
ಉತ್ತರ : ನೂರಾರು ರಾಜಮನೆತನಗಳಲ್ಲಿ ಹಂಚಿ ಹೋಗಿದ್ದ ಭಾರತ

2. ಬ್ರಿಟಿಷರು ಭಾರತವನ್ನು ರಾಜಕೀಯವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡ ನಂತರ ಭಾರತವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಯಾವ ವ್ಯವಸ್ಥೆಯನ್ನು ಜಾರಿಗೆ ಗೊಳಿಸಿದರು?
ಉತ್ತರ: ಏಕರೂಪ ರಾಜಕೀಯ ವ್ಯವಸ್ಥೆ ಮತ್ತು ಏಕರೂಪ ಆಡಳಿತ ವ್ಯವಸ್ಥೆ

3. ಭಾರತದಲ್ಲಿ ನಾಗರೀಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು?
ಉತ್ತರ: ಲಾರ್ಡ್ ಕಾರ್ನ್‌ವಾಲಿಸ್

4. ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆಗೊಳಿಸಲಾದ ವರ್ಷ ಯಾವುದು?
ಉತ್ತರ: 1773

5. ರೆಗ್ಯುಲೆಟಿಂಗ್ ಕಾಯ್ದೆಯನ್ನು ಜಾರಿಗೆ ತೆರಲು ಕಾರಣ?
ಉತ್ತರ: ಭ್ರಷ್ಟಾಚಾರದ ಮೇಲೆ ನಿಯಂತ್ರಣ ಹೇರುವದು.

6. ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯು ಭ್ರಷ್ಟ ಎಂದು ಪ್ರತಿಪಾದಿಸಿದವನು?
ಉತ್ತರ: ಲಾರ್ಡ್ ಕಾರ್ನ್‌ವಾಲಿಸ್.

7. ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯವನ್ನು ಸ್ಥಾಪಿಸಿದವನು ಯಾರು?
ಉತ್ತರ: ವಶಿನ್ ಹೆಸ್ಟಿಂಗ್ಸ್

8. ಬ್ರಿಟಿಷರ್ ಕಾಲದ ದಿವಾನಿ ಅದಾಲತ್ ಯಾವ ಬಗೆಯದಾಗಿತ್ತು?
ಉತ್ತರ: ನಾಗರೀಕ ನ್ಯಾಯಾಲಯ

9. ಫೌಜದಾರಿ ಅದಾಲತ್ ಯಾವ ಬಗೆಯ ನ್ಯಾಯಾಲಯವಾಗಿತ್ತು?
ಉತ್ತರ: ಅಪರಾಧ ನ್ಯಾಯಾಲಯ

10. ಭಾರತದಲ್ಲಿ ಪ್ರಥಮತ: ವ್ಯವಸ್ಥಿತವಾದ ಪೋಲಿಸ ವಿಭಾಗವನ್ನು ಅಸ್ತಿತ್ವಕ್ಕೆ ತಂದವರು?
ಉತ್ತರ: ಕಾರ್ನ್‌ವಾಲೀಸ್.

11. ಸೂಪರಿಟೆಂಡೆಂಟ್ ಆಫ್ ಪೋಲಿಸ ಹುದ್ದೆಯನ್ನು ಸೃಷ್ಟಿಸಿದವನು ಯಾರು?
ಉತ್ತರ: ಕಾರ್ನ್‌ವಾಲೀಸ್

12. ಬ್ರಿಟೀಷರು ಭಾರತದಲ್ಲಿ ಪೋಲಿಸ ಕಾಯ್ದೆ ಜಾರಿಗೆಗೊಳಿಸಿದ ವರ್ಷ ಯಾವುದು?
ಉತ್ತರ: 1861

13. ಬ್ರಿಟಿಷರು ಸೈನ್ಯದಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ?
ಉತ್ತರ: ಸುಬೇದಾರ

14. ಪೀಲ್ ಎಂಬುವರ ನೇತೃತ್ವದ ಸಮಿತಿಯ ಶಿಫಾರಸ್ಸುಗಳೇನು?
ಉತ್ತರ: ಬ್ರಿಟೀಷ್ ಸೈನಿಕ ವ್ಯವಸ್ಥೆಯ ಮುರು ವಿನ್ಯಾಸ್

15. ಖಾಯಂ ಜಮೀನ್ದಾರಿ ಪದ್ಧತಿಯನ್ನು ಮೊಟ್ಟ ಮೊದಲು ಎಲ್ಲಿ ಜಾರಿಗೆ ಜಾರಿಗೆಗೊಳಿಸಲಾಯಿತು?
ಉತ್ತರ: ಬಂಗಾಳ ಮತ್ತು ಬಿಹಾರ

16. ಖಾಯಂ ಜಮೀನ್ದಾರಿ ಪದ್ಧತೆಯಲ್ಲಿ ಭೂ ಮಾಲಿಕಯಾರಾಗಿದ್ದರು?
ಉತ್ತರ: ಜಮೀನ್ದಾರು

17. ಬ್ರಿಟೀಷರು ತಮಗೆ ನೆರವಾಗಲು ಸೃಷ್ಟಿಸಿದ ಸಾಮಾಜಿಕ ವರ್ಗ ಯಾವುದು?
ಉತ್ತರ: ಜಮೀನ್ದಾರು

18. ಭಾರತದ ರೈತರು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಬದುಕಿ ಸಾಲದಲ್ಲೇ ಸತ್ತರು ಎಂದು ಹೇಳಿದವರು?
ಉತ್ತರ: ಚಾಲ್ಸ್ ಮೆಟಕಾಫ್

19. ಮಹಲ್ವಾರಿ ಪದ್ಧತಿಯನ್ನು ಜಾರಿಗೆ ತಂದವರು?
ಉತ್ತರ: ಆರ್ ಎಂ. ಬರ್ಡ ಮತ್ತು ಜೇಮ್ಸ್

20. ಮಹಲ್ ಎಂದರೆ?
ಉತ್ತರ: ತಾಲ್ಲೂಕಾ ಎಂದರ್ಥ

21. ರೈತವಾರಿ ಪದ್ಧತಿಯನ್ನು ಜಾರಿಗೆ ತಂದವರು?
ಉತ್ತರ: ಅಲ್‌ಕ್ಸಾಂಡರ್ ರೀಡ್ 1792ರಲ್ಲಿ

22. ಅಲ್‌ಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ?
ಉತ್ತರ: ರೈತವಾರಿ ಪದ್ಧತಿ

23. ಮದ್ರರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೆಗೊಳಿಸಿದವರು?
ಉತ್ತರ: ಥಾಮಸ್ ಮನ್ರೋ 1801

24. ರೈತವಾರಿ ಪದ್ಧತಿಯಲ್ಲಿ ಭೂಮಿಯ ಮಾಲಿಕಯಾರಾಗಿದ್ದನು?
ಉತ್ತರ: ಭೂಮಿ ಉಳುಮೆ ಮಾಡುತ್ತಿದ್ದವನು

25. ಗರಿಷ್ಟ ಪ್ರಮಾಣದಲ್ಲಿ ರೈತರು ಸಾಲದ ಸುಳಿಗೆ ಸಿಲುಕಿದ್ದು ಯಾವ ಭೂ ಕಂದಾಯ ಪದ್ಧತಿಯಿಂದ?
ಉತ್ತರ: ರೈತವಾರಿ ಪದ್ಧತಿಯಿಂದ

26. ಭಾರತದಲ್ಲಿ ಆಧುನಿಕ ಶಿಕ್ಷಣಸ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಎಂದರೆ?
ಉತ್ತರ: ವಾರನ್ ಹೇಸ್ಟಿಂಗ್

27. ಕಲ್ಕತ್ತಾ ಮದರಸಾವನ್ನು ಪ್ರಾರಂಬಿಸಿದವರು ?
ಉತ್ತರ: ವಾರನ್ ಹೇಸ್ಟಿಂಗ್ಸ್

28. ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವರು?
ಉತ್ತರ: ಜೋನಾಥನ್ ಡಂಕನ್

29. ಭಾರತದಲ್ಲಿ ಬ್ರಿಟೀಷ್ ಶಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವನು?
ಉತ್ತರ: ಚಾರ್ಲ್ಸ್‌ಗ್ರಾಂಟ್

30. ಭಾರತದ ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆ ತಳಪದಿ ಯಾವ ವರದಿಯನ್ನು ನೀಡಿದವರು?
ಉತ್ತರ: ಮೆಕಾಲ್

31.ಬ್ರಿಟಿಷ್ ಶಿಕ್ಷಣದ ವಿಸ್ತರಣಗೆ ವಿಶೇಷ ಪ್ರೋತ್ಸಾಹ ದೊರೆತದ್ದು ಯಾವ ಗವರ್ನರ್ ಜನರಲ್ ಕಾಲದಲ್ಲಿ?
ಉತ್ತರ: ವಿಲಿಯಂ ಬೆಂಟಿಂಕನ

32. ಮೆಕಾಲ್ ವರದಿಯ ಪ್ರಮುಖ ಅಂಶ
ಉತ್ತರ: ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವುದು.

33. ಸರ್, ಚಾರ್ಲ್ಸ್‌ವುಡ್ಸನ್ ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಭಾರತದಲ್ಲಿ ನೂತನ ವಿಶ್ವವಿದ್ಯಾಲಗಳನ್ನು ಎಲ್ಲಿ ಸ್ಥಾಪಿಸಿದನು.
ಉತ್ತರ: ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸಗಳಲ್ಲಿ

34. ಈಸ್ಟ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು ಅಪರಾಧ ತೆರಿಗೆ ಎಂದು ಟೀಕಿಸಿದವರು
ಉತ್ತರ: ಎಡ್ಮಂಡ್ ಬರ್ಕನು

35. ಯಾವ ಕಾಯ್ದೆಯ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋಟನ್ನು ಸ್ಥಾಪಿಸಲಾಯಿತು?
ಉತ್ತರ: ರೇಗ್ಯಾಲೇಟಿಂಗ್ ಕಾಯ್ದೆ

36. ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬ್ರಿಟಿಪ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆ ವಿನಕ್ಕೆ ಅವರದೇ ಸ್ವಂತ ಹಕ್ಕಲ್ಲ ಎಂದು ಹೇಳಿದ ಕಾಯ್ದೆ ಯಾವುದು?
ಉತ್ತರ: 1784 ರ ಪಿಟ್ಸ್ ಇಂಡಿಯಾ ಕಾಯ್ದೆ

37. ಕ್ರೈಸ್ತ ಮಿಷನಗಳು ಭಾರತಕ್ಕೆ ಬರುವುದು, ಭಾಗದಲ್ಲಿ ಚರ್ಚಗಳ ಸ್ಥಾಪನೆ ಕ್ರೈಸ್ತ ಧರ್ಮದ ಪ್ರಚಾರ ಡಂಗೂ ಇಂಗ್ಲೀಷ್ ವಿದ್ಯಾಭಾಸದ ವಿಸ್ತರಣೆ ಸಾಧ್ಯಯಾವದ್ದು ಯಾವ ಚಾರ್ಟರ್ ಕಾಯ್ದೆಯಿಂದ?
ಉತ್ತರ: 1813 ರ ಚಾರ್ಟ್‌ರ್ ಕಾಯ್ದೆ

38. ಯಾವ ಚಾರ್ಟರ್ ಕಾಯ್ದೆಯಂತೆ ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಲಾಯಿತು?
ಉತ್ತರ: 1833 ರ ಚಾರ್ಟರ್ ಕಾಯ್ದೆ

39.ಭಾರತದಲ್ಲಿ ಈಸ್ಟ ಇಂಡಿಯಾ ಕಂಪನಿಯ ಮಾನ್ಯತೆಯನ್ನು ರದ್ದುಗೊಳಿಸಿ ಭಾರತವು ಬ್ರಿಟಿಷ್ ಸರಕಾರ ನೇರ ಆಳ್ವಿಕೆಗೆ ಚಳವಳಿಯ ಕಾಯ್ದೆ?
ಉತ್ತರ: 1858ರ ಭಾ.ಸರಕಾರದ ಕಾಯ್ದೆ

40. ಯಾವ ಕಾಯ್ದೆ ಮೂಲಕ ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಿಸಿ. ವೈಸರಾಯ ಎಂಬ ಪದನಾಮವನ್ನು ನೀಡಲಾಯಿತು?
ಉತ್ತರ: 1858 ರ ಭಾ.ಸ.ಕಾಯ್ದೆ

41. ಭಾ.ಮೊ ವೈಸರಾಯ ಆಗಿ ನೇಮಕಲಾದವರು?
ಉತ್ತರ : ಲಾರ್ಡ್‌ಕ್ಯಾನಿಂಗ್

42. ಬ್ರಿಟಿಷರು ಭಾರತೀಯನ್ನು ಒಡೆದು ಆಳಲು ಯಾವ ಕಾಯ್ದೆಯನ್ನು ಬಳಸಿಕೊಂಡರು?
ಉತ್ತರ: 1909ರ ಭಾರತೀಯ ಪರಿಷತ್ ಕಾಯ್ದೆ ಅಥವಾ ಮಿಂಟೋ ಮಾರ್ಲೆ ಸುಧಾರಣ ಕಾಯ್ದೆ

43. ಮೊದಲ ಬಾರಿಗೆ ಚುನಾವಣೆಗಳ ಮೂಲಕ ಶಾಸನ ಸಭೆಗೆ ಆಯ್ಕೆಯಾಗುವ ಅವಕಾಶ ನೀಡಿದ ಶಾಸನ?
ಉತ್ತರ: 1909 ರ ಭಾರತೀಯ ಪರಿಷತ್ ಕಾಯ್ದೆ

44. ಮುಸ್ಲಿಂರಿಗೆ ಪ್ರತ್ಯೇಕ್ಕ ರಾಜಕೀಯ ಪ್ರಾತಿನಿಧ್ಯ ನೀಡುವ ಪ್ರತ್ಯೇಕ ಚುನಾವಣೆ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ?
ಉತ್ತರ: 1909 ರ ಭಾರತೀಯ ಪರಿಷತ್ ಕಾಯ್ದೆ

45. ಭಾರತೀಯರಿಗೆ ಹಂತ ಹಂತವಾಗಿ ಜವಾಬ್ದಾರಿ ಸರಕಾರವನ್ನು ನೀಡುವದೇ ಬ್ರಿಟಿಷ್ ಸರಕಾರದ ಗುರಿ ಎಂದು ಘೋಷಿಸಿದವರು?
ಉತ್ತರ: ಮಾಂಟೆಗೋ

46. ಕೇಂದ್ರದಲ್ಲಿ ದ್ವಿಸದನ ಶಾಸಕರಿಗೆ ರಚನೆಗೆ ಅವಕಾಶ ನೀಡಿದ ಶಾಸನ?
ಉತ್ತರ: 1919ರ ಭಾರತೀಯ ಪರಿಷತ್ ಕಾಯ್ದೆ

47. ಪ್ರಾಂತ್ಯಗಳಲ್ಲಿ ದ್ವಿಸರಕಾರ ಪದ್ಧತಿಗೆ ಅವಕಾಶ ನೀಡಿದ ಶಾಸನ?
ಉತ್ತರ: 1919ರ ಭಾ .ಪರಿಷತ್ ಕಾಯ್ದೆ

48. ಪ್ರತ್ಯೇಕ ಚುನಾವಣಾ ಮತಗಟೆ ವ್ಯವಸ್ಥೆಯನ್ನು ಮುಸ್ಲೀ,ಸಿಖ್,ಆಂಗ್ಲೋ–ಇಂಡಿಯನ್‌ರಿಗೆ ಮತ್ತು ಯುರೋಪಿಯನ್ನರಿಗೆ ವಿಸ್ತರಿಸಲಾದ ಕಾಯ್ದೆ?
ಉತ್ತರ: 1919ರ ಭಾ .ಸಾ ಕಾಯ್ದೆ

49. ಭಾರತದ ಸಂವಿಧಾನದ ರಚನೆಗೆ ಬುನಾದಿಯಾದ ಕಾಯ್ದೆ ಯಾವುದು?
ಉತ್ತರ: 1935ರ ಭಾ .ಸ ಕಾಯ್ದೆ

50. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ?
ಉತ್ತರ: 1935ರ ಭಾ.ಸ.ಕಾಯ್ದೆ

## ನೆನಪಿನಲ್ಲಿ ಇಡಬೇಕಾದ ಮುಖ್ಯ ಸಂಗತಿಗಳು

1. ನಾಗರೀಕ ಸೇವೆಗಳು ಜಾರಿಗೊಳಿಸಿದವರು.......................... ಲಾರ್ಡ್ ಕಾರ್ನವಾಲಿಸ್
2. ದಿವಾನಿ ಅದಾಲತ್ ಜಾರಿಗೊಳಿಸಿದವರ............................ ವಾರನ್ ಹೆಸ್ಟಿಂಗ್ಸ್
3. ಫೌಜದಾರಿ ಅದಾಲತ್ ಎಂದರೆ ................................ ಅಪರಾಧ ನ್ಯಾಯಾಲಯಾ
4. ದಿವಾನಿ ಅದಾಲತ್ ಎಂದರೆ.............................. ನಾಗರೀಕ ನ್ಯಾಯಾಲಯಾ
5. ಸೂಪರಿಡೆಂಟ್ ಆಫ್ ಪೋಲಿಸ್ ಹುದ್ದೆ ಸೃಷ್ಟಿ ...................... ಲಾರ್ಡ್ ಕಾರ್ನವಾಲಿಸ್
6. ಖಾಯಂ ಜಮೀನ್ದಾರಿ ಪದ್ಧತಿ ಜಾರಿಗೊಳಿಸಿದವರು ................ ಲಾರ್ಡ್ ಕಾರ್ನವಾಲಿಸ್
7. ಮಹಲ್ ಎಂದರೆ ................ ತಾಲ್ಲೂಕು ಎಂದರ್ಥ
8. ಮಹಲ್‌ವಾರಿ ಪದ್ಧತಿಯನ್ನು ಪ್ರಯೋಗಿಸಿದವರು......ಆರ್.ಎಂ.ಬರ್ಡ & ಜೇಮ್ಸ್ ಥಾಮ್ಸ್‌ನ
9. ರೈತವಾರಿ ಪದ್ಧತಿ ಜಾರಿಗೊಳಿಸಿದವರು...................... ಅಲೆಗ್ಸಾಂಡರ್ ರೀಡ್
10. ಮೊದಲ ವೈಸರಾಯ .............................. ಲಾರ್ಡ ಕ್ಯಾನಿಂಗ್
11. ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆ..................... 1935ರ ಭಾರತ ಸರ್ಕಾರದ ಕಾಯ್ದೆ
12. ಭಾರತ ಸಂವಿಧಾನ ರಚನೆಗೆ ಬುನಾದಿ ...................... 1935ರ ಭಾರತ ಸರ್ಕಾರದ ಕಾಯ್ದೆ
13. ಭಾರತದಲ್ಲಿ ಫೆಡರಲ್ ಕೋರ್ಟ ಸ್ಥಾಪನೆ .................. 1935ರ ಭಾರತ ಸರ್ಕಾರದ ಕಾಯ್ದೆ
14. ಪ್ರತ್ಯೇಕ ಚುನಾವಣಾ ಮತಗಟ್ಟೆ ................. 1909 ರ ಭಾರತೀಯ ಪರಿಷತ್ ಕಾಯ್ದೆ
15. ಅಪರಾಧ ತೆರಿಗೆ ಟೀಕಿಸಿದವನು ................. ಎಡ್ಮಂಡ್ ಬರ್ಕ

## ಕಾಯ್ದೆಯ ವಿಶೇಷತೆಗಳು

| ಕ್ರ.ಸಂ | ಪ್ರಮುಖವಾದ ಕಾಯ್ದೆಗಳು | ವಿಶೇಷತೆಗಳು |
|---|---|---|
| 1 | 1773ರ ರೆಗ್ಯುಲೇಟಿಂಗ್ ಕಾಯ್ದೆ | * ಕಲ್ಕತ್ತಾದಲ್ಲಿ ಸುಪ್ರೀಂ ಕೋರ್ಟ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿತು. |
| 2 | 1784ರ ಪಿಟ್ಸ್ ಇಂಡಿಯಾ ಶಾಸನ | * ಆರು ಕಮೀಷನರ್ ಒಳಗೊಂಡ "ನಿಯಂತ್ರಣ ಮಂಡಳಿ ಸ್ಥಾಪನೆ.<br>* ಭಾರತೀಯರ ರಾಜಕೀಯ ಹಕ್ಕು ಮೊಟಕುಗೊಳಿಸಿತು. |
| 3 | 1813ರ ಚಾರ್ಟರ್ ಕಾಯ್ದೆ | * ಶೈಕ್ಷಣಿಕ ಸುಧಾರಣೆಗೆ ಒತ್ತು ಕೊಟ್ಟಿತು.<br>* ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲೀಷ್ ವಿಧ್ಯಾಭ್ಯಾಸದ ವಿಸ್ತರಣೆ |

| | | |
|---|---|---|
| 4 | 1833ರ ಚಾರ್ಟರ್ ಕಾಯ್ದೆ | * ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಎಂದು ನಾಮಕರಣ ಮಾಡಿತು. |
| 5 | 1858 ಭಾರತ ಸರ್ಕಾರದ ಕಾಯ್ದೆ | * ಗವರ್ನರ್ ಜನರಲ್ ಹುದ್ದೆ ಬದಲಾಯಿಸಿ "ವೈಸರಾಯ" ಪದನಾಮ ನೀಡಿತು.<br>* ಮೊದಲ ವೈಸರಾಯ ಲಾರ್ಡ ಕ್ಯಾನಿಂಗ್ ಆದನು. |
| 6 | 1861ರ ಭಾರತೀಯ ಪರಿಷತ್ ಕಾಯ್ದೆ | * ಭಾರತೀಯರಿಗೆ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಸ್ಥಾನ ಕಲ್ಪಿಸಿಲಾಯಿತು.<br>* ಇದನು "Policy of Associaltion" ಎನ್ನುವರು.<br>* ತುರ್ತು ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರ ಗವರ್ನರ್ ಜನರಲ್‌ಗೆ ನೀಡಲಾಯಿತು. |
| 7 | 1892ರ ಭಾರತೀಯ ಪರಿಷತ್ ಕಾಯ್ದೆ | * ಶಾಸನ ಸಭೆಗಳ ಪ್ರಾತಿನಿಧ್ಯ ಮತ್ತಷ್ಟು ವಿಸ್ತರಿಸಲಾಯಿತು. |
| 8 | 1909 ಭಾರತೀಯ ಪರಿಷತ್ ಕಾಯ್ದೆ | * ಈ ಕಾಯ್ದೆಯನ್ನು "ಮಿಂಟೋ ಮಾರ್ಲೆ" ಕಾಯ್ದೆ ಎನ್ನುವರು<br>* "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು. |
| 9 | 1919ರ ಭಾರತೀಯ ಪರಿಷತ್ ಕಾಯ್ದೆ | * ಚೆಮ್ಸಫರ್ಡ ಸ್ಮಧಾರಣಾ ಕಾಯ್ದೆ ಎನ್ನುವರು<br>* ಕೇಂದ್ರದಲ್ಲಿ "ದ್ವಿಸದನ" ಶಾಸಕಾಂಗ ರಚನೆಗೆ ಅವಕಾಶ<br>* ಪ್ರಾಂತ್ಯಗಳಲ್ಲಿ "ದ್ವಿಸರ್ಕಾರ" ಪದ್ಧತಿ ಜಾರಿ. |
| 10 | 1935ರ ಭಾರತ ಸರ್ಕಾರದ ಕಾಯ್ದೆ | * ಭಾರತದ ಸಂವಿಧಾನ ರಚನೆಗೆ ಈ ಶಾಸನ ಬುನಾದಿಯಾಗಿದೆ.<br>* "ಅಖೀಲ ಭಾರತ ಒಕ್ಕೂಟ" ವ್ಯವಸ್ಥೆಗೆ ಅವಕಾಶ<br>* ಕೇಂದ್ರದಲ್ಲಿ ದ್ವಿ ಸರ್ಕಾರವನ್ನು ಸ್ಥಾಪಿಸಲಾಯಿತು.<br>* ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ<br>* ಭಾರತದಲ್ಲಿ "ಫೆಡರಲ್ ಕೋರ್ಟ" ಸ್ಥಾಪನೆಗೆ ಅವಕಾಶ |

## ಅಧ್ಯಾಯ-೦೩
## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

### II. ಎರಡು ಅಂಕದ ಪ್ರಶ್ನೋತ್ತರಗಳು.

1. ಈಸ್ಟ ಇಂಡಿಯಾ ಕಂಪನಿಯ ಮೂಲಕ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ತಿಳಿಸಿರಿ?

ಉತ್ತರ:
* **ದಿವಾನಿ ಅದಾಲತ್ :** ಇದು ನಾಗರೀಕ ನ್ಯಾಯಾಲಯವಾಗಿದು ಹಿಂದೂಗಳಿಗೆ ಹಿಂದೂ ಧರ್ಮ ಶಾಸ್ತ್ರದ ಪ್ರಕಾರ ಮುಸಲ್ಮಾನರಿಗೆ ಷರೀಯಲ್ ಕಾನೂನಿನ ಪ್ರಕಾರ ನ್ಯಾಯ ತಿರ್ಮಾನ ಮಾಡಲಾಗುತ್ತಿತ್ತು. ಈ ನ್ಯಾಯಾಲಯಗಳ ಅಧ್ಯಕ್ಷತೆಯನ್ನು ಯೂರೋಪಿನ ಅಧಿಕಾರಿಗಳು ವಹಿಸುತ್ತಿದ್ದರು.
* **ಫೌಜದಾರಿ ಅದಾಲತ್ :** ಇದು ಅಪರಾಧ ನ್ಯಾಯಾಲಯವಾಗಿದು 'ಖಾಜಿಗಳು' ನ್ಯಾಯ ತೀರ್ಮಾನ ಮಾಡುತ್ತಿದ್ದರು. ಇದರ ಅಧ್ಯಕ್ಷತೆಯನ್ನು ಯೂರೋಪಿನ ಅಧಿಕಾರಿಗಳು ವಹಿಸುತ್ತಿದ್ದರು.

2. ಬ್ರಿಟಿಷರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ಆದ ಸುಧಾರಣೆಗಳಾವುವು?

ಉತ್ತರ:
* ಪ್ರತಿ ಜಿಲ್ಲೆಗಳನ್ನು ಅನೇಕ ಪೋಲಿಸ 'ಠಾಣೆ'ಗಳಾಗಿ ವಿಭಾಗಿಸಲಾಯಿತು.
* ಪ್ರತಿ ಠಾಣೆಯ ಉಸ್ತುವಾರಿಗೆ 'ಕೊತ್ವಾಲರನ್ನು' ನೇಮಿಸಲಾಯಿತು.
* ಪೋಲಿಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟರ ಅಧೀನಕ್ಕೆ ಒಳಗಾದರು
* 1902ರಲ್ಲಿ ಪೋಲಿಸ್ "ಕಮೀಷನ್ ಕಾಯ್ದೆ"ಯನ್ನು ಜಾರಿಗೆ ತರಲಾಯಿತು.

3. ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿಸಿ, ಸಾಲದಲ್ಲೇ ಸಾಯುವಂತೆ ಮಾಡಿತು" ಹೇಗೆ? ವಿಮರ್ಶಿಸಿರಿ.

ಉತ್ತರ:
* ರೈತರ ಭೂ ಮಾಲಿಕತ್ವವನ್ನು ಕಸಿದುಕೊಂಡಿತು.
* ಜಮೀನ್ದಾರರು ನಿಗಧಿತ ಕಂದಾಯಕ್ಕಿಂತ ಹೆಚ್ಚಿನ ತೆರಿಗೆಯನ್ನು ರೈತರಿಂದ ಸಂಗ್ರಹಿಸುತ್ತಿದ್ದರು.
* ರೈತರು ಜಮೀನ್ದಾರರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸಬೇಕಾಗಿತ್ತು.
* ಜಮೀನ್ದಾರರು ರೈತರನ್ನು ಶೋಷಣೆಗೆ ಒಳಪಡಿಸಿದರು.

4. ರೈತವಾರಿ ಪದ್ಧತಿಯು ಒಳಗೊಂಡ ಪ್ರಮುಖಾಂಶಗಳಾವುವು?
ಉತ್ತರ:
* ಉಳುವವನನ್ನೇ ಭೂಮಿಯ ಒಡೆಯನೆಂದು ಗುರುತಿಸಿತು.
* ಭೂ ಮಾಲಿಕನು ಒಟ್ಟು ಉತ್ಪನ್ನದ 50% ರಷ್ಟನ್ನು ತೆರಿಗೆಯಾಗಿ ನೀಡಬೇಕಾಗಿತ್ತು.
* ಭೂ ಕಂದಾಯದ ಪರಿಷ್ಕರಣೆಯ ಅವಧಿ 30 ವರ್ಷಗಳಾಗಿತ್ತು
* ತೆರಿಗೆ ಸಂಗ್ರಹಿಸಲು ಬ್ರಿಟೀಷರು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದರು.

5. ಬ್ರಿಟೀಷ್ ಕಂದಾಯ ನೀತಿಗಳಿಂದಾದ ಪರಿಣಾಮಗಳಾವುವು?
ಉತ್ತರ:

* ಈ ಪದ್ಧತಿಯಿಂದ ಕಂಪನಿಗೆ ನಿರಂತರವಾಗಿ ನಿಗಧಿತ ಕಂದಾಯ ಸಂದಾಯವಾಗತೊಡಗಿತು
* ಕಂಪನಿಯು ಭಾರತೀಯ ರೈತರನ್ನು ಶೋಷಣೆ ಮಾಡಿತು
* ರೈತರು ಭೂ ಮಾಲಿಕತ್ವವನ್ನು ಕಳೆದುಕೊಂಡು
* ನಿಗಧಿತ ದರಕ್ಕಿಂತ ಹೆಚ್ಚಿನ ಕಂದಾಯವನ್ನು ಅಧಿಕಾರಿಗಳು ಸಂಗ್ರಹಿಸುತ್ತಿದ್ದರು.

6. ಬ್ರೀಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿಮಾಡಿ?
ಉತ್ತರ:

* ಇಂಗ್ಲೀಷ್ ಶಿಕ್ಷಣವು ಜಾರಿಗೆ ಬಂದಿತು.
* ಭಾರತೀಯರಲ್ಲಿ ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಹಾಗೂ ವಿಮರ್ಶನಾತ್ಮಕ ಜ್ಞಾನ ಬೆಳೆಯಿತು
* ಸ್ಥಳೀಯ ಭಾಷೆ ಹಾಗೂ ಸಾಹಿತ್ಯ ಪೋಷಿಸಲ್ಪಟ್ಟಿತು
* ಭಾರತದ ಸ್ವಾತಂತ್ರ ಹೋರಾಟಕ್ಕೆ ಸ್ಪೂರ್ತಿ ಲಭಿಸಿತು.

7. ರೆಗ್ಯೂಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?
ಉತ್ತರ:

* ಬಂಗಾಳ ಪ್ರೆಸಿಡೆನ್ಸಿಯು ಇತರ ಎಲ್ಲಾ ಪ್ರೆಸಿಡೆನ್ಸಿಗಳ ಮೇಲೆ ನಿಯಂತ್ರಣ ಹೊಂದಿತು.
* ಬಂಗಾಳದ ಗವರ್ನರ್ ಹುದ್ದೆಯನ್ನು ಭಾರತದ ಗವರ್ನರ್ ಜನರಲ್ ಎಂದು ಬದಲಾಯಿಸಲಾಯಿತು.
* ಕೋಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪಿಸಲಾಯಿತು.
* ಲಾರ್ಡ ವಾರನ್ ಹೇಸ್ಟಿಂಗ್ಸ್ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ನೇಮಕಗೊಂಡನು

8. 1858ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು?
ಉತ್ತರ:
* ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರ ಸನ್ನದನ್ನು ರದ್ದುಪಡಿಸಲಾಯಿತು.
* ಭಾರತದ ಆಳ್ವಿಕೆಯನ್ನು ಬ್ರಿಟೀಷ್ ರಾಣೀಯ ನಿಯಂತ್ರಣಕ್ಕೆ ಒಪ್ಪಿಸಲಾಯಿತು.

ಪ್ರಸ್ತುತಿ : ಶ್ರೀ ಬಾಳೇಶ ಹತ್ತರಕಿ, ಸ.ಶಿ., ಸ.ಪ್ರೌ.ಶಾಲೆ, ಹಿರನಾಗಾಂವ ತಾ.ಬಸವಕಲ್ಯಾಣ, ಜಿ:ಬೀದರ, ಮೊ.ನಂ.9972032339

| |
|---|
| * ಗವರ್ನರ್ ಜನರಲ್ ಹುದ್ದೆಯನ್ನು 'ವೈಸರಾಯ್' ಎಂದು ಬದಲಾಯಿಸಲಾಯಿತು.<br>* ಲಾರ್ಡ್ ಕ್ಯಾನಿಂಗ್ ಪ್ರಥಮ 'ವೈಸರಾಯ್' ಆಗಿ ನೇಮಿಸಲ್ಪಟ್ಟನು. |
| 9. 1935ರ ಭಾರತ ಸರ್ಕಾರ ಕಾಯ್ದೆ "ಭಾರತ ಸಂವಿದಾನದ ಬುನಾದಿ" ಸಮರ್ಥಿಸಿ?<br>ಉತ್ತರ:<br>* ಭಾರತ ಸಂವಿಧಾನದ ಅನೇಕ ನಿಭಂದನೆಗಳಿಗೆ ಈ ಕಾಯ್ದೆಯೇ ಆಧಾರವಾಗಿದೆ.<br>* ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚನೆಗೆ ಈ ಕಾಯಿದೆ ಅವಕಾಶ ನೀಡಿತು.<br>* ದೇಶಿಯ ಸಂಸ್ಥಾನಗಳನ್ನು, ಬ್ರಿಟಿಷ್ ಸಂಸ್ಥಾನಗಳನ್ನೊಳಗೊಂಡ ಒಕ್ಕೂಟ ರಚನೆಗೆ ಅವಕಾಶ ನೀಡಿತು.<br>* ಫೆಡರಲ್ ಕೋರ್ಟ ಸ್ಥಾಪನೆಗೆ ಅವಕಾಶ ನೀಡಿತು. |
| 10. 1919 ಬಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು??<br>* ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆಗೆ ಅವಕಾಶ ನೀಡಿತು<br>* ಭಾರತಕ್ಕೆ ಒಬ್ಬ ಹೈ ಕಮೀಷನರ್ ನೇಮಕ ಮಾಡಲು ಸೂಚಿಸಿತು<br>* ಪ್ರಾಂತೀಯ ಆಯವ್ಯಯವನ್ನು ಕೇಂದ್ರ ಆಯವ್ಯಯದಿಂದ ಪ್ರತ್ಯೇಕಿಸಲಾಯಿತು. |

****** ಮುಕ್ತಾಯ******

# ಅಧ್ಯಾಯ-4
# ಕರ್ನಾಟಕದಲ್ಲಿ ಬ್ರಿಟೀಷ್ ಆಳ್ವಿಕೆಗೆ ಪ್ರತಿರೋಧಗಳು

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಮೊದಲ ಆಂಗ್ಲೋ ಮೈಸೂರು ಯುದ್ಧ ಯಾರ ನಡುವೆ ನಡೆಯಿತು?
ಉತ್ತರ : ಹೈದರಾಲಿ ಮತ್ತು ಬ್ರಿಟೀಷರು

2. ಮೊದಲ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?
ಉತ್ತರ : ಮದ್ರಾಸ್ ಒಪ್ಪಂದ

3. ಎರಡನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಮುಖ್ಯ ಕಾರಣವೇನು?
ಉತ್ತರ : ಬ್ರಿಟೀಷರು ಮಾಹೆಯನ್ನು ವಶಪಡಿಸಿಕೊಂಡದ್ದು

4. ಎರಡನೇ ಆಂಗ್ಲೋ ಮೈಸೂರ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?
ಉತ್ತರ : ಮಂಗಳೂರ ಒಪ್ಪಂದ

5. ಮೂರನೇ ಆಂಗ್ಲೋ ಮೈಸೂರ ಯುದ್ಧ ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?
ಉತ್ತರ : ಶ್ರೀರಂಗಪಟ್ಟಣ ಒಪ್ಪಂದ

6. ವಾಘ್ ಎಂದರೇನು?
ಉತ್ತರ : ಹುಲಿ ಎಂದರ್ಥ

7. ರಾಣಿ ಚೆನ್ನಮ್ಮಳ ದತ್ತು ಪುತ್ರ ಯಾರು?
ಉತ್ತರ : ಶಿವಲಿಂಗಪ್ಪ

8. ಸಂಗೊಳ್ಳಿ ರಾಯಣ್ಣನನ್ನು ಎಲ್ಲಿ ಗಲ್ಲಿಗೇರಿಸಲಾಯಿತು?
ಉತ್ತರ : ನಂದಗಡದಲ್ಲಿ

9. ಸುರಪುರವು ಈಗಿನ ಯಾವ ಜಿಲ್ಲೆಯಲ್ಲಿದೆ?
ಉತ್ತರ : ಯಾದಗಿರಿ ಜಿಲ್ಲೆ

10. ಸುರಪುರದ ಬಂಡಾಯ ನಾಯಕ ಯಾರು?
ಉತ್ತರ : ವೆಂಕಟಪ್ಪ ನಾಯಕ

11. ಕೊಪ್ಪಳದ ಬಂಡಾಯ ನಾಯಕ ಯಾರು?
ಉತ್ತರ : ವೀರಪ್ಪ

12. ಹಲಗಲಿ ಈಗಿನ ಯಾವ ಜಿಲ್ಲೆಯಲ್ಲಿದೆ?
ಉತ್ತರ : ಬಾಗಲಕೋಟಿ ಜಿಲ್ಲೆ

13. ಅಮರ ಸುಳ್ಯದ ಬಂಡಾಯದ ಕೇಂದ್ರ ಸ್ಥಾನಗಳು ಯಾವುವು?
ಉತ್ತರ : ಸುಳ್ಯ, ಬೆಳ್ಳಾರೆ, ಪುತ್ತೂರು.

# ಪ್ರಮುಖ ಯುದ್ಧಗಳು ಮತ್ತು ಒಪ್ಪಂದಗಳು

| ಕ್ರ. ಸಂ. | ಪ್ರಮುಖ ಯುದ್ಧಗಳು | ಇಸ್ವಿಗಳು | ಒಪ್ಪಂದಗಳು |
|---|---|---|---|
| 1 | ಮೊದಲನೇ ಆಂಗ್ಲೋ ಮೈಸೂರು ಯುದ್ಧ | 1767–1769 | ಮದ್ರಾಸ್ ಒಪ್ಪಂದ |
| 2 | ಎರಡನೇ ಆಂಗ್ಲೋ ಮೈಸೂರು ಯುದ್ಧ | 1780–1784 | ಮಂಗಳೂರು ಒಪ್ಪಂದ |
| 3 | ಮೂರನೇ ಆಂಗ್ಲೋ ಮೈಸೂರು ಯುದ್ಧ | 1790–1792 | ಶ್ರೀರಂಗಪಟ್ಟಣ ಒಪ್ಪಂದ |
| 4 | ನಾಲ್ಕನೇ ಆಂಗ್ಲೋ ಮೈಸೂರು ಯುದ್ಧ | 1799 | ಟಿಪ್ಪು ಸುಲ್ತಾನನ ಸಾವು |

## ಪ್ರಮುಖ ಘಟನಾವಳಿಗಳು

| ಕ್ರ. ಸಂ. | ಪ್ರಮುಖ ಇಸ್ವಿಗಳು | ಪ್ರಮುಖ ಘಟನೆಗಳು |
|---|---|---|
| 1 | 1781 | ಪೋರ್ಟೋನೋವೆ ಕದನ |
| 2 | 1782 | ಹೈದರಾಲಿಯ ಮರಣ |
| 3 | 1798 | ಸಹಾಯಕ ಸೈನ್ಯ ಪದ್ಧತಿ ಜಾರಿ |
| 4 | 1799 | ಟಿಪ್ಪು ಸುಲ್ತಾನನ ಸಾವು |
| 5 | 1857 | ಸುರಪುರ ದಂಗೆ |
| 6 | 1857 | ಹಲಗಲಿಯ ಬೇಡರ ದಂಗೆ |

# ಅಧ್ಯಾಯ-4
# ಕರ್ನಾಟಕದಲ್ಲಿ ಬ್ರಿಟೀಷ್ ಆಳ್ವಿಕೆಗೆ ಪ್ರತಿರೋಧಗಳು

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಹೈದರಾಲಿ ಹೇಗೆ ಅಧೀಕಾರಕ್ಕೆ ಬಂದನು?

* ಹೈದರಾಲಿಯು ಮೈಸೂರು ಸೇನೆಗೆ ಸೇರಿ ತನ್ನ ಚಾಣಾಕ್ಷತನ ತೋರಿಸಿದನು.
* ದೇವನಹಳ್ಳಿಯ ಕೋಟೆಯ ದಾಳಿಯಲ್ಲಿ ವೀರಾವೇಷದಿಂದ ಹೋರಾಡಿ ಪ್ರಸಿದ್ಧಿಗೆ ಬಂದನು.
* ಆರ್ಕಾಟಿನ ನಿಜಾಮನ ಮೇಲೆ ಯಶಸ್ವಿ ಧಾಲಿ ನಡೆಸಿದನು.
* ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು ಮತ್ತು ನವಾಬ ಹೈದರಾಲಿಯಾದನು.
* ಕೃಷ್ಣರಾಜ ಒಡೆಯರ ಅಸಮರ್ಥತೆಯು ಹೈದರಾಲಿ ಏಳಿಗೆಗೆ ಬರಲು ಸಹಾಕವಾಯಿತು.

2. ಎರಡನೇ ಆಂಗ್ಲೋ ಮೈಸೂರು ಯದ್ಧದಿಂದ ಉಂಟಾದ ಪರಿಣಾಮಗಳೇನು?

* ಬೆನ್ನುಹುಣ್ಣಿನ ಕಾಯಿಲೆಯಿಂದ ಹೈದರಾಲಿ ಮರಣ ಹೊಂದಿದನು.
* ಟಿಪ್ಪು ಸುಲ್ತಾನ ಈ ಯುದ್ದವನ್ನು ಮುಂದುವರಿಸಿ ಮಂಗಳೂರು ಬಳಿ ಬ್ರಿಟೀಷರನ್ನು ಸೋಲಿಸಿದನು.
* ಬ್ರಿಟೀಷರು ಮತ್ತು ಟಿಪ್ಪು ಸುಲ್ತಾನನ ನಡುವೆ ಮಂಗಳೂರು ಒಪ್ಪಂದವಾಯಿತು.
* ಬ್ರಿಟಿಷರು ಮಂಗಳೂರುನ್ನು ಟಿಪ್ಪು ಸುಲ್ತಾನನಿಗೆ ಬಿಟ್ಟುಕೊಟ್ಟರು.

3. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು?

* ಟಿಪ್ಪು ಸುಲ್ತಾನ ತನ್ನ ಅರ್ಧರಾಜ್ಯ ಬ್ರಿಟಿಷರಿಗೆ ನೀಡಬೇಕಾಯಿತು.
* ಯುದ್ಧದ ಪರಿಹಾರವಾಗಿ ಮೂರು ಕೋಟಿ ರೂಪಾಯಿ ನೀಡಬೇಕಾಯಿತು.
* ಈ ಹಣ ಸಂದಾಯವಾಗುವವರೆಗೆ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ಇಡಬೇಕಾಯಿತು.
* ಯುದ್ಧ ಖೈದಿಗಳನ್ನು ಯಾವುದೇ ಷರತ್ತು ಇಲ್ಲದೇ ಬಿಡುಗಡೆ ಮಾಡಬೇಕಾಯಿತು.
* ಬ್ರಿಟೀಷರು ಶ್ರೀರಂಗಪಟ್ಟಣ ಕೋಟೆಯಿಂದ ತಮ್ಮ ಸೈನ್ಯ ಹಿಂದಕ್ಕೆ ಪಡೆದರು.

4. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧವು ಬ್ರಿಟೀಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ಸಮರ್ಥಿಸಿ?

* ಈ ಯುದ್ಧದಲ್ಲಿ ಬ್ರಿಟೀಷರು ಟಿಪ್ಪುವನ್ನು ಕೊಂದರು.
* ಸಾಮ್ರಾಜ್ಯವನ್ನು ಬ್ರಟೀಷರು, ಮರಾಠರು ಹಾಗೂ ನಿಜಾಮರು ಪರಸ್ಪರ ಹಂಚಿಕೊಂಡರು.
* ಸಣ್ಣ ಪ್ರಾಂತ್ಯವನ್ನು ಮೈಸೂರು ಒಡೆಯರಿಗೆ ಹಿಂದರುಗಿಸಲಾಯಿತು.
* ಬ್ರಿಟೀಷರ ಸಹಾಯಕ ಸ್ಯನ್ಯಪದ್ಧತಿಗೆ ಮೈಸೂರು ಒಡೆಯರು ಸಹಿ ಹಾಕಿದರು

5. ದೋಂಡಿಯ ವಾಘನು ಬ್ರಿಟೀಷರ ವಿರುದ್ಧ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ?

* ದೊಂಡಿಯ ವಾಘನು ತನ್ನದೇ ಆದ ಖಾಸಗಿ ಸೈನ್ಯವನ್ನು ಹೊಂದಿದ್ದನು.
* ಕುಡಲೂರು ಕೋಟೆಯ ಮೇಲೆ ಧಾಳಿ ಮಾಡುವ ಪ್ರಯತ್ನ ಮಾಡಿದನು.
* ಶಿವಮೊಗ್ಗ ಹಾಗೂ ಚಿತ್ರದುರ್ಗ ಕೋಟೆಗಳ ಮೇಲೂ ಧಾಳಿ ಮಾಡಿದನು
* ಬ್ರಿಟೀಷರು ವಿರುದ್ಧ ಹೋರಾಡಲು ಪಾಳೆಯಗಾರರು ವಾಘನಿಗೆ ಬೆಂಬಲ ನೀಡಿದರು.
* ಫ್ರೆಂಚರ ನೆರವನ್ನು ಸಹ ವಾಘನು ಪಡೆದುಕೊಂಡನು.
* ದೊಂಡಿಯಾ ವಾಗ ಮ್ಮರಾಠರ ಕೈಯಲ್ಲಿ ಸೋತನು ಆದರೂ ಧೃತಿಗೆಡದೆ ಯುದ್ಧ ಮುಂದುವರಿಸಿದನು.

6. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿರಿ?

* ರಾಯಣ್ಣನು ತನ್ನದೇ ಆದ ಸ್ಯನ್ಯವನ್ನು ಸಂಘಟಿಸಿದನು.
* ರಹಸ್ಯ ಸಭೆಗಳನ್ನು ಆಯೋಜಿಸಿ ಯೋಜನೆ ರೂಪಿಸಿಕೊಂಡನು.
* ಸೈನ್ಯದಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಿದನು
* ಬ್ರಿಟೀಷರ ಖಜಾನೆ ತಾಲ್ಲೂಕಾ ಕಛೇರಿಗಳನ್ನು ಲೂಟಿ ಮಾಡಿದನು.
* ರಾಯಣ್ಣನನ್ನು ಸರೆಹಿಡಿಯಲು ಬ್ರಟೀಷರು ಒಂದು ಸಂಚನ್ನು ರೂಪಿಸಿದರು
* ರಾಯಣ್ಣನನ್ನು ಇಂಗ್ಲೀಷ್ ಸ್ಯನ್ಯ ಬಂಧಿಸಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು.

7. ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿರಿ?

* ಪುಟ್ಟಬಸಪ್ಪನು ' ಕಲ್ಯಾಣ ಸ್ವಾಮಿ' ಹಾಗೂ 'ಸ್ವಾಮಿ ಅಪರಂಪರ' ಎಂದೇ ಪರಿಚಿತರಾಗಿದ್ದರು.
* ದಂಗೆಕೋರರನ್ನು ಪುಟ್ಟಬಸಪ್ಪನು ಸಂಘಟಿಸಿದನು
* ತಂಬಾಕು ಹಾಗೂ ಉಪ್ಪಿನ ಮೇಲಿನ ತೆರಿಗೆಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದನು.
* ಬೆಳ್ಳಾರೆ ಸರ್ಕಾರಿ ಕ್ಚಛೇರಿಯನ್ನು ಲೂಟಿಮಾಡಿದನು
* ಅಮಲ್ದಾರನೊಬ್ಬನನ್ನು ಕೊಂದು ಭಂಟ್ವಾಳದ ಖಜಾನೆ ಹಾಗೂ ಸೆರೆಮನೆಯನ್ನು ಲೂಟಿಮಾಡಿದನು.

8. ಸುರಪುದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿರಿ.?

* 1857ರ ದಂಗೆಯ ಸಮಯದಲ್ಲಿ ವೆಂಕಟಪ್ಪ ನಾಯಕನು ಸುರಪುರ ದಂಗೆಯನ್ನು ಪ್ರಾರಂಭಿಸಿದನು
* ನಾನಾ ಸಾಹೇಬನ ಪ್ರತಿನಿಧಿಗಳು ವೆಂಕಟಪ್ಪ ನಾಯಕನ ದಂಗೆಯನ್ನು ಬೆಂಬಲಿಸಿದರು.
* ಬ್ರಿಟೀಷರು ವೆಂಕಟಪ್ಪ ನಾಯಕನನ್ನು ಅನುಮಾನದಿಂದ ನೋಡಿದರು.
* ವೆಂಕಟಪ್ಪ ನಾಯಕ ಕುರಿತು ವರದಿ ನೀಡಲು ಕ್ಯಾಂಪ್ ಬೆಲ್ ಎಂಬ ಅಧಿಕಾರಿಯನ್ನು ನೇಮಿಸಲಾಯಿತು.
* ಹೈದರಾಬಾದಿನ ರೆಸಿಡೆಂಟನಿಗೆ ನೀಡಿದ ವರದಿಯಲ್ಲಿ ಸುರಪುರ ದುರಾಡಳಿತಕ್ಕೆ ವೆಂಕಟಪ್ಪ ಕಾರಣವೆಂದು ತಿಳಿಸಲಾಯಿತು.
* ಬ್ರಿಟೀಷರು ವೆಂಕಟಪ್ಪ ನಾಯಕನ್ನು ಅಧಿಕಾರದಿಮದ ಕೆಳಗಿಳಿಸಿ

9.ಕಿತ್ತೂರಿನ ವೀರರಾಣಿ ಚೆನ್ನಮ್ಮನ ಸಾಧನೆಗಳಾವುವು?

* ಸಶಸ್ತ್ರ ಬಂಡಾಯಗಳಲ್ಲಿ ಕಿತ್ತೂರಿನ ರಾಣಿ ಚೆನ್ನಮ್ಮಳ ಹೋರಾಟ ಖ್ಯಾತಿ ಗಳಿಸಿದೆ.
* ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತ ಮುಂದುವರಿಸಿದಳು.
* ಕಿತ್ತೂರಿನ ಖಜಾನೆ ಮತ್ತು ಕೋಟೆ ಕೊತ್ತಲಗಳನ್ನು ಬ್ರಿಟೀಷರ ಥ್ಯಾಕರೆಯಿಂದ ರಕ್ಷಸಿಕೊಳ್ಳಲು ಪ್ರಯತ್ನಿಸಿದಳು.
* ಕಿತ್ತೂರಿನ ಸೈನ್ಯ ಬ್ರಿಟೀಷ ಸೈನ್ಯದ ಮೇಲೆ ಧಾಳಿ ಮಾಡಿತು ಈ ಧಾಳಿಯಲ್ಲಿ ಥ್ಯಾಕರೆ ಗುಂಡೇಟಿಗೆ ಬಲಿಯಾದ
* ಲೆಫ್ಟಿನೆಂಟ್ ಕರ್ನಲ್ ಡೀಕನು ಕಿತ್ತೂರಿಗೆ ಮುತ್ತಿಗೆ ಹಾಕಿ ಚೆನ್ನಮ್ಮಳನ್ನು ಸೆರೆಹಿಡಿಯಲಾಯಿತು.
* ಚನ್ನಮ್ಮಳನ್ನು ಬೈಲಹೊಂಗಲ ಸೆರೆಮನೆಯಲ್ಲಿ ಇರಸಲಾಯಿತು ಮುಂದೆ ಚೆನ್ನಮ್ಮ ತೀರಿಕೊಂಡಳು.

10. ಕೊಪ್ಪಳದ ವೀರಪ್ಪನ ಸಾಧನಗಳನ್ನು ವಿವರಿಸಿರಿ?

* ಕೊಪ್ಪಳದ ವೀರಪ್ಪನು ಜಮೀನ್ದಾರನಾಗಿದನು.
* ಇತ ಬ್ರಿಟೀಷರ ವಿರುದ್ಧ ಬಂಡಾಯವೆದ್ದು ಕೊಪ್ಪಳ ಮತ್ತು ಇನ್ನಿತರ ಕೋಟೆ ವಶಪಡಿಸಿಕೊಂಡನು.
* ವೀರಪ್ಪನ ಈ ಉದ್ದೇಶ ಅರಿತು ರೈತರು ಮತ್ತು ಅನೇಕ ಜಮಿನ್ದಾರರು ವೀರಪ್ಪನಿಗೆ ಕೈ ಜೋಡಿಸಿದರು.
* ಬ್ರಿಟೀಷರು ನಿಜಾಮನ್ ಸಹಾಯ ಪಡೆದುಕೊಂಡು ವೀರಪ್ಪನ ಮೇಲೆ ಧಾಳಿ ಮಾಡಿದರು.
* ವೀರಪ್ಪ ತನ್ನ ಕಡಿಮೆ ಸೈನಿಕರನ್ನು ತೆಗೆದುಕೊಂಡು ಯುದ್ಧ ಮುಂದುವರಿಸಿ ಮರಣ ಹೊಂದಿದನು.

11. ಟಿಪ್ಪು ಸಲ್ತಾನನ ಸಾಧನೆಗಳನ್ನು ವಿವರಿಸಿ?

* ಬ್ರಿಟೀಷರು ತನ್ನ ರಾಜ್ಯ ವಿಸ್ತರಣೆಯ ನೀತಿಗೆ ಅಡ್ಡಿಪಡಿಸುತ್ತಿರುವ ಶತ್ರುಗಳು ಎಂದು ಭಾವಿಸಿದನು.
* ಬ್ರಿಟೀಷರನು ಭಾರತದಿಂದ ಓಡಿಸುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದನು.
* ಇತ ಬ್ರಿಟೀಷರ ಸಾಮರ್ಥ್ಯ, ತಂತ್ರ, ಕುತಂತ್ರ, ಚಾಣಾಕ್ಷ ನೀತಿ ಅರಿತುಕೊಂಡಿದ್ದನು.
* ಬ್ರಿಟೀಷರನ್ನು ಭಾರತದಿಂದ ಹೊರಹಾಕಲು ವಿದೇಶಿ ಸಹಾಯ ಯಾಚಿಸಿದನು.
* ಬ್ರಿಟೀಷರ ವ್ಯಪಾರದ ಏಕಸ್ವಾಮ್ಯ ಮುರಿಯಲು ಪ್ರಯತ್ನಿಸಿದನು.

***** ಮುಕ್ತಾಯ****

# ಅಧ್ಯಾಯ–5
# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು

## I. ಒಂದು ಅಂಕದ ಪ್ರಶ್ನೋತ್ತರಗಳು.

1. 19ನೇ ಶತಮಾನವನ್ನು ಯಾವ ಹೆಸರಿನಿಂದ ಕರೆಯುವರು?
ಉತ್ತರ : ಭಾರತೀಯ ನವೋದಯದ ಕಾಲ

2. ಬ್ರಹ್ಮ ಸಮಾಜವನ್ನು ಯಾರು ಸ್ಥಾಪಿಸಿದರು?
ಉತ್ತರ : ರಾಜಾರಾಮ ಮೋಹನ್‌ರಾಯ

3. "ಸಂವಾದ ಕೌಮುದಿ" ಪತ್ರಿಕೆಯನ್ನು ಯಾರು ಹೊರಡಿಸಿದರು?
ಉತ್ತರ : ರಾಜಾರಾಮ ಮೋಹನರಾಯ

4. ಪ್ರಾರ್ಥನಾ ಸಮಾಜದ ಸ್ಥಾಪಕರು ಯಾರು?
ಉತ್ತರ : ಡಾ.ಆತ್ಮಾರಾಂ ಪಾಂಡುರಂಗ

5. ಆತ್ಮೀಯ ಸಭಾದ ಸ್ಥಾಪಕರು ಯಾರು?
ಉತ್ತರ : ರಾಜಾರಾಮ ಮೋಹನರಾಯ

6. ಆತ್ಮೀಯ ಸಭಾದ ಮುಖ್ಯ ಆಶಯವೇನು?
ಉತ್ತರ : ಧಾರ್ಮಿಕ ಮತ್ತು ಸಾಮಾಜಿಕ ಪಿಡುಗಳನ್ನು ಸಮಾಜದಿಂದ ಹೋಗಲಾಡಿಸುವುದು.

7. ಸತಿ ಪದ್ಧತಿಯನ್ನು ನಿಷೇಧಿಸಿದವರು ಯಾರು?
ಉತ್ತರ : ವಿಲಿಯಂ ಬೆಂಟಿಂಕ್

8. ಭಾರತದ "ಪುನರುಜ್ಜೀವನದ ಜನಕ" ಮತ್ತು "ಭಾರತೀಯ ರಾಷ್ಟ್ರೀಯತೆಯ ಪ್ರವಾದಿ" ಎಂದು ಯಾರನ್ನು ಕರೆಯುವರು?
ಉತ್ತರ : ರಾಜಾರಾಮ ಮೋಹನರಾಯ

9. "ಯುವ ಬಂಗಾಳಿ" ಚಳುವಳಿಯನ್ನು ಪ್ರಾರಂಭಿಸಿದವರು ಯಾರು?
ಉತ್ತರ : ಹೆನ್ರಿ ವಿವಿಯನ್ ಡಿರೇಜಿಯೊ

10. ಆರ್ಯ ಸಮಾಜದ ಸ್ಥಾಪಕರು ಯಾರು?
ಉತ್ತರ : ದಯಾನಂದ ಸರಸ್ವತಿ

11. ದಯಾನಂದ ಸರಸ್ವತಿಯವರು ಬರೆದ ಪುಸ್ತಕ ಯಾವುದು?
ಉತ್ತರ : ಸತ್ಯಾರ್ಥ ಪ್ರಕಾಶ

12. "ವೇದಗಳಿಗೆ ಮರಳಿ" ಇದು ಯಾರು ಘೋಷಣೆ?
ಉತ್ತರ : ದಯಾನಂದ ಸರಸ್ವತಿ

| |
|---|
| 13. ವೇದಗಳಿಗೆ ಮರಳಿ ಎಂದರೇನು?<br>ಉತ್ತರ : ಆಧುನಿಕ ಭಾರತದ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ. |
| 14. ಆರ್ಯಸಮಾಜದ ಪ್ರಮುಖ ಕಾರ್ಯಸೂಚಿ ಯಾವುದು?<br>ಉತ್ತರ: ಶುದ್ಧಿ ಚಳುವಳಿ |
| 15. ಶುದ್ಧಿ ಚಳುವಳಿ ಎಂದರೇನು?<br>ಉತ್ತರ: ಹಿಂದೂ ಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದು. |
| 16. ಗೋ ರಕ್ಷಣಾ ಸಂಘವನ್ನು ಸ್ಥಾಪಿಸಿದವರು ಯಾರು?<br>ಉತ್ತರ: ಆರ್ಯಸಮಾಜ |
| 17. ಸತ್ಯ ಶೋಧಕ ಸಮಾಜದ ಸ್ಥಾಪಕರು ಯಾರು?<br>ಉತ್ತರ: ಜ್ಯೋತಿಭಾ ಫುಲೆ |
| 18. ‘ಗುಲಾಮಗಿರಿ’ ಎಂಬ ಗ್ರಂಥವನ್ನು ಯಾರು ರಚಿಸಿದರು?<br>ಉತ್ತರ: ಜ್ಯೋತಿಭಾ ಫುಲೆ |
| 19. ಅಲಿಘರ್ ಸುಧಾರಣಾ ಚಳುವಳಿಯನ್ನು ಯಾರು ಆರಂಭಿಸಿದರು?<br>ಉತ್ತರ: ಸರ್ ಸಯ್ಯದ್ ಅಹಮದ್ ಖಾನ್ |
| 20. ಆಂಗ್ಲೋ ಓರಿಯೆಂಟಲ್ ಕಾಲೇಜಿನ ಈಗಿನ ಹಸರೇನು?<br>ಉತ್ತರ: ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ |
| 21. ರಾಮಕೃಷ್ಣ ಮಿಷನ್ ಸ್ಥಾಪಕ ಯಾರು?<br>ಉತ್ತರ: ಸ್ವಾಮಿ ವಿವೇಕಾನಂದರು |
| 22. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ ಎಲ್ಲಿ ಮತ್ತು ಯಾವಾಗ ಸ್ಥಾಪಿಸಿದರು?<br>ಉತ್ತರ: ಕಲ್ಕತ್ತಾ ಬಳಿಯ ಬೇಲೂರು 1897ರಲ್ಲಿ ಸ್ಥಾಪನೆ. |
| 23. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಠವನ್ನು ಎಲ್ಲಿ ಸ್ಥಾಪಿಸಿದರು?<br>ಉತ್ತರ: ಮಾಯಾವತಿಯಲ್ಲಿ |
| 24. ವಿಶ್ವ ಧಾರ್ಮಿಕ ಸಮ್ಮೇಳನ ಎಲ್ಲಿ ನಡೆಯಿತು?<br>ಉತ್ತರ:ಅಮೇರಿಕಾದ ಚಿಕಾಗೋ |

25. ಕಾಂಗ್ರೆಸ್ ಆಫ್ ರಿಲಿಜಿಯನ್ಸ್ ಎಲ್ಲಿ ನಡೆಯಿತು?
ಉತ್ತರ: ಪ್ಯಾರಿಸ್

26. ಥಿಯೋಸಾಫಿಕಲ್ ಸೊಸೈಟಿಯನ್ನು ಯಾರು ಪ್ರಾರಂಭಿಸಿದರು?
ಉತ್ತರ: ಮೇಡಂ ಬ್ಲವಾಟ್‌ಸ್ಕೆ ಮತ್ತು ಕರ್ನಲ್ ಎಚ್.ಎಸ್.ಅಲ್ಕಾಟ್

27. ಥಿಯೋಸಾಫಿಕಲ್ ಸೊಸೈಟಿಯ ಕೇಂದ್ರ ಕಛೇರಿ ಎಲ್ಲಿದೆ?
ಉತ್ತರ: ಅಡ್ಯಾರ್‌ನಲ್ಲಿದೆ.

28. "ಶ್ವೇತ ಸರಸ್ವತಿ" ಎಂದು ಯಾರನ್ನು ಕರೆಯುವರು?
ಉತ್ತರ: ಅನಿಬೆಸೆಂಟ್

29. "ಶ್ವೇತ ಸರಸ್ವತಿ" ಎಂದು ಅನಿಬೆಸೆಂಟ್ ಅವರನ್ನು ಏಕೆ ಕರೆಯುವರು?
ಉತ್ತರ: ಭಗವದ್ಗೀತೆಯನ್ನು ಇಂಗ್ಲೀಷಿಗೆ ಅನುವಾದ ಮಾಡಿದ್ದರಿಂದ ಕರೆಯುವರು.

30. 'ನ್ಯೂ ಇಂಡಿಯಾ' ಮತ್ತು 'ಕಾಮನ್ ವ್ಹೀಲ್' ಪತ್ರಿಕೆ ಯಾರು ಹೊರಡಿಸಿದರು?
ಉತ್ತರ: ಅನಿಬೆಸೆಂಟ್

31. ಹೋಂ ರೂಲ್ ಲೀಗನ್ನು ಪ್ರಾರಂಭಿಸದವರು ಯಾರು?
ಉತ್ತರ: ಅನಿಬೆಸೆಂಟ್

32. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಮೊಟ್ಟ ಮೊದಲ ಮಹಿಳಾ ಅಧ್ಯಕ್ಷ ಯಾರು?
ಉತ್ತರ: ಅನಿಬೆಸೆಂಟ್

33. ಆಂಗ್ಲೋ–ಓರಿಯಂಟಲ್ ಕಾಲೇಜನ್ನು ಎಲ್ಲಿ ಸ್ಥಾಪಿಸಲಾಯಿತು?
ಉತ್ತರ: ಅಲಿಘಡ್

34. "ಬಿಳಿಯನ ಮೇಲಿನ ಹೊರೆ" ಸಿದ್ಧಾಂತ ಎಂದರೇನು?
ಉತ್ತರ: ಬ್ರಿಟಿಷರು ತಮ್ಮನ್ನು ನಾಗರಿಕರು ಎಂದು ಚಿತ್ರಿಸಿಕೊಳ್ಳುತ್ತಾ ತಾವು ಇಲ್ಲಿಗೆ ಬಂದಿರುವುದೇ ಭಾರತೀಯರನ್ನು ನಾಗರಿಕರನ್ನಾಗಿ ಮಾಡಲು ಎನ್ನುವ ಸಿದ್ಧಾಂತವನ್ನು "ಬಿಳಿಯನ ಮೇಲಿನ ಹೊರೆ"ಎನ್ನವರು

35. ಸ್ವಾಮಿ ವಿವೇಕಾನಂದರ ಗುರುಗಳ ಹೆಸರೇನು?
ಉತ್ತರ: ರಾಮಕೃಷ್ಣಾ ಪರಮಹಂಸರು

36. ಪೆರಿಯಾರ್ ಚಳವಳಿಯ ಮುಖ್ಯ ಉದ್ದೇಶವೇನು?
ಉತ್ತರ: ಜನಾಂಗೀಯ ತಾರತಮ್ಯ ವಿರೋಧಿಸುವುದು.

## ನೆನಪಿನಲ್ಲಿಡ ಬೇಕಾದ ಮುಖ್ಯ ಸಂಗತಿಗಳು

| ಕ್ರ.ಸಂ | ಪ್ರಮುಖ ಸಂಘಗಳು ಮತ್ತು ಚಳುವಳಿಗಳು | ಸ್ಥಾಪಕರು |
|---|---|---|
| 01 | ಬ್ರಹ್ಮ ಸಮಾಜ | ರಾಜಾರಾಮ ಮೋಹನ್‌ರಾಯ |
| 02 | ಆತ್ಮೀಯ ಸಭಾ | ರಾಜಾರಾಮ ಮೋಹನ್‌ರಾಯ |
| 03 | ಆರ್ಯಸಮಾಜ | ದಯಾನಂದ ಸರಸ್ವತಿ |
| 04 | ಪ್ರಾರ್ಥನಾ ಸಮಾಜ | ಡಾ// ಆತ್ಮರಾಮ್ ಪಾಂಡುರಂಗ |
| 05 | ಸತ್ಯ ಶೋಧಕ ಸಮಾಜ | ಜ್ಯೋತಿಭಾ ಪುಲೆ |
| 06 | ಅಲಿಘರ್ ಸುಧಾರಣಾ ಚಳುವಳಿ | ಸರ್ ಸಯ್ಯದ್ ಅಹ್ಮದಖಾನ್ |
| 07 | ರಾಮಕೃಷ್ಣ ಆಶ್ರಮ | ಸ್ವಾಮಿ ವಿವೇಕಾನಂದ |
| 08 | ಥಿಯೋಸಾಫಿಕಲ್ ಸೊಸೈಟಿ | ಮೇಡಂ ಬ್ಲವಾಟ್ & ಅಲ್ಕಾಟ್ |
| 09 | "ಹೋಮ್ ರೂಲ್ ಲೀಗ್" | ಅನಿಬೆಸೆಂಟ |
| 10 | ಆತ್ಮಗೌರವ ಚಳುವಳಿ | ರಾಮಸ್ವಾಮಿ ನಾಯ್ಕರ್ |
| 11 | ದ್ರಾವಿಡ ಕಳಗಂ ಸಂಘಟನೆ | ಪೆರಿಯಾರ್ |
| 12 | ಶುದ್ಧಿ ಚಳುವಳಿ | ದಯಾನಂದ ಸರಸ್ವತಿ |
| 13 | ವೇದಗಳಿಗೆ ಮರಣಿ | ದಯಾನಂದ ಸರಸ್ವತಿ |
| 14 | ಗೋ ರಕ್ಷಣಾ ಸಂಘ | ದಯಾನಂದ ಸರಸ್ವತಿ |

## ಪ್ರಮುಖವಾದ ಕೃತಿಗಳು ಹಾಗೂ ರಚನಾಕಾರರು

| ಕ್ರ.ಸಂ | ಪುಸ್ತಕಗಳು ಹಾಗೂ ಪತ್ರಿಗಳು | ರಚನಾಕಾರರು |
|---|---|---|
| 01 | "ಸಂವಾದ ಕೌಮುದಿ" | ರಾಜಾರಾಮ ಮೋಹನ್‌ರಾಯ |
| 02 | "ಸತ್ಯಾರ್ಥ ಪ್ರಕಾಶ" | ದಯಾನಂದ ಸರಸ್ವತಿ |
| 03 | "ಗುಲಾಮಗಿರಿ" | ಜ್ಯೋತಿಭಾ ಪುಲೆ |
| 04 | "ನ್ಯೂ ಇಂಡಿಯಾ"& "ಕಾಮನ್‌ವ್ವಿಲ್" | ಅನಿಬೆಸೆಂಟ |
| 05 | "ಜಸ್ಟೀಸ್" (ಪತ್ರಿಕೆ) | ಪೆರಿಯಾರ್ |

## ಇನ್ನಿತರ ಹೆಸರಗಳು

| ಕ್ರ.ಸಂ | ಇನ್ನಿತರ ಹೆಸರಗಳು | ಹೆಸರು |
|---|---|---|
| 01 | "ಆಧುನೀಕ ಭಾರತದ ಹರಿಕಾರ" | ರಾಜಾರಾಮ ಮೋಹನ್‌ರಾಯ |
| 02 | "ಪುನರುಜ್ಜೀವನದ ಜನಕ" | ರಾಜಾರಾಮ ಮೋಹನ್‌ರಾಯ |
| 03 | "ಭಾರತೀಯ ರಾಷ್ಟ್ರೀಯತೆಯ ಪ್ರವಾದಿ" | ರಾಜಾರಾಮ ಮೋಹನ್‌ರಾಯ |
| 04 | "ಶ್ವೇತ ಸರಸ್ವತಿ" | ಅನಿಬೆಸೆಂಟ |

# ಅಧ್ಯಾಯ-5
# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಬ್ರಹ್ಮ ಸಮಾಜದ ಬೋಧನೆಗಳಾವುವು?
ಉತ್ತರ:
* ಏಕದೇವತಾರಧನೆಗೆ ಪ್ರೋತ್ಸಾಹ
* ಬಾಲ್ಯ ವಿವಾಹಕ್ಕೆ ವಿರೋಧ
* ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ
* ಸತಿ ಪದ್ಧತಿಗೆ ವಿರೋಧ

2. ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ?
ಉತ್ತರ:
* ವೇದಗಳು ಸತ್ಯ ಮತ್ತು ಜ್ಞಾನದ ಪ್ರತೀಕ ಅದ್ದರಿಂದ ಸ್ವಾಮಿ ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂದುರುಗಿ' ಎಂಬ ಘೋಷಣೆಯನ್ನು ನೀಡಿದರು.

3. ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿರಿ?
ಉತ್ತರ:
* ಶೂದ್ರರು ಹಾಗೂ ಮಹಿಳೆಯರಿಗೆ ಶಾಲೆಗಳ ಸ್ಥಾಪನೆ
* ಸಮಾನತೆಯ ಹಕ್ಕಿಗಾಗಿ ಪ್ರೋತ್ಸಾಹ
* ಜಾತಿ ಪದ್ಧತಿಯನ್ನು ವಿರೋಧಿಸುವುದು.
* ಮಾನವ ಹಕ್ಕುಗಳ ನಿರಾಕರಣೆಯನ್ನು ಖಂಡಿಸುವುದು.

4. ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ?
ಉತ್ತರ:
* ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದು.
* ಬಹುಪತ್ನಿತ್ವಕ್ಕೆ ವಿರೋಧ
* ಮುಸ್ಲಿಂ ಸಮಾಜದಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು
* ಪಾಶ್ಚಿಮಾತ್ಯ ವಿಜ್ಞಾನ ಹಾಗೂ ಸಂಸ್ಕೃತಿಯನ್ನು ಪ್ರಸಾರ ಮಾಡುವುದು.

5. ರಾಮಕೃಷ್ಣ ಮಿಷನ್ನಿನ ದೃಷ್ಟಿಕೋನವನ್ನು ವಿವರಿಸಿರಿ?
ಉತ್ತರ:
* ರಾಮಕೃಷ್ಣ ಪರಮಹಂಸರ ಬೋಧನೆಗಳ ಪ್ರಸಾರ
* ಭಾರತೀಯ ತತ್ವಜ್ಞಾನದ ಮಹತ್ವವನ್ನು ತಿಳಿಸುವುದು.
* ಜಾತಿರಹಿತ ಸಮಾಜದ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.
* ಬಡತನ, ಶೋಷಣೆ, ಅನಕ್ಷರತೆಯ ನಿರ್ಮೂಲನೆ ಮಾಡುವುದು.

6. ಸ್ವಾಮಿ ವಿವೇಕಾನಚಿದರು ಯುವಶಕ್ತಿಯ ಪ್ರೇರಕರಾಗಿದ್ದರು ಹೇಗೆ ಎಂಬುದನ್ನು ವಿವರಿಸಿ?
ಉತ್ತರ:
* ಇವರು ಯುವಕರಿಗೆ"ಏಳಿ, ಏದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂದು ಕರೆ ನೀಡಿದರು
* ವ್ಯಕ್ತಿಯಲ್ಲಿರುವ ಸಾಮರ್ಥ್ಯದ ಪೂರ್ಣ ಬಳಿಕೆಯನ್ನು ಪ್ರೇರೇಪಿಸಿದರು.
* ಸಮಾಜ ಸೇವೆಯ ಮಹತ್ವವನ್ನು ತಿಳಿಸಿದರು.
* ಭಾರತದ ಸಂಸ್ಕೃತಿಯ ಮಹತ್ವವನ್ನು ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ವಿಶ್ವಕ್ಕೆ ಸಾರಿದರು.

7. ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು?
ಉತ್ತರ:
* ಸಮಾನತೆ ಹಾಗೂ ಸಹೋದರತೆಯನ್ನು ವೃದ್ಧಿಸುವುದು
* ವಿಶ್ವಭಾತೃತ್ವದ ನಿರ್ಮಾಣ
* ಮಾನವನ ಸುಪ್ತ ಶಕ್ತಿಗಳನ್ನು ಪತ್ತೆ ಹಚ್ಚುವುದು.
* ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸುವುದು

8. ನಾರಾಯಣ ಗುರು ಧರ್ಮದ ಪರಿಪಾಲನೆ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ?
ಉತ್ತರ:
* ಹಿಂದುಳಿದ ಹಾಗೂ ಶೋಷಿತ ಸಮುದಾಯಗಳನ್ನು ಬಲಪಡಿಸುವುದು.
* ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಹಾಗೂ ಒಂದೇ ದೇವರು
* ಶಿಕ್ಷಣವನ್ನು ಪ್ರೋತ್ಸಾಹಿಸುವುದು.
* ಹಿಂದುಳಿದ ವರ್ಗದವರಿಗಾಗಿ ದೇವಾಲಯಗಳ ನಿರ್ಮಾಣ
* 'ವೈಕಂ' ಎಂಬ ಸತ್ಯಾಗ್ರಹ ನಡೆಸುವುದು.

9. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿಮಾಡಿ?
ಉತ್ತರ:
* ಆರ್ಯರು ಬ್ರಾಹ್ಮಣರ ಹೆಸರಿನಲ್ಲಿನ ಜನಾಂಗೀಯ ತಾರತಮ್ಯವನ್ನು ವಿರೋಧಿಸುವುದು.
* ಸಂಸ್ಕೃತ ಸಾಹಿತ್ಯ ಹಾಗೂ ಭಾಷೆಗೆ ವಿರೋಧ
* ಜಾತಿ, ಲಿಂಗಾಧಾರಿತ ತಾರತಮ್ಯಕ್ಕೆ ವಿರೋಧ ಹಾಗೂ ಸಮಾಜತೆಗೆ ಆದ್ಯತೆ ನೀಡುವುದು
* ಜಾತಿ ಲಿಂಗ ಹಾಗೂ ಧಾರ್ಮಿಕ ತಾರತಮ್ಯವನ್ನು ವಿರೋಧಿಸುವುದು.

10. ಪ್ರಾರ್ಥನಾ ಸಮಾಜದ ಉದ್ದೇಶಗಳೇನು?
ಉತ್ತರ:
* ಇದು ವಿಧವಾ ವಿವಾಹವನ್ನು ಪ್ರೋತ್ಸಾಹಿಸುವುದು.
* ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡಿತು.

* ಅಂತರ್ಜಾತಿಯ ವಿವಾಹವನ್ನು ಪ್ರೋತ್ಸಾಹಿಸಿತು
* ಸಹ ಭೋಜನವನ್ನು ಪ್ರೇರೇಪಿಸಿತು.

11. ಬ್ರಹ್ಮ ಸಮಾಜ/ಆರ್ಯಸಮಾಜ/ಪ್ರಾರ್ಥನಾ ಸಮಾಜ/ಸತ್ಯ ಶೋಧಕ ಸಮಾಜದ ತತ್ವಗಳೇನು?

ಉತ್ತರ:

* ಮೂರ್ತಿ ಪ್ರಜೆ ಮತ್ತು ಬಾಲ್ಯ ವಿವಾಹ ಖಂಡಿಸಿತು
* ಸತಿ ಸಹಗಮನ ಪದ್ಧತಿ ಮತ್ತು ಬಹುಪತ್ನಿತ್ವ ವಿರೋಧಿಸಿತು
* ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಿತು ಮತ್ತು ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡಿತು
* ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ವಿರುದ್ಧ ಹೋರಾಟ ಮಾಡಿತು.

******* ಮುಕ್ತಾಯ******

## ಅಧ್ಯಾಯ-1
## ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

### I. ಒಂದು ಅಂಕದ ಪ್ರಶ್ನೋತ್ತರಗಳು.

1. ನಿರುದ್ಯೋಗ ಎಂದರೇನು?
ಉತ್ತರ : ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗ ಸಿಗದಿರುವ ಪರಿಸ್ಥಿತಿಯನ್ನು ನಿರುದ್ಯೋಗ ಎನ್ನವರು.

2. ಪ್ರಾದೇಶಿಕವಾದ ಎಂದರೇನು?
ಉತ್ತರ : ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು ಪ್ರಾದೇಶಿಕವಾದ ಎನ್ನುವರು.

3. ಭ್ರಷ್ಟಾಚಾರ ಎಂದರೇನು?
ಉತ್ತರ : ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವುದನ್ನು ಭ್ರಷ್ಟಾಚಾರ ಎನ್ನುವರು.

4. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು ಯಾವ ಸಂಸ್ಥೆ ತೆರೆಯಲಾಗಿದೆ?
ಉತ್ತರ : ಲೋಕಾಯುಕ್ತ

5. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ವಿಭಜನೆಯಾದದ್ದು ಯಾವಾಗ?
ಉತ್ತರ : 1953

6. ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಬಡತನದ ದರ ಎಷ್ಟು?
ಉತ್ತರ : ಶೇಕಡಾ 21.9

7. ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಿದ ವಿಧಿ ಯಾವುದು?
ಉತ್ತರ : 371(ಜೆ)

8. 'ಸ್ತ್ರೀ ಶಕ್ತಿ' ಕಾರ್ಯಕ್ರಮದ ಉದ್ದೇಶವೇನು?
ಉತ್ತರ : ಗ್ರಾಮಾಂತರ ಮಹಿಳೆಯರ ವಿಕಾಸ

9. ಕೋಮುವಾದ ಎಂದರೇನು?
ಉತ್ತರ : ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಎನ್ನುವರು. ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ

10. ಯಾವುದನ್ನು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ ಎಂದು ಕರೆಯಲಾಗಿದೆ?
ಉತ್ತರ : ಭಯೋತ್ಪಾದಕತೆ

| | |
|---|---|
| 11. ಮುಂಬೈಯ ತಾಜ್ ಹೋಟಲ ಮೇಲೆ ಯಾವಾಗ ಧಾಳಿ ನಡೆಯಿತು?<br>ಉತ್ತರ : 2007 ನವಂಬರ್ 26 | |
| 12. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು?<br>ಉತ್ತರ : ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎನ್ನುವರು. | |
| 13. 2001 ರ ಡಿ.ಎಂ. ನಂಜುಂಡಪ್ಪ ಸಮಿತಿಯ ಉದ್ದೇಶವೇನು?<br>ಉತ್ತರ : ಪ್ರಾದೇಶಿಕ ಅಸಮತೋಲನ ನಿವಾರಣೆ. | |
| 14. ನಿರುದ್ಯೋಗಕ್ಕೆ ಮುಖ್ಯ ಕಾರಣಗಳೇನು?<br>ಉತ್ತರ : ಮಿತಿ ಮೀರಿದ ಜನಸಂಖ್ಯೆ ಮತ್ತು ಹೆಚ್ಚಾದ ತಂತ್ರಜ್ಞಾನದ ಬಳಕೆ. | |
| 15. ಕಾರ್ಪೋರೇಟ್ ತಂತ್ರಗಾರಿಕೆಯ ಮುಖ್ಯ ಉದ್ದೇಶವೇನು?<br>ಉತ್ತರ : ಲಾಭವನ್ನು ಪಡೆಯವುದು. | |
| 16. ಭಯೋತ್ಪಾದಕತೆ ಎಂದರೇನು?<br>ಉತ್ತರ : ಉಗ್ರಗಾಮಿ ಸಂಘಟನೆಗಳ ಉದ್ದೇಶ ಇಡೇರಿಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯೇ ಭಯೋತ್ಪಾದಕತೆ. | |

# ಅಧ್ಯಾಯ–1
# ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

## II. ಎರಡು ಅಂಕದ ಪ್ರಶ್ನೋತ್ತರಗಳು.

1. ನಿರುದ್ಯೋಗ ನಿವಾರಣೆಗೆ ಹಾಕಿಗೊಂಡ ಕಾರ್ಯಕ್ರಮಗಳಾವುವು?

* ಜನಸಂಖ್ಯಾ ನಿಯಂತ್ರಣ
* ಕೃಷಿ ಅಭಿವೃದ್ಧಿ
* ಪಂಚವಾರ್ಷಿಕ ಯೋಜನೆಗಳು
* ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ
* ಉದ್ಯೋಗ ಖಾತರಿ ಯೋಜನೆಗಳು

2. ಕೋಮುವಾದ ದೇಶದ ಐಕ್ಯತೆಗೆ ಮಾರಕ ಹೇಗೆ?

* ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ. ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆ , ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯಲ್ಲಿ ಪ್ರಕಟವಾಗುತ್ತದೆ.
* ಭಾರತದ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ ಅಪಾಯ ತಂದೊಡ್ಡುವ ಶಕ್ತಿಯಾಗಿದೆ.
* ಅದು ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
* ಈ ಮತೀಯವಾದ ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.

3. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
* ಮಹಿಳೆಯರ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಸ್ಥಾನಮಾನವನ್ನು ಉತ್ತಮ ಪಡಿಸಲಾಗುತ್ತದೆ.
* ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧಕಾಯ್ದೆ, ವರದಕ್ಷಿಣ ನಿಷೇಧ ಕಾಯ್ದೆ, ಮುಂತಾದ ಕಾರ್ಯಕ್ರಮ
* ಕರ್ನಾಟಕ ಸರ್ಕಾರವು ' ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿ. ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ.
* ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.
* ಮಹಿಳಾಮಂಡಲಗಳು, ಸ್ತ್ರೀ ಶಕಿ ಸಂಘಗಳು, ಸ್ವಸಹಾಯ ಸಂಘಗಳು ಮಹಿಳಾ ಸಹಕಾರಿ

ಸಂಘಗಳು

* ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳೆಯರಿಗೆ ಆಯೋಗದ ಮೂಲಕ ಸ್ತ್ರೀಯರ ದೂರುಗಳನ್ನು ಪರಿಶೀಲಿಸಿ ನ್ಯಾಯ ಒದಗಿಸಿಕೊಡುತ್ತಿದೆ.
* ಶಾಸಕಾಂಗ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಗಿದೆ.
* ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯಿರಿಗೆ ಮೀಸಲಾತಿ ನೀಡಲಾಗಿದೆ.

4. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕಾರ್ಯಕ್ರಮಗಳಾವುವು?

* ಭಾರತದ ಸಂವಿಧಾನದ 371 ನೇ ವಿಧಿಗೆ A ಯಿಂದ J ವರಗೆ ತಿದ್ದುಪಡಿಗಳ ಮೂಲಕ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡಲಾಗಿದೆ.
* ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ.
* ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲವನ್ನು ಹೋಗಲಾಡಿಸಲು 2001 ರಲ್ಲಿ ಡಿ.ಎಂ. ನಂಜುಂಡಪ್ಪ ಸಮಿತಿ ತನ್ನ ವರದಿ ನೀಡಿದೆ.
* ಇದಕ್ಕೆ ಪೂರಕವಾಗಿ ಸಂವಿಧಾನದ ವಿಧಿ 371 ಜೆ ಸೇರ್ಪಡೆ ಮಾಡುವುದರ ಮೂಲಕ ಹಿಂದುಳಿದ ಪ್ರದೇಶಗಳಿಗೆ ಉತ್ತಮ ಸ್ಥಾನಮಾನ ನೀಡಿದೆ.

5. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?

* ಭಯೋತ್ಪಾದಕತೆಯು ವ್ಯಕ್ತಿಗಳ ಸೊತ್ತುಗಳಿಗೆ ಅಪಾರ ಹಾನಿ ಉಂಟುವಾಡಿತ್ತವೆ.
* ಭಯೋತ್ಪಾದಕತೆಯು ಮಾನಸಿಕ ವೇದನೆಯನ್ನು ನೀಡುತ್ತವೆ.
* ಸರ್ಕಾರದ ಆಡಳಿತ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.
* ಅತ್ಯಧಿಕ ಸಾವುನೋವು ಉಂಟಾಗುತ್ತದೆ.
* ಸ್ಫೋಟಕ ವಸ್ತು ಮತ್ತು ವಿಷಾನಿಲವನ್ನು ಬಳಸಲು ಅವಕಾಶ ಮಾಡಿಕೊಂಡುತ್ತದೆ.

6. ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?

* ಗಡಿ ಗಸ್ತನ್ನು ಬಿಗಿಗೊಳಿಸುವುದು.
* ಭಯೋತ್ಪಾದಕ ನಿಗ್ರಹ ದಳದ ರಚನೆ
* ಅವಶ್ಯಕ ಸಂಧರ್ಭದಲ್ಲಿ ಸೇನಾಪಡೆಗಳ ಬಳಕೆ
* ಆಧುನಿಕ ತಂತ್ರಜ್ಞಾನದ ಒಳಕೆ.

7. ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ ಚರ್ಚಿಸಿ.?

* ಅತಿಯಾದ ಪ್ರದೇಶಗಳ ಚಾರಿತ್ರಿಕ ಹಿನ್ನಲೆ, ಸಾಮಾಜಿಕ ಕಟ್ಟುಪಾಡುಗಳು, ಆರ್ಥಿಕ ವಿಚಾರಗಳು, ಸಾಂಸ್ಕೃತಿಕ ವಿಭಿನ್ನತೆಗಳು ಹಾಗೂ ಭೌಗೋಳಿಕ ಪರಿಸರ–ಅಲ್ಲಿನ ಜನ ಸಮುದಾಯದಲ್ಲಿ ಪ್ರಾದೇಶಿಕವದವನ್ನು ಸಹಜವಾಗಿ ಬೆಳೆಸುತ್ತದೆ.
* ಅತಿಯಾದ ಭಾಷಾಭೀಮಾನವು ರಾಷ್ಟ್ರೀಯವಾದದ ವಿರುದ್ಧ ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ.
* ಪ್ರಾದೇಶಿಕವಾದವನ್ನು ವೈಭವೀಕರಿಸುವ್ಯದರಿಂದ ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ.
* ಇತ್ತೀಚೆಗೆ ಆಂದ್ರಪ್ರದೇಶದಲ್ಲಿನ ತೆಲಂಗಾಣದ ಭಾಗದ ಪ್ರಾದೇಸಶಿಕವಾದದ ಹೋರಾಟವನ್ನು

ಗಮನಿಸಬಹುದು.

* ದೇಶದ ಇನ್ನಿತರ ಭಾಗಗಳಲ್ಲಿ ನಡೆಯುತ್ತಿರುವ ಪ್ರಾದೇಶಿಕವಾದದ ಹೋರಾಟಗಳು ಕೂಡಾ ದೇಶದ ಅಭಿವೃದ್ಧಿ ತೊಡಕಾಗುವ ಸಾಧ್ಯತೆಗಳಿವೆ.

8. ಕಾರ್ಪೋರೇಟ್ ತಂತ್ರಗಾರಿಗೆ ಎಂದರೇನು? ಅದರ ಪ್ರಸ್ತುತ ಬೆಳೆವಣಿಗೆಯನ್ನು ಕುರಿತು ವಿವರಿಸಿರಿ.

ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎನ್ನುವರು.

* ಇಂದಿನ ಕಾರ್ಪೋರೇಟ್ ತಂತ್ರಗಾರಿಕೆ ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ.
* ಇದರ ಉದ್ದೇಶ ಅಧಿಕ ಲಾಭ ಪಡೆಯುವದಾಗಿದೆ.
* ಇದರಿಂದ ನಕಾರಾತ್ಮಕವಾದ ಬೆಳೆವಣಿಗಳು ವ್ಯಕ್ತಿಯ ಜೀವನ ಸಮಾಜ ಮತ್ತು ರಾಷ್ಟ್ರಗಳ ಮೇಲುಂಟಾಗುತ್ತದೆ.
* ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲೂ ಕಾರ್ಪೋರೇಟ್ ತಂತ್ರಗಾರಿಕೆ ತನ್ನ ಪ್ರಭಾವನ್ನು ಬೀರಿದೆ.
* ಸಮಾಜಿಕ ಹೊಣೆಗಾರಿಕಾ ಯೋಜನೆಗಳ ಮೂಲಕ ಸಾಕಷ್ಟು ಸಮಾಜ ಸೇವೆ ಮಾಡುತ್ತಿದೆ.

*********ಮುಕ್ತಾಯ*********

# ಅಧ್ಯಾಯ-2
# ಭಾರತದ ವಿದೇಶಾಂಗ ನೀತಿ

## I. ಒಂದು ಅಂಕದ ಪ್ರಶ್ನೋತ್ತರಗಳು.

1. "ವಿದೇಶಾಂಗ ನೀತಿ" ಎಂದರೇನು?

ಉತ್ತರ : ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ವಿದೇಶಾಂಗ ನೀತಿ

2. ಭಾರತದ ವಿದೇಶಾಂಗ ನೀತಿಯ ರೂವಾರಿ ಯಾರು?

ಉತ್ತರ : ಜವಾಹರ್ ಲಾಲ್ ನೆಹರು

3. ಭಾರತದ ವಿದೇಶಾಂಗ ನೀತಿಯನ್ನು ನೆಹರೂವರ ವಿದೇಶಾಂಗ ನೀತಿ ಎಂದು ವರ್ಣಿಸಿದ್ದಾರೆ ಏಕೆ?

ಉತ್ತರ : ಪ್ರಧಾನ ಮಂತ್ರಿಯ ಹುದ್ದೆಯ ಜೊತೆಗೆ ವಿದೇಶಾಂಗ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿದ್ದರಿಂದ ನೆಹರೂವರ ವಿದೇಶಾಂಗ ನೀತಿ ಎನ್ನುವರು

4. "ಅಲಿಪ್ತ ನೀತಿ" ಎಂದರೇನು?

ಉತ್ತರ : ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು ಅಲಿಪ್ತ ನೀತಿಯನ್ನು ಎನ್ನುವರು

5. ಪಂಚಶೀಲ ತತ್ವಗಳಿಗೆ ಯಾವಾಗ ಸಹಿ ಹಾಕಲಾಯಿತು?

ಉತ್ತರ : 1954

6. ಪಂಚಶೀಲ ತತ್ವಗಳಿಗೆ ಸಹಿ ಹಾಕಿದವರು ಯಾರು?

ಉತ್ತರ : ಚೀನಾದ ಪ್ರಧಾನಿ ಚೌ.ಎನ್.ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರ್ ಲಾಲ್ ನೆಹರು

7. ದ್ವಿತೀಯ ಮಹಾಯುದ್ಧದ ಬಳಿಕ ಜಗತ್ತು ಎರಡು ಶಕ್ತಿಶಾಲಿ ಬಣಗಳಾಗಿ ರಚನೆಯಾಯಿತು? ಅವು ಯಾವುವು?

ಉತ್ತರ : ಅಮೇರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ರಷ್ಯಾ

8. ಸಾರ್ವಭೌಮ ರಾಷ್ಟ್ರ ಎಂದರೇನು?

ಉತ್ತರ : ಒಂದು ರಾಷ್ಟ್ರ ಆಂತರಿಕವಾಗಿ ಮತ್ತು ಬಾಹ್ಯವಾಗಿ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ರಾಷ್ಟ್ರ

9. ವಸಾಹತು ಶಾಹಿತ್ವ ಎಂದರೇನು?

ಉತ್ತರ : ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದನ್ನು ವಸಾಹತು ಶಾಹಿತ್ವ

| |
|---|
| 10. ಆಫ್ರಿಕಾಗಾಂಧಿ ಎಂದು ಪ್ರಸಿದ್ಧರಾದವರು ಯಾರು?<br>ಉತ್ತರ : ನೆಲ್ಸನ್ ಮಂಡೇಲಾ |
| 11. ಭಾರತದ ಸಂವಿಧಾನದ 51 ವಿಧಿಯ ಮಹತ್ವವೇನು?<br>ಉತ್ತರ : ಅಂತರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರಾಷ್ಟ್ರೀಯ ಕಾನೂನಿಗೆ ಗೌರವ ಕೊಡುವುದು |
| 12. ನಿಶ್ಯಸ್ತ್ರೀಕರಣ ಎಂದರೇನು?<br>ಉತ್ತರ : ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತ ಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣ |
| 13. "ವರ್ಣಭೇದ ನೀತಿ" ಎಂದರೇನು?<br>ಉತ್ತರ : ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎನ್ನುವರು. |
| 14. ಭಾರತದ ಮೊಟ್ಟಮೊದಲ ವಿದೇಶಾಂಗ ಮಂತ್ರಿ ಯಾರು?<br>ಉತ್ತರ : ಜವಾಹರ್ ಲಾಲ್ ನೆಹರು |

## ಪ್ರಮುಖವಾದ ಘಟನಾವಳಿಗಳು

| ಕ್ರ.ಸಂ | ಇಸ್ವಿಗಳು | ಘಟನಾವಳಿ |
|---|---|---|
| 1 | 1947 | ಭಾರತ ಸಾರ್ವಭೌಮ ರಾಷ್ಟ್ರವಾಯಿತು. |
| 2 | 1946 | ಜವಾಹರ್ ಲಾಲ್ ನೆಹರವರ ಮೊದಲ ವಿದೇಶಾಂಗ ನೀತಿಯ ಬಗ್ಗೆ ರೇಡಿಯೋ ಭಾಷಣ |
| 3 | 1954 | ಪಂಚಶೀಲ ಒಪ್ಪಂದ ನಡೆದ ವರ್ಷ |
| 4 | 1965 | ಭಾರತ ಮತ್ತು ಪಾಕಿಸ್ತಾನ ಯುದ್ಧ ಭಾರತಕ್ಕೆ ಜಯ |
| 5 | 1971 | ಭಾರತ ಮತ್ತು ಪಾಕಿಸ್ತಾನ ಯುದ್ಧ ಭಾರತಕ್ಕೆ ಜಯ |

## ಪ್ರಮುಖವಾದ ಘಟನಾವಳಿಗಳು

1. ವಿದೇಶಾಂಗ ನೀತಿಯ ರೂವಾರಿ..............................................ಜವಾಹರ್ ಲಾಲ್ ನೆಹರು
2. ಅಲಿಪ್ತ ನೀತಿ................................. ಯಾವುದೇ ಶಕ್ತಿಶಾಲಿ ಬಣಕ್ಕೆ ಸೇರದೆ ಇರುವುದು.

# ಅಧ್ಯಾಯ-2
# ಭಾರತದ ವಿದೇಶಾಂಗ ನೀತಿ

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತದ ವಿದೇಶಾಂಗ ನೀತಿಯ ಪ್ರಮುಖ ಗುರಿಗಳಾವುವು?
* ರಾಷ್ಟ್ರದ ಭದ್ರತೆ
* ರಾಷ್ಟ್ರದ ಆರ್ಥಿಕ ಸಂವರ್ಧನೆ
* ಸಾಂಸ್ಕೃತಿಕ ಮೌಲ್ಯಗಳ ಪ್ರಸಾರ
* ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ಶತ್ರುರಾಷ್ಟ್ರಗಳ ನಿರ್ಬಂಧ
* ವಿಶ್ವಶಾಂತಿ ಮತ್ತು ಸಹಬಾಳ್ವೆ ಸಾಧಿಸುವುದು.

2. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು?
* ಪಂಚಶೀಲ ತತ್ವಗಳು
* ವಸಾಹತುಶಾಹಿಗೆ ವಿರೋಧ
* ವರ್ಣಭೇದ ನೀತಿಗೆ ಭೋಧ
* ಅಲಿಪ್ತ ನೀತಿ
* ನಿಶಸ್ತ್ರೀಕರಣ

3. ಪಂಚಶೀಲ ತತ್ವಗಳನ್ನು ಪಟ್ಟಿಮಾಡಿ?
* ಪರಸ್ಪರ ರಾಷ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ
* ಪರಸ್ಪರ ಆಕ್ರಮಣ ಮಾಡದಿರುವುದು.
* ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.
* ಪರಸ್ಪರ ಸಹಾಕಾರ ಮತ್ತು ಸಮಾನತೆ
* ಶಾಂತಿಯುತ ಸಹಬಾಳ್ವೆ

4. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ?
* ಇದು ಶಸ್ತ್ರಾಸ್ತ್ರ ಪೈಪೋಟಿಯನ್ನು ತಗ್ಗಿಸುತ್ತದೆ
* ಯುದ್ಧದ ಸಂಭವನೀಯತರಯು ಕುಗುತ್ತದೆ.
* ವಿಶ್ವಶಾಂತಿ ನೆಲೆಸುತ್ತದೆ.
* ಮೂರನೇ ಮಹಾಯುದ್ಧದ ಭೀತಿಯನ್ನು ದೂರಮಾಡಲು ಅಗತ್ಯ
* ಅಣ್ವಸ್ತ್ರಗಳ ಬಳಕೆಯ ಭೀತಿಯನ್ನು ಹೊಗಲಾಡಿಸಲು ಸಹಾಯಕ

5. ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿ ಸಹಕಾರಿ ಹೇಗೆ?
* ಇದರಿಂದ ದೇಶಗಳ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ.
* ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ.
* ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ
* ಬಂಡವಾಳ ಸಂಚಯನಕ್ಕೆ ಸಹಕಾರಿ
* ತಂತ್ರಜ್ಞಾನ ವಿನಿಮಯಕ್ಕೆ ಅವಕಾಶ ಸಿಗುತ್ತದೆ.
* ಹಣಕಾಸಿನ ನೆರವು ಪಡೆಯಲು ಸಹಕಾರಿ

6. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?
* ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು
* ಇದು ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರದರ್ಶಿಸುತ್ತದೆ.
* ಒಂದು ದೇಶದ ಸಾರ್ವಭೌಮತ್ವಕ್ಕೆ ತೊಡಕಾಗಿದೆ.
* ದೇಶದ ಸಂಪನ್ಮೂಲಗಳ ಲೂಟಿಗೆ ಅವಕಾಶ ನೀಡುತ್ತದೆ.
* ಮಾನವ ಹಕ್ಕುಗಳ ಉಲ್ಲಂಘನೆಗೂ ಕಾರಣವಾಗಿದೆ.
* ಭಾರತವು ಬ್ರಿಟನ್ನಿನ ವಸಾಹತುವಾಗಿ ಸಾಕಷ್ಟು ತೊಂದರೆಗೊಳಗಾಗಿದೆ.

7. ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳು ಯಾವುವು?
* ರಾಷ್ಟ್ರೀಯ ಹಿತಾಸಕ್ತಿಗಳು.
* ಭೌಗೋಳಿಕ ಅಂಶಗಳು.
* ರಾಜಕೀಯ ಪರಿಸ್ಥಿತಿ.
* ಆರ್ಥಿಕ ವ್ಯವಸ್ಥೆ
* ರಕ್ಷಣಾ ಸಾಮರ್ಥ್ಯ
* ಜನಾಭಿಪ್ರಾಯ
* ಅಂತರಾಷ್ಟ್ರೀಯ ಪರಿಸರ.

*******ಮುಕ್ತಾಯ*******

# ಅಧ್ಯಾಯ-3
# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

## I. ಒಂದು ಅಂಕದ ಪ್ರಶ್ನೋತ್ತರಗಳು.

| |
|---|
| 1. ಸಂವಿಧಾನದ 51ನೇ ವಿಧಿಯ ಮಹತ್ವವೇನು?<br>ಉತ್ತರ: 51ನೇ ವಿಧಿಯಲ್ಲಿ ಅಂತರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ತಿಳಿಸಲಾಗಿದೆ. |
| 2. ಭಾರತದ ಭೂಪ್ರದೇಶಕ್ಕೆ ಹೊಂದಿಕೊಂಡಿರುವ ದೊಡ್ಡ ನೆರೆಯ ರಾಷ್ಟ್ರ ಯಾವುದು?<br>ಉತ್ತರ: ಭಾರತದ ಭೂಪ್ರದೇಶಕ್ಕೆ ಕೊಂದಿಕೊಂಡಿರುವ ದೊಡ್ಡ ನೆರೆಉ ರಾಷ್ಟ್ರ ಚೀನಾ |
| 3. ಯಾವ ದೇಶಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿತು?<br>ಉತ್ತರ: ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿತು |
| 4. ಭಾರತ ಯಾವ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ?<br>ಉತ್ತರ: ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. |
| 5. 1966ರ ತಾಷ್ಕೆಂಟಿನಲ್ಲಿ ಭಾರತ-ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ಯಾವ ದೇಶ ಸಹಕರಿಸಿತು?<br>ಉತ್ತರ: ರಷ್ಯಾ |
| 6. ಭಾರತದ ಭಿಲ್ಯಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ ಯಾವುದು?<br>ಉತ್ತರ: ಸೋವಿಯತ್ ರಷ್ಯಾ |
| 7. 20ವರ್ಷಗಳ ಶಾಂತಿ,ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳು ಯಾವುವು?<br>ಉತ್ತರ: ಭಾರತ ಮತ್ತು ರಷ್ಯಾ |
| 8. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ನೀಡಬೇಕೆಂದು ಯಾವ ದೇಶ ಪ್ರತಿಪಾದಿಸುತಿದೆ?<br>ಉತ್ತರ : ರಷ್ಯಾ |
| 9. ಪಂಚಶೀಲ ತತ್ವ ಒಪ್ಪಂದ ಯಾವ ಎರಡು ದೇಶಗಳ ನಡುವೆ ನಡೆಯಿತು?<br>ಉತ್ತರ : ಭಾರತ ಮತ್ತು ಚೀನಾ |

| |
|---|
| 10. ಚೀನಾ ಭಾರತದ ಮೇಲೆ ಆಕ್ರಮಣ ಮಾಡಿದ ವರ್ಷ ಯಾವುದು?<br>ಉತ್ತರ: 1952 |
| 11. ಭಾರತ ಮತ್ತು ಪಾಕಿಸ್ತಾನ ನಡುವಿನ ಬಿಕ್ಕಟ್ಟಿಗೆ ಪ್ರಮುಖ ಕಾರಣವೇನು?<br>ಉತ್ತರ: ಕಾಶ್ಮೀರ ಸಮಸ್ಯೆ |
| 12. ಇತ್ತೀಚಿಗೆ ಭಾರತ ಮತ್ತು ಚೀನಾಗಳ ನಡುವೆ ಸಂಬಂಧ ಕೆಡಲು ಕಾರಣವಾದ ಅಂಶ ಯಾವುದು?<br>ಉತ್ತರ: ಚೀನಾ ಭಾರತದ ಅರುಣಾಚಲ ಪ್ರದೇಶವನ್ನು ತನ್ನದೆಂದು ಪ್ರತಿಪಾದಿಸುತ್ತಿರುವುದು. |
| 13. 1971ರ ಭಾರತ–ಪಾಕಿಸ್ತಾನ ಯುದ್ಧದ ಪರಿಣಾಮವೇನು?<br>ಉತ್ತರ: ಬಾಂಗ್ಲಾದೇಶದ ಉದಯ |
| 14. 1961ರ ಗೋವಾ ವಿಮೋಚನೆಗೆ ನೆರವು ನೀಡಿದ ದೇಶ ಯಾವುದು?<br>ಉತ್ತರ: ರಷ್ಯಾ |

# ಅಧ್ಯಾಯ-3
# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

## II. ಎರಡು ಅಂಕದ ಪ್ರಶ್ನೋತ್ತರಗಳು.

1.ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆ?
ಉತ್ತರ:

1. ಇದರಿಂದ ದೇಶಗಲ ನಡುವೆ ಉತ್ತಮ ಬಾಂಧವ್ಯ ನೆಲೆಸುತ್ತದೆ.
2. ವಿದೇಶ ವ್ಯಾಪಾರ ಉತ್ತಮಗೊಳ್ಳುತ್ತದೆ
3. ಕೊರತೆಯಲ್ಲಿರುವ ಸಂಪನ್ಮೂಲಗಳ ಎರವಲು ಪಡೆಯಲು ಸಹಕಾರಿ
4. ತಂತ್ರಜ್ಞಾನ ವಿನಿಮಿಯಕ್ಕೆ ಅವಶಾಕ ಸಿಗುತ್ತದೆ.
5. ಹಣಕಾಸಿನ ನೆರವು ಪಡೆಯಲು ಸಹಕಾರಿ

2. ಭಾರತ-ಪಾಕಿಸ್ತಾನಗಳ ನಡುವಿನ ಸಂಬಂದ ಹದಗೆಡಲು ಕಾರಣಗಳೇನು?
ಉತ್ತರ:

1. ಕಾಶ್ಮೀರ ಸಮಸ್ಯೆ
2. ಇತ್ಯರ್ಥವಾಗದ ಜಲವಿವಾದಗಳು
3. ಪಾಕ್ ಪ್ರಾಯೋಜಿತ ಭಯೋತ್ಪಾದನೆ
4. ಪಾಕಿಸ್ತಾನ – ಚೀನಾಗಳ ನಡುವಿನ ಮೈತ್ರಿ
5. ಪಾಕಿಸ್ತಾನದ ಮಿಲಿಟರಿಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆ
6. ಪಾಕ್ ಪ್ರಾಯೋಜಿತ ಅಕ್ರಮ ನುಸುಳುವಿಕೆ.

3. ಇತ್ತಿಚೀನ ದಿನಗಳಲ್ಲಿ ಭಾರತ-ಚೀನಾಗಳ ನಡುವಿನ ಸಂಬಂದ ಹದಗೆಡಲು ಕಾರನಗಳೇನು?
ಉತ್ತರ:

1. ಭಾರತದ ಟಿಬೆಟ್ ಬಗೆಗಿನ ನಿಲುವು
2. ಚೀನಾದ ಮಾವೋವಾದಿಗಳಿಂದ ಭಾರತದಲ್ಲಿ ನಕ್ಸಲ್ವಾದದ ಚಟುವಟಿಕೆಗಳು
3. ಚೀನಾ ಹಾಗೂ ಪಾಕ್ ಮೈತ್ರಿ
4. ಅರುಣಾಚಲ ಪ್ರದೇಶದ ಬಗ್ಗೆ ಚೀನಾದ ಧೋರಣೆಗಳು
5. ಇತ್ಯರ್ಥವಾಗದಿರುವ ಗಡಿ ವಿವಾದಗಳು
6. ರಾಜತಾಂತ್ರಿಕ ಮಾತುಕತೆಗಳಲ್ಲಿನ ಬದ್ಧತೆಯ ಕೊರತೆ

4. ಭಾರತ ಹಾಗೂ ಅಮೆರಿಕಾಗಳ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ?
ಉತ್ತರ:

1. ಎರಡು ದೇಶಗಳು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ
2. 1962ರ ಭಾರತ–ಚೀನಾ ಯುದ್ಧದಲ್ಲಿ ಅಮೇರಿಕಾ ನೆರವು ನೀಡಿದೆ.
3. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಮಾನ ಹಿತಾಸಕ್ತಿ ಹೊಂದಿದೆ.
4. ಬಾಹ್ಯಾಕಾಶ, ರಕ್ಷಣೆ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ನೀಡಿದೆ.
5. ಪಂಚವಾರ್ಷಿಕ ಯೋಜನೆಗಳಿಗೆ ನೆರವು ನೆಡುತ್ತಿದೆ.
6. ಭಾರತ ಪಾಕಿಸ್ತಾನ ಯುದ್ಧದಲ್ಲಿ ನೆರವು ನೀಡಿದೆ.

5. ಭಾರತ ಹಾಗೂ ರಷ್ಯಾಗಳ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ?
ಉತ್ತರ:

1. ಪ್ರಾರಮಭದಿಂದಲೂ ಭಾರತ–ರಷ್ಯಾಗಳ ನಡುವಿನ ಸಂಬಂಧ ಉತ್ತಮವಾಗಿದೆ.
2. ಭಾರತದ ಆರ್ಥಿಕ ಹಾಗೂ ಎಲ್ಲಾ ಯೋಜನೆಗಳ ರಷ್ಯಾ ಸಹಕರಿಸುತ್ತಿದೆ.
3. 1961 ರ ಗೋವಾ ವಿಮೋಚನೆಯಲ್ಲಿ ಸಹಕಾರ ನೀಡಿದೆ.
4. 1966 ರಲ್ಲಿ ತಾಷ್ಕೆಂಟ್ ಒಪ್ಪಂದದ ಮೂಲಕ ಭಾರತ –ಪಾಕ್ ಮಧ್ಯೆ ಕದನ ವಿರಾಮ ಸ್ಥಾಪಿಸಿತು
5. 1971 ರಲ್ಲಿ 20 ವರ್ಷಗಳ ಶಾಚಿತಿ –ಸಹಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
6. ಭಿಲಾಯ್ ಬೋಕಾರೋಗಳ ಉಕ್ಕಿನ ಘಟಕಗಳು ರಷ್ಯಾದ ನೆರೆವಿನಿಂದ ಸ್ಥಾಪಿಸಲ್ಪಟ್ಟಿವೆ
7. ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ ಒದಗಿಸಲು ರಷ್ಯಾ ಸಹಕರಿಸುತ್ತಿದೆ.
8. ಪಂಚವಾರ್ಷಿಕ ಯೋಜನೆಗಳು ರಷ್ಯಾದಿಂದ ಎರವಲು ಪಡೆದವುಗಳಾಗಿವೆ.

6. ಭಾರತ ಮತ್ತು ಪಾಕಿಸ್ತಾನದ ಮಧ್ಯ ಉದ್ವಗ್ನತೆಗೆ ಕಾರಣವಾದ ಅಂಶಗಳಾವುವು?
ಉತ್ತರ:

1. ಜಮ್ಮು–ಕಾಶ್ಮೀರ ಸಮಸ್ಯೆ
2. ಭಯೋತ್ಪಾದನೆ
3. ನದಿ ನೀರಿನ ವಿವಾದ

7. ನಮ್ಮ ರಾಷ್ಟ್ರದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಸಂಗತಿಗಳು ಯಾವುವು?

* ರಾಷ್ಟ್ರೀಯ ಹಿತಾಸಕ್ತಿಗಳು.
* ಭೌಗೋಳಿಕ ಅಂಶಗಳು.
* ರಾಜಕೀಯ ಪರಿಸ್ಥಿತಿ.
* ಆರ್ಥಿಕ ವ್ಯವಸ್ಥೆ
* ರಕ್ಷಣಾ ಸಾಮರ್ಥ್ಯ
* ಜನಾಭಿಪ್ರಾಯ
* ಅಂತರಾಷ್ಟ್ರೀಯ ಪರಿಸರ.

## .ಅಧ್ಯಾಯ–1
## ಸಮಾಜಿಕ ಸ್ತರವಿನ್ಯಾಸ

### I. ಒಂದು ಅಂಕದ ಪ್ರಶ್ನೋತ್ತರಗಳು.

1. ಸಾಮಾಜಿಕ ಸ್ತರವಿನ್ಯಾಸ ಎಂದರೇನು?
ಉತ್ತರ : ಸಮಾಜದಲ್ಲಿರುವ ಜನರನ್ನು ವಿವಿಧ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ–ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವೇ "ಸಾಮಾಜಿಕ ಸ್ತರವಿನ್ಯಾಸ"

2. ಅಸ್ಪೃಶ್ಯತಾ ಅಪರಾದ ಕಾಯ್ದೆ ಯಾವಾಗ ಜಾರಿಗೆ ಬಂತು?
ಉತ್ತರ : 1955

3. 'ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು' ಎಂದು ಪ್ರತಿಪಾದಿಸಿದವರು ಯಾರು?
ಉತ್ತರ : ಡಾ// ಬಿ. ಆರ್ ಅಂಬೇಡ್ಕರ್

4. "ಅಸ್ಪೃಶ್ಯತೆ ಹಿಂದೂ ಸಮಾಜವನ್ನು ಕುಷ್ಟರೋಗದ ಹುಣ್ಣಿನಂತೆ ವೇದಿಸುತ್ತದೆ" ಎಂದು ಹೇಳಿದವರು ಯಾರು?
ಉತ್ತರ : ಮಹಾತ್ಮಾ ಗಾಂಧೀಜಿ

### ಭಾರತ ಸಂವಿಧಾನದ ವಿಧಿಗಳ ಸಾರಾಂಶ

| ಕ್ರಮ ಸಂಖ್ಯೆ | ವಿಧಿಗಳು | ಸಾರಾಂಶ |
|---|---|---|
| 1 | 17 ನೇ ವಿಧಿ | ಅಸ್ಪೃಶ್ಯತೆ ರದ್ದಾಯಿತಿ |
| 2 | 19 ನೇ ವಿಧಿ | ವಾಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ |
| 3 | 21 ಎ ವಿಧಿ | 14 ವರ್ಷದೊಳಗಿನ ಎಲ್ಲಾ ಮಕ್ಕಳು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯವುದು ಮೂಲಭೂತ ಹಕ್ಕು |
| 4 | 29 ನೇ ವಿಧಿ | ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ |
| 5 | 30 ನೇವಿಧಿ | ಅಲ್ಪ ಸಂಖ್ಯಾತರ ಸಾಂಸ್ಕೃತಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ |
| 6 | 45 ನೇವಿಧಿ | 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ |

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳಾವುವು?

* ಇದು ಸಾರ್ವತ್ರಿಕವಾದದ್ದು
* ಇದು ಪುರಾತನವಾದದ್ದು
* ಬೇರೆ-ಬೇರೆ ರೂಪದಲ್ಲಿ ಇದು ವ್ಯಕ್ತವಾಗುತ್ತದೆ.
* ಇದು ಸ್ವಭಾವತಹ ಸಾಮಾಜಿಕವಾದದ್ದು

2. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?

* ಸಾರ್ವಜನಿಕ ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆಗಳ ನಿರಾಕರಣೆ
* ಸಾರ್ವತ್ರಿಕ ಆರೋಗ್ಯದ ನಿರಾಕರಣೆ
* ಆದಾಯ ಮತ್ತು ಲಿಂಗ ಆಧಾರಿತ ತಾರತಮ್ಯ
* ಬಡವ-ಶ್ರೀಮಂತ ಬೇಧಬಾವ

3. ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?

* ಮಹಿಳೆಯರನ್ನು ಸಮಾಜ ಪರಿಗಣಿಸುವ ರೀತಿ
* ಮಹಿಳೆಗೆ ಶಿಕ್ಷಣದ ನಿರಾಕರಣೆ
* ಮಹಿಳೆಗೆ ಆಸ್ತಿ ಹಕ್ಕಿನ ನಿರಾಕರಣೆ
* ಮಹಿಳೆಗೆ ರಾಜಕೀಯ ಹಕ್ಕಿನ ನಿರಾಕರಣೆ.

## II. ಮೂರು ಅಂಕದ ಪ್ರಶ್ನೋತ್ತರಗಳು.

1. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡಗು ಚರ್ಚಿಸಿರಿ?

* ಅಸ್ಪೃಶ್ಯತೆ ಸಾಮಾಜಿಕವಾಗಿ ಅತ್ಯಂತ ಕೆಳಹಂತಹದ ಆಚರಣೆಯಾಗಿದೆ.
* ಶಿಕ್ಷಣದಿಂದ ಅಸ್ಪೃಶ್ಯರನ್ನು ವಂಚಿಸಲಾಗಿದೆ.
* ಆಸ್ತಿಯ ಹಕ್ಕನ್ನು ನಿರಾಕರಣೆ ಮಾಡಲಾಗಿದೆ.
* ರಾಜಕೀಯದಲ್ಲಿ ಭಾಗವಹಿಸುವಿಕೆಯನ್ನು ಇವರಿಗೆ ನಿರಾಕರಿಸಲಾಗಿದೆ.
* ಇದು ಮಾನವ ಹಕ್ಕುಗಳ ನಿರಾಕರಣೆ ಮಾಡುತ್ತದೆ.
* ಇದು ದುರ್ಬಲರನ್ನು ಶೋಷಿಸುತ್ತದೆ.

2. ಅಸ್ಪೃಶ್ಯತೆ ನಿವಾರಣೆಗೆ ಹಾಕಿಕೊಂಡ ಸಂವಿಧಾನಾತ್ಮಕ ಮತ್ತು ಕಾನೂನು ಪರಿಹಾರಗಳಾವುವು?

* ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆ ಆಚರಣೆ ಅಪರಾಧ ಎಂದು ಸಾರಿದೆ.
* 1955 ರಲ್ಲಿ ಅಸ್ಪೃಶ್ಯತಾ ಅಪರಾಧ ಕಾಯ್ದೆ ಜಾರಿಗೆ ತರಲಾಗಿದೆ.
* 1976 ರಲ್ಲಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿಗೆ ತರಲಾಗಿದೆ.

* ಸಮಾನತೆ ಹಕ್ಕನ್ನು ಜಾರಿ ತಂದಿರುವುದು.
* ರಾಜಕೀಯ, ಆರ್ಥಿಕ, ಶೈಕ್ಷಣಿಕ, ಉದ್ಯೋಗ, ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.
* 1989 ರ ಶಾಸನವು ಅಸ್ಪೃಶ್ಯತೆ ನಿರ್ಮೂಲನೆಯ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ ನೀಡಿದೆ.

2. ಅಸ್ಪೃಶ್ಯತಾ ಆಚರಣೆಯಂತಹ ಸಾಮಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

* ಅಸ್ಪೃಶ್ಯತೆ ಆಚರಣೆಯು ಶಿಕ್ಷಾರ್ಹ ಅಪರಾಧವೆಂದು ಸಾರಬೇಕು.
* ಸಂವಿಧಾನಾತ್ಮಕವಾಗಿ ಮತ್ತು ಶಾಸನಾತ್ಮಕವಾಗಿ ಕ್ರಮ ಕೈಗೊಳ್ಳಬೇಕು.
* ಸಮೂಹ ಮಾಧ್ಯಮದ ಮೂಲಕ ಜನರಿಗೆ ತಿಳುವಳಿಕೆ ನೀಡಬೇಕು
* ವಿದ್ಯಾರ್ಥಿಗಳಲ್ಲಿ ಅರಿವು ಮತ್ತು ಜಾಗೃತಿ ಮೂಡಿಸಬೇಕು.
* ನಾವೆಲ್ಲರೂ ಒಂದು ಎಂದು ಸಾರಬೇಕು
* ಅಂತರ್ಜಾತಿಯ ವಿವಾಹ ಪ್ರೋತ್ಸಾಹಿಸಬೇಕು.

******* ಮುಕ್ತಾಯ*******

## ಅಧ್ಯಾಯ–1
## ಭಾರತ ಸ್ಥಾನ ಮತ್ತು ವಿಸ್ತೀರ್ಣ

### I. ಒಂದು ಅಂಕದ ಪ್ರಶ್ನೋತ್ತರಗಳು.

| |
|---|
| 1. ಭಾರತದ ಭೂರಾಶಿಯ ದಕ್ಷಿಣ ತುದಿ ಯಾವುದು?<br>ಉತ್ತರ : ಇಂದಿರಾ ಪಾಯಿಂಟ್ |
| 2. ಇಂದಿರಾ ಪಾಯಿಂಟ್ ಎಲ್ಲಿದೆ?<br>ಉತ್ತರ : ನಿಕೋಬಾರ್ ದ್ವೀಪ್ |
| 3. ಭಾರತದ ಅತ್ಯಂತ ಉತ್ತರದ ತುದಿ ಯಾವುದು?<br>ಉತ್ತರ : ಇಂದಿರಾಕೋಲ್ |
| 4. ಭಾರತದ ಒಟ್ಟು ವಿಸ್ತೀರ್ಣ ಎಷ್ಟು?<br>ಉತ್ತರ : 32,87,263 ಚದರ ಕಿ.ಮೀ. |
| 5. ಭಾರತದ ದಕ್ಷಿಣ ತುದಿಯಲ್ಲಿರುವ ದೇಶ ಯಾವುದು?<br>ಉತ್ತರ : ಶ್ರೀಲಂಕಾ |
| 6. ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋದ ರೇಖಾಂಶ ಯಾವುದು?<br>ಉತ್ತರ 82 $1/2^0$ ಪೂರ್ವ ರೇಖಾಂಶ |
| 7. ಇಂದಿರಾ ಕೋಲ್ ಎಲ್ಲಿದೆ?<br>ಉತ್ತರ : ಜಮ್ಮು –ಕಾಶ್ಮೀರ |
| 8. ಭಾರತವು ಪ್ರಪಂಚದಲ್ಲಿ ಎಷ್ಟನೇ ದೊಡ್ಡ ರಾಷ್ಟ್ರ?<br>ಉತ್ತರ : 7ನೇ ದೊಡ್ಡ ರಾಷ್ಟ್ರ |
| 9. ಭಾರತೀಯ ಆದರ್ಶ ಕಾಲಮಾನ ರೇಖೆ ಯಾವುದು?<br>ಉತ್ತರ : 82 $1/2^0$ ಪೂರ್ವ ರೇಖಾಂಶ |
| 10. ಭಾರತದ ಅತಿ ದೊಡ್ಡ ರಾಜ್ಯ ಯಾವುದು?<br>ಉತ್ತರ : ರಾಜಸ್ತಾನ |
| 11. ಭಾರತದ ವಾಯುವ್ಯದಲ್ಲಿರುವ ನೆರೆಯ ರಾಷ್ಟ್ರಗಳನ್ನು ಹೆಸರಿಸಿ?<br>ಉತ್ತರ : ಪಾಕಿಸ್ತಾನ ಮತ್ತು ಅಫಘಾನಿಸ್ತಾನ |
| 12. ಭಾರತದ ಮಧ್ಯ ಭಾಗದಲ್ಲಿ ಹಾದು ಹೋದ ಅಕ್ಷಾಂಶ ಯಾವುದು?<br>ಉತ್ತರ : 23 $1/2^0$ ಉತ್ತರ ಅಕ್ಷಾಂಶ |
| 14. ಭಾರತದಲ್ಲಿ ಇತ್ತೀಚಿಗೆ ರಚನೆಯಾದ ಹೊಸ ರಾಜ್ಯ ಯಾವುದು?<br>ಉತ್ತರ : ತೆಲಂಗಾಣ |

| |
|---|
| 15. ಭಾರತದ ವಿಸ್ತೀರ್ಣದಲ್ಲಿ ಅತಿ ಚಿಕ್ಕ ರಾಜ್ಯ ಯಾವುದು?<br>ಉತ್ತರ : ಗೋವಾ |
| 16. ಭಾರತದಲ್ಲಿ ಪ್ರಸ್ತುತ ಎಷ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿವೆ?<br>ಉತ್ತರ : 29 ರಾಜ್ಯಗಳು 07 ಕೇಂದ್ರಾಡಳಿತ |
| 17. ಭಾರತದ ಒಟ್ಟು ಭೂ ಮೇರೆಯ ಉದ್ದವೆಷ್ಟು?<br>ಉತ್ತರ : 15,200 ಕಿ.ಮೀ |
| 18. ಭಾರತದ ಜಲ ಮೇರೆಯ ಉದ್ದವೆಷ್ಟು?<br>ಉತ್ತರ : 6,100 ಕಿ.ಮೀ |
| 19. IST ವಿಸ್ತರಿಸಿ ಬರೆಯಿರಿ?<br>ಉತ್ತರ : Indian Standard Time |
| 20. ಭಾರತದ ಉತ್ತರ ಭಾಗದಲ್ಲಿ ಬರುವ ರಾಷ್ಟ್ರಗಳಾವುವು?<br>ಉತ್ತರ : ನೇಪಾಳ, ಭೂತಾನ, ಚೀನಾ |
| 21. ಭಾರತದ ಪೂರ್ವ ಭಾಗದಲ್ಲಿ ಬರುವ ರಾಷ್ಟ್ರಗಳಾವುವು?<br>ಉತ್ತರ : ಬಾಂಗ್ಲಾದೇಶ, ಮ್ಯೆಯನ್ಮಾರ |
| 22. ಭಾರತದ ರಾಷ್ಟ್ರೀಯ ರಾಜಧಾನಿ ಯಾವುದು?<br>ಉತ್ತರ : ದೆಹಲಿ |
| 22. ಭಾರತ ಮತ್ತು ಪಾಕಿಸ್ತಾನ ನಡುವೆ ಇರುವ ಗಡಿ ರೇಖೆ ಯಾವುದು?<br>ಉತ್ತರ : Ryadcliph ರೇಖೆ |
| 23. ಭಾರತ ಮತ್ತು ಚೀನಾ ನಡುವೆ ಇರುವ ಗಡಿ ರೇಖೆ ಯಾವುದು?<br>ಉತ್ತರ : "ಮ್ಯಾಕ್ ಮಹೋನ್" ರೇಖೆ |
| 24. ಭಾರತ ಮತ್ತು ಅಫಘಾನಿಸ್ತಾನ ನಡುವೆ ಇರುವ ಗಡಿ ರೇಖೆ ಯಾವುದು?<br>ಉತ್ತರ : "ಡ್ಯುರಾಂಡ್ ರೇಖೆ" |
| 25. ಭಾರತದ ಎರಡು ದ್ವೀಪ ಸ್ತೋಮಗಳಾವುವು?<br>ಉತ್ತರ : ಅಂಡಮಾನ್ ಮತ್ತು ನಿಕೋಬಾರ್ ಮತ್ತು ಲಕ್ಷದೀಪ |
| 26. ಭಾರತ ಪೂರ್ವ –ಪಶ್ಚಿಮವಾಗಿ ಎಷ್ಟು ಕಿ.ಮೀ ಉದ್ದವಿದೆ?<br>ಉತ್ತರ : 2933 ಕಿ.ಮೀ |
| 27. ಭಾರತ ದಕ್ಷಿಣ– ಉತ್ತರವಾಗಿ ಎಷ್ಟು ಕಿ.ಮೀ ಉದ್ದವಿದೆ?<br>ಉತ್ತರ: 3214 ಕಿ.ಮೀ |

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತದ ಮೇರೆಗಳನ್ನು ಕುರಿತು ಬರೆಯಿರಿ.

* ಭಾರತ ಭೂ ಮೇರೆ ಮತ್ತು ಜಲ ಮೇರೆ ಎರಡನ್ನು ಹೊಂದಿದೆ.
* ಭಾರತದ ಭೂ ಮೇರೆಯ ಉದ್ದ 15,200 ಕಿ.ಮೀ
* ಭಾರತದ ಜಲ ಮೇರೆಯ ಉದ್ದ 6,100 ಕಿ.ಮೀ
* ಉತ್ತರದಲ್ಲಿ ಹಿಮಾಲಯ ಪರ್ವತಗಳು ನೈಸರ್ಗಿಕ ಗಡಿಯಾಗಿದೆ.

2. ಭಾರತದ ನೆರೆಯ ರಾಷ್ಟ್ರಗಳಾವುವು?

* ಭಾರತವು 7 ನೆರೆಯ ರಾಷ್ಟ್ರಗಳನ್ನು ಹೊಂದಿದೆ.
* ವಾಯುವ್ಯದಲ್ಲಿ ಪಾಕಿಸ್ತಾನ ಮತ್ತು ಅಫಘಾನಿಸ್ತಾನ
* ಉತ್ತರದಲ್ಲಿ ನೇಪಾಳ, ಭೂತಾನ ಮತ್ತು ಚೀನ
* ಪೂರ್ವ ಭಾಗದಲ್ಲಿ ಬಾಂಗ್ಲಾದೇಶ ಮತ್ತು ಮೈಯನ್ಮಾರ್
* ಆಗ್ನೇಯಕ್ಕೆ ಶ್ರೀಲಂಕ ದೇಶವಿದೆ.

3. ಭಾರತದ ಎರಡು ದ್ವೀಪ ಸ್ತೋಮಗಳಾವುವು?

* ಅಂಡಮಾನ್ ಮತ್ತು ನಿಕೋಬಾರ್
* ಲಕ್ಷದ್ವೀಪ

******* ಮುಕ್ತಾಯ*******

# ಅಧ್ಯಾಯ-2
# ಭಾರತದ ಮೇಲ್ಮೈ ಲಕ್ಷಣಗಳು

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಪ್ರಪಂಚದಲ್ಲೇ ಅತಿ ಎತ್ತರವಾದ ಶಿಖರ ಯಾವುದು?
ಉತ್ತರ : ಮೌಂಟ್ ಎವರೆಸ್ಟ್

2. ಭಾರತದ ಅತಿ ಎತ್ತರವಾದ ಶಿಖರ ಯಾವುದು?
ಉತ್ತರ : $K_2$ ಅಥವಾ ಗಾಡ್ವಿನ್ ಆಸ್ಟಿನ್

3. ಮಹಾಹಿಮಾಲಯವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
ಉತ್ತರ : "ಹಿಮಾದ್ರಿ"

4. ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ ಯಾವುದು?
ಉತ್ತರ : " ಅಣೈಮುಡಿ"

5. ಅರಾವಳಿ ಸರಣಿಯ ಎತ್ತರದ ಪರ್ವತ ಯಾವುದು?
ಉತ್ತರ : "ಗುರುಶಿಖರ"

6. ಪೂರ್ವಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?
ಉತ್ತರ : ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ.

7. ಹಿಮಾಲಯದ ಪಾದಬೆಟ್ಟಗಳನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
ಉತ್ತರ : ಶಿವಾಲಿಕ್ ಶ್ರೇಣಿಗಳು

8. ಉತ್ತರದ ಮಹಾ ಮೈದಾನವು ಯಾವ ಮಣ್ಣಿನಿಂದ ನಿರ್ಮಾಣವಾಗಿದೆ?
ಉತ್ತರ : ಮೆಕ್ಕಲು ಮಣ್ಣು

9. ಡೂನಗಳೆಂದರೇನು?
ಉತ್ತರ : ಶಿವಾಲಿಕ್ ಶ್ರೇಣಿಗಳಲ್ಲಿ ಕಂಡು ಬರುವ ಸಮತಟ್ಟಾದ ಕಿರಿದಾದ ಮೈದಾನಳು

10. ಪಶ್ಚಿಮ ಘಟ್ಟಗಳಿಗಿರುವ ಮತ್ತೊಂದು ಹೆಸರೇನು?
ಉತ್ತರ : "ಸಹ್ಯಾದ್ರಿ ಸರಣಿ"

11. ಪೂರ್ವ ಘಟ್ಟಗಳಲ್ಲಿ ಅತಿ ಎತ್ತರವಾದ ಶಿಖರ ಯಾವುದು?
ಉತ್ತರ : ಅರ್ಮಕೊಂಡ

12. ಪಶ್ಚಿಮ ಕರಾವಳಿಯ ಮೂರು ವಿಭಾಗಗಳಾವುವು?
ಉತ್ತರ : ಕೊಂಕಣತೀರ, ಕರ್ನಾಟಕ ತೀರ, ಮಲಬಾರ್ ತೀರ.

13. ಲಕ್ಷದ್ವೀಪಗಳನ್ನು ಯಾವ ಹೆಸರನಿಂದ ಕರೆಯುತ್ತಾರೆ?
ಉತ್ತರ : ಹವಳದ ದ್ವೀಪಗಳು ಎನ್ನುವರು

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತದ ಪ್ರಾಕೃತಿಕ ವಿಭಾಗಗಳಾವುವು?

* ಉತ್ತರದ ಪರ್ವತಗಳು
* ಉತ್ತರದ ಮಹಾ ಮೈದಾನ
* ಪರ್ಯಾಯ ಪ್ರಸ್ಥಭೂಮಿ
* ಕರಾವಳಿ ಮೈದಾನ ಮತ್ತು ದ್ವೀಪಗಳು

2. ಉತ್ತರದ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ?

* ಸೈಬೀರಿಯಾದಿಂದ ಬೀಸುವ ತಂಪಾದ ಶೀತ ಮಾರುತಗಳನ್ನು ತಡೆಯುತ್ತದೆ.
* ಅನೇಕ ಖನಿಜ ಸಂಪನ್ಮೂಲಗಳ ಆಗರವಾಗಿದೆ.
* ಅನೇಕ ನದಿಗಳು ಜನ್ಮ ಸ್ಥಳವಾಗಿದೆ.
* ಪ್ರವಾಸೋದ್ಯಮ ಕೇಂದ್ರವಾಗಿ ಪ್ರಸಿದ್ಧಿ ಪಡದಿದೆ.

3. ಉತ್ತರ ಮೈದಾನಗಳ ಪ್ರಾಮುಖ್ಯತೆಯನ್ನು ತಿಳಿಸಿ?

* ಇದು ಮೆಕ್ಕಲು ಮಣ್ಣಿನಿಂದ ಕೂಡಿದ್ದು ಕೃಷಿಗೆ ಯೋಗ್ಯವಾಗಿದೆ.
* ಸಮತಟ್ಟಾದ ಭೂ ಭಾಗ ಇರುವದರಿಂದ ಸಾರಿಗೆ –ಸಂಪರ್ಕಕ್ಕೆ ಅನುಕೂಲವಾಗಿದೆ.
* ಅನೇಕ ಕೈಗಾರಿಕೆಗಳು ಈ ಭಾಗದಲ್ಲಿವೆ.
* ಪವಿತ್ರ ಯಾತ್ರಾ ಸ್ಥಳಗಳಿಂದ ಪ್ರವಾಸೋದ್ಯಮ ಬೆಳವಣಿಗೆ ಹೊಂದಿದೆ.

4. ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕ ಪ್ರಾಮುಖ್ಯತೆಯನ್ನು ವಿವರಿಸಿರಿ?

* ಅಪಾರ ಖನಿಜ ಸಂಪನ್ಮೂಲಗಳಿವೆ
* ಜಲಪಾತಗಳಿಂದಾಗಿ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಹಾಯಕಾರಿಯಾಗಿದೆ.
* ದಕ್ಷಿಣ ಭಾರತದ ಅನೇಕ ನದಿಗಳ ಉಗಮ ಸ್ಥಾನವಾಗಿದೆ
* ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಸಹಾಯಕಾರಿಯಾಗಿದೆ.

5. ಉತ್ತರದ ಮೈದಾನಗಳು ಹೇಗೆ ರಚನೆಯಾಗಿವೆ?

* ಹಿಮಾಲಯ ಪರ್ವತಗಳು ಮತ್ತು ಪರ್ಯಾಯ ಪ್ರಸ್ಥಭೂಮಿಯ ನಡುವೆ ವಿಸ್ತರಿಸಿದೆ.
* ಇದು ಸಟ್ಲೇಜ್, ಗಂಗಾ, ಬ್ರಹ್ಮಪುತ್ರಾ ನದಿಗಳ ಸಂಚಯನ ಕಾರ್ಯದಿಂದ ನಿರ್ಮಾಣಕೊಂಡಿದೆ.

6. ಕರಾವಳಿ ಮೈದಾನದ ಆರ್ಥಿಕ ಪ್ರಾಮುಖ್ಯತೆಯನ್ನು ತಿಳಿಸಿ?

* ಇಲ್ಲಿ ಅನೇಕ ಬಂದರುಗಳು ಇರುವದರಿಂದ ವಿದೇಶಿ ವ್ಯಾಪಾರಕ್ಕೆ ಸಹಾಯಕಾರಿಯಾಗಿದೆ.
* ಉಪ್ಪಿನ ಉತ್ಪಾದನೆಗೆ ಸಹಾಯಕಾರಿಯಾಗಿದೆ
* ಮೀನುಗಾರಿಕೆಗೆ ಅನುಕೂಲಕರವಾಗಿದೆ.
* ಇಲ್ಲಿನ ಬೀಚಗಳು ಪ್ರವಾಸೋದ್ಯಮದ ಬೆಳವಣಿಗ ಸಹಾಯಕಾರಿಯಾಗಿದೆ.

7. ಸಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿರಿ?

* ಹಿಮಾಲಯದ ಪಾದ ಬೆಟ್ಟಗಳಾಗಿವೆ
* ಇವು ಕಡಿಮೆ ಎತ್ತರವನ್ನು ಹೊಂದಿವೆ
* ಜಮ್ಮು–ಕಾಶ್ಮೀರದಿಂದ ಅರುಣಾಚಲ ಪ್ರದೇಶದವರೆಗೆ ಹಬ್ಬಿದೆ.
* ಇಲ್ಲಿ ಕಿರಿದಾದ ಮತ್ತು ಸಮತಟ್ಟಾದ "ಡೂನಗಳಿವೆ"

8. ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳ ನಡುವಿನ ವ್ಯತ್ಯಾಸ ತಿಳಿಸಿರಿ?

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| * ಪಶ್ಚಿಮ ಘಟ್ಟಗಳು ಎತ್ತರವಾಗಿವೆ. | * ಪೂರ್ವ ಘಟ್ಟಗಳು ಎತ್ತರವಾಗಿಲ್ಲ. |
| * ಪಶ್ಚಿಮ ಘಟ್ಟಗಳು ನಿರಂತರವಾಗಿವೆ. | * ಪೂರ್ವ ಘಟ್ಟಗಳು ನಿರಂತರವಾಗಿಲ್ಲ. |
| * ಇಲ್ಲಿ ಅನೇಕ ಗಿರಿಧಾಮಗಳಿವೆ. | * ಇಲ್ಲಿ ಯಾವುದೇ ಗಿರಿಧಾಮಗಳಿಲ್ಲ. |
| * ಅನೇಕ ನದಿಗಳ ಉಗಮಸ್ಥಾನ | * ನದಿಗಳ ಮುಖಜ ಭೂಮಿಯನ್ನು ಹೊಂದಿದೆ. |

9. ಅಂಡಮಾನ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಲಕ್ಷ ದ್ವೀಪಗಳ ನಡುವಿನ ವ್ಯತ್ಯಾಸ ತಿಳಿಸಿರಿ?

| ಅಂಡಮಾನ ಮತ್ತು ನಿಕೋಬಾರ್ ದ್ವೀಪಗಳು | ಲಕ್ಷ ದ್ವೀಪಗಳು |
|---|---|
| * ಬಂಗಾಳ ಕೊಲ್ಲಿಯಲ್ಲಿವೆ. | * ಅರಬ್ಬಿ ಸಮುದ್ರದಲ್ಲಿವೆ. |
| * ಗಟ್ಟಿಯಾದ ಜ್ವಾಲಾಮುಖಿ ಶಿಲೆಗಳಿಂದ ನಿರ್ಮಾಣ | * ಹವಳಗಳಿಂದ ನಿರ್ಮಾಣ |
| * 204 ದ್ವೀಪಗಳು | * 43 ದ್ವೀಪಗಳು |

## III. ನಾಲ್ಕು ಅಂಕದ ಪ್ರಶ್ನೆಗಳು

1. ಭಾರತಿಯರ ಜನಜೀವನಕ್ಕೆ ಹಿಮಾಲಯ ಪರ್ವತಗಳಿಂದಾಗುವ ಅನುಕೂಲಗಳೇನು?

**(ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ)**

* ರಕ್ಷಣೆ ಒದಗಿಸಿದೆ
* ಶೀತಗಾಳಿಯನ್ನು ತಡೆಯುವುದು.
* ನದಿಗಳ ಉಗಮಸ್ಥಾನ
* ಜಲವಿದ್ಯುತ್ ಉತ್ಪಾದನೆ
* ವಿಶಾಲ ಮೈದಾನ
* ವೈವಿಧ್ಯಮಯ ಸಸ್ಯವರ್ಗ
* ಅಪಾರ ಖನಿಜ ಸಂಪನ್ಮೂಲ
* ಪ್ರವಾಸೋದ್ಯಮ, ಧಾರ್ಮಿಕ ಕೇಂದ್ರ

******* **ಮುಕ್ತಾಯ** *******

## ಅಧ್ಯಾಯ–3
## ಭಾರತದ ವಾಯುಗುಣ

### I. ಬಹು ಆಯ್ಕೆ ಪ್ರಶ್ನೆಗಳು

1. ಭಾರತವು ಈ ಮಾದರಿಯ ವಾಯುಗುಣ ಹೊಂದಿದೆ...............................

A) ಶೀತ ಮಾದರಿಯ ವಾಯುಗುಣ ಹೊಂದಿದೆ

B) ಅತಿಯಾದ ಮಳೆಯಿಂದ ಕೂಡಿದ ವಾಯುಗುಣವಿದೆ

C) ಪರಿಸರಣ ಮಾದರಿಯ ವಾಯುಗುಣವಿದೆ

**D) ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವಿದೆ.**

2. ಅಕ್ಟೋಬರ ತಿಂಗಳಿನಲ್ಲಿ ಉಷ್ಣಾಂಶವು ಉತ್ತರಾರ್ಧಗೋಳದಲ್ಲಿ ಕಡಿಮೆಯಾಗಲು ಕಾರಣ.....

**A) ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದ ಮೇಲೆ ಲಂಬವಾಗಿ ಬೀಳುತ್ತವೆ.**

B) ಸೂರ್ಯನ ಕಿರಣಗಳು ಓರೆಯಾಗಿ ದಕ್ಷಿಣಾರ್ಧ ಗೋಳದ ಮೇಲೆ ಬೀಳುತ್ತವೆ.

C) ಸೂರ್ಯನ ಕಿರಣಗಳು ನೇರವಾಗಿ ಸಮಭಾಜಕ ವೃತ್ತದ ಮೇಲೆ ಬೀಳುತ್ತವೆ.

D) ಸೂರ್ಯನ ಕಿರಣಗಳು ಲಂಬವಾಗಿ ಉತ್ತರಾರ್ಧಗೋಳದ ಮೇಲೆ ಬೀಳುತ್ತವೆ.

3. ಭಾರತದಲ್ಲಿ ನೈರುತ್ಯ ಮಾನ್ಸೂನ್ ಮಾರುತಗಳು ಎರಡು ಶಾಖೆಗಳು ........................

A) ಹಿಂದೂಮಹಾಸಾಗರ ಶಾಖೆ ಮತ್ತು ಅರಬ್ಬಿ ಸಮುದ್ರ ಶಾಖೆ.

B) ಬಂಗಾಳಕೊಲ್ಲಿ ಶಾಖೆ ಮತ್ತು ಹಿಂದೂ ಮಹಾಸಾಗರ ಶಾಖೆ.

C) ಅರಬ್ಬಿ ಸಮುದ್ರ ಶಾಖೆ ಮತ್ತು ಕೆಂಪು ಸಮುದ್ರ ಶಾಖೆ.

**D) ಅರಬ್ಬಿ ಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆ.**

4. ಬೇಸಿಗೆ ಕಾಳದಲ್ಲಿ ಉಷ್ಣಾಂಶವು ಉತ್ತರಾರ್ಧಗೋಳದಲ್ಲಿ ಹೆಚ್ಚಾಗಲು ಕಾರಣ...................

A) ಸೂರ್ಯನ ಕಿರಣಗಳು ಓರೆಯಾಗಿ ಉತ್ತರಾರ್ಧದಲ್ಲಿ ಬೀಳುತ್ತವೆ.

B) ಸೂರ್ಯನ ಲಂಬ ಕಿರಣಗಳು ದಕ್ಷಿಣಾರ್ಧ ಗೋಳದಲ್ಲಿ ಬೀಳುತ್ತವೆ.

C) ಸೂರ್ಯನ ಓರೆ ಕಿರಣಗಳು ಸಮಭಾಜಕ ವೃತ್ತದ ಮೇಲೆ ಬೀಳುತ್ತದೆ.

**D) ಸೂರ್ಯನ ಲಂಬ ಕಿರಣಗಳು ಉತ್ತರಾರ್ಧ ಗೋಳದ ಮೇಲೆ ಬೀಳುತ್ತವೆ.**

5. "ಕಾಲ ಬೈಸಾಕಿ" ಮಳೆ ಈ ರಾಜ್ಯದಲ್ಲಿ ಬೀಳುತ್ತೆದ.....................

**A) ಪಶ್ಚಿಮ ಬಂಗಾಳ**

B) ತಮಿಳುನಾಡು

C) ಕರ್ನಾಟಕ

D) ಉತ್ತರ ಪ್ರದೇಶ

ಪ್ರಸ್ತುತಿ : ಶ್ರೀ ಬಾಳೇಶ ಹತ್ತರಕಿ, ಸ.ಶಿ., ಸ.ಪ್ರೌ.ಶಾಲೆ, ಹಿರನಾಗಾಂವ ತಾ.ಬಸವಕಲ್ಯಾಣ, ಜಿ:ಬೀದರ, ಮೊ.ನಂ.9972032339

6. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ಹೊಂದಿದೆ ನಗರ...................

A) ರೊಯ್ಲಿ

B) ಗಂಗಾನಗರ

C) ಜೋದಪುರ

D) ಮಾಸಿನ್‌ರಾಮ

7. ಭಾರತವು ಈ ಅವಧಿಯಲ್ಲಿ ಕಡಿಮೆ ಮಳೆ ಪಡೆಯುತ್ತದೆ.................

A) ಬೇಸಿಗೆ ಕಾಲ

B) ಮಳೆಗಾಲ

**C) ಚಳಿಗಾಲ**

D) ನಿರ್ಗಮನ ಕಾಲ

8. ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶ ದಾಖಲಾದ ಸ್ಥಳ.................

A) ಗಂಗಾನಗರ

B) ರೊಯ್ಲಿ

**C) ಡ್ರಾಸ್**

D) ಮಾಸಿನ್‌ರಾಮ್

9. ನೈರುತ್ಯ ಮಾನ್ಸೂನ ಮಾರುತಗಳು ಈ ರಾಜ್ಯದಲ್ಲಿ ಮಳೆ ಸುರಿಸುವುದಿಲ್ಲ.................

A) ಆಂಧ್ರಪ್ರದೇಶ

B) ಕೇರಳ

**C) ತಮಿಳುನಾಡು**

D) ಪಶ್ಚಿಮ ಬಂಗಾಳ

10. “ಕಾಫಿಯ ಹೂ ಮಳೆ” ಈ ರಾಜ್ಯದಲ್ಲಿ ಬೀಳುವುದು........................

**A) ಕರ್ನಾಟಕ**

B) ಕೇರಳ

C) ಉತ್ತರ ಪ್ರದೇಶ

D) ತಮಿಳುನಾಡು

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಭಾರತದ ಯಾವ ಮಾದರಿಯ ವಾಯುಗುಣ ಹೊಂದಿದೆ?
ಉತ್ತರ : ಉಷ್ಣವಲಯದ ಮಾನ್ಸೂನ್ ವಿಧದ ವಾಯುಗುಣವಿದೆ.

2. ಬೇಸಿಗೆ ಕಾಲದಲ್ಲಿ ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಲು ಕಾರಣವೇನು?
ಉತ್ತರ : ಉತ್ತರಾರ್ಧಗೋಳದ ಮೇಲೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುವುದರಿಂದ

3. ಭಾರತದಲ್ಲಿ ಕಡಿಮೆ ಮಳೆಯಾಗುವ ಋತುಮಾನ ಯಾವುದು?
ಉತ್ತರ : ಚಳಿಗಾಲ

4. ಭಾರತದಲ್ಲಿ ಅತಿ ಕಡಿಮೆ ಉಷ್ಣಾಂಶವು ಎಲ್ಲಿ ದಾಖಲಾಗುತ್ತದೆ?
ಉತ್ತರ : ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ ($-4^{0}$ ಸೆ)

5. ಚಳಿಗಾಲದಲ್ಲಿ ಭಾರತ ಕಡಿಮೆ ಉಷ್ಣಾಂಶ ಹೊಂದಿರುತ್ತದೆ?
ಉತ್ತರ : ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಬೀಳುತ್ತವೆ.

6. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಪ್ರದೇಶ ಯಾವುದು?
ಉತ್ತರ : ಗಂಗಾ ನಗರ

7. " ಮಾವಿನ ಹೊಯ್ಲು" ಎಂದರೇನು?
ಉತ್ತರ : ಕೇರಳಾ ರಾಜ್ಯದಲ್ಲಿ ಬೀಳುವ ಪರಿಸರಣ ಮಳೆಯನ್ನು ಮಾವಿನ ಹೊಯ್ಲು ಎನ್ನುವರು.

8. ಪಶ್ಚಿಮ ಬಂಗಾಳದಲ್ಲಿ ಪರಿಸರಣ ಮಳೆಯನ್ನು ಏನೆಂದು ಕರೆಯುವರು?
ಉತ್ತರ : "ಕಾಲಬೈಸಾಕಿ"

9. ಭಾರತದಲ್ಲಿ ಅತಿ ಕಡಿಮೆ ಮಳೆಯಾಗುವ ಪ್ರದೇಶ ಯಾವುದು?
ಉತ್ತರ : ರಾಜಸ್ತಾನದ ರೊಯ್ಲಿ

10. 'ಕಾಫಿಯ ಹೂಮಳೆ' ಎಂದರೇನು?
ಉತ್ತರ : ಪರಿಸರಣ ಮಳೆಯು ಕರ್ನಾಟಕದಲ್ಲಿ ಕಾಫಿ ಬೆಳೆಗೆ ನೆರವಾಗುವುದರಿಂದ 'ಕಾಫಿಯ ಹೂಮಳೆ' ಎನ್ನವರು.

11. ಭಾರತದಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶ ಯಾವುದು?
ಉತ್ತರ : ಮಾಸಿನ್ ರಾಮ್

12. ಉತ್ತರ ಪ್ರದೇಶದಲ್ಲಿ ಪರಿಸರಣ ಮಳೆಯನ್ನು ಏನೆಂದು ಕರೆಯುವರು?

| |
|---|
| ಉತ್ತರ : 'ಆಂಧಿಸ್' |
| 13. ತಮಿಳುನಾಡಿನಲ್ಲಿ ಯಾವ ಕಾಲದಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ?<br>ಉತ್ತರ : ಈಶಾನ್ಯ ಮಾನ್ಸೂನ್ ಮಾರತುಗಳ ಕಾಲದಲ್ಲಿ |
| 14. ಭಾರತದಲ್ಲಿ ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಮಳೆಯಾಗುತ್ತದೆ ಏಕೆ?<br>ಉತ್ತರ : ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹ |
| 15. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಕಾಲ ಯಾವುದು?<br>ಉತ್ತರ : ಚಳಿಗಾಲ |
| 16. ಭಾರತದಲ್ಲಿ ಯಾವ ತಿಂಗಳು ಅತ್ಯಂತ ಶೀತಮಯ ವಾತಾವರಣ ಹೊಂದಿರುತ್ತದೆ.<br>ಉತ್ತರ : ಜನೇವರಿ ತಿಂಗಳು |
| 17. ಭಾರತದಲ್ಲಿ ಮಳೆಗಾಲಕ್ಕೆ ಇರುವ ಇನ್ನೊಂದು ಹೆಸರೇನು?<br>ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳ ಕಾಲ |
| 18. ಮಾನ್ಸೂನ ಮಾರುತಗಳ ನಿರ್ಗ್ಮನ ಕಾಲದ ಮತ್ತೊಂದು ಹೆಸರೇನು?<br>ಉತ್ತರ : " ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ" |

**ನೆನಪಿನಲ್ಲಿಡಬೇಕಾದ ಮುಖ್ಯ ಸಂಗತಿಗಳು**

1. ಗಂಗಾ ನಗರ ................................... ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ಹೊಂದಿದ ಸ್ಥಳ
2. ರೊಯ್ಲಿ ................................... ಭಾರತದಲ್ಲಿ ಅತಿ ಕಡಿಮೆ ಮಳೆಯಾಗುವ ಪ್ರದೇಶ
3. ಡ್ರಾಸ್................................... ಅತಿ ಕಡಿಮೆ ಉಷ್ಣಾಂಶ ದಾಖಲಾದ ಸ್ಥಳ
4. ಮಾಸಿನ್ ರಾಮ ................................... ಭಾರತದಲ್ಲಿ ಅತಿ ಹೆಚ್ಚು ಮಳೆಯಾಗುವ ಸ್ಥಳ
5. ಮಾವಿನ ಹೂಯ್ಲು ................................... ಕೇರಳದಲ್ಲಿ ಬೀಳವ ಪರಿಸರಣ ಮಳೆ
6. ಕಾಲಬೈಸಾಕಿ ................................... ಪಶ್ಚಿಮ ಬಂಗಾಳದಲ್ಲಿ ಬೀಳುವ ಪರಿಸರಣ ಮಳೆ
7. ಆಂಧಿಸ್ ................................... ಉತ್ತರ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆ
8. ಕಾಫಿಯ ಹೂ ಮಳೆ ................................... ಕರ್ನಾಟಕದಲ್ಲಿ ಬೀಳುವ ಪರಿಸರಣ ಮಳೆ
9. ಮಳೆಗಾಲ ಎಂದರೆ................................... ನೈರುತ್ಯ ಮಾನ್ಸೂನ್ ಮಾರುತಗಳ ಕಾಲ
10 ನಿರ್ಗಮನ ಕಾಲ ಎಂದರೆ................................... ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
* ಸ್ಥಾನ
* ಜಲರಾಶಿಗಳು
* ಮಾರುತಗಳ ದಿಕ್ಕು
* ಅಕ್ಷಾಂಶ
* ಸಮುದ್ರ ಮಟ್ಟದಿಂದ ಎತ್ತರ

2. ಭಾರತದ ವಾಯುಗುಣದ ಪ್ರಮುಖ ಋತು ಕಾಲಗಳು ಯಾವುವು?
* ಚಳಿಗಾಲ
* ಬೇಸಿಗೆ ಕಾಲ
* ಮಳೆಗಾಲ
* ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ

3. ನೈರುತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯೆಗಳನ್ನು ವಿವರಿಸಿ?
* ಮೇ ತಿಂಗಳಲ್ಲಿ ಅಧಿಕ ಉಷ್ಣಾಂಶದಿಂದಾಗಿ ಮಧ್ಯ ಭಾರತವು ಕಡಿಮೆ ಒತ್ತಡ ಪ್ರದೇಶವಾಗಿ ಮಾರ್ಪಡುವುದು.
* ಇದೇ ಸಮಯದಲ್ಲಿ ಹಿಂದು ಮಹಾಸಾಗರದಲ್ಲಿ ಅಧಿಕ ಒತ್ತಡ ನಿರ್ಮಾಣವಾಗುವುದು.
* ತೇವಾಂಶ ಭರಿತ ಮಾರುತಗಳು ನೈರುತ್ಯದ ಕಡೆಯಿಂದ ಭಾರತದ ಮೇಲೆ ಬೀಸಿ ಮಳೆ ತರುತ್ತವೆ
* ಭಾರತದ ವಿವಿಧ ಭಾಗಗಳಲ್ಲಿ ಈ ಕಾಲದಲ್ಲಿ ಅಧಿಕ ಮಳೆಯಾಗುತ್ತದೆ.

4. ಬೇಸಿಗೆ ಕಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿರಿ?
* ಈ ಕಾಲದಲ್ಲಿ ಸೂರ್ಯನ ಕಿರಣಗಳು ಉತ್ತರಾರ್ಧಗೋಳದ ಮೇಲೆ ಲಂಬವಾಗಿ ಬೀಳುತ್ತವೆ
* ಇದರಿಂದ ಭಾರತದಲ್ಲಿ ಅತ್ಯಧಿಕ ತಾಪಮಾನ ಉಂಟಾಗುವುದು.
* ಹವಾಮಾನವು ಅತಿಯಾದ ಶಾಖ, ಶುಷ್ಕ ಮತ್ತು ಶೆಕೆಯಿಂದ ಕೂಡಿರುವುದು.
* ದೇಶದ ಕಲವು ಭಾಗಗಳಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹದಿಂದ ಮಳೆಯಾಗುವುದು.

5. ಚಳಿಗಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿರಿ.
* ಈ ಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದ ಮೇಲೆ ಬೀಳುತ್ತವೆ.
* ಭಾರತದ ಮೇಲೆ ಸೂರ್ಯನ ಕಿರಣಗಳು ಓರೆಯಾಗಿರುತ್ತವೆ.
* ಹೀಗಾಗಿ ಭಾರತ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ, ಮತ್ತು ಆಕಾಶವು ಮೋಡ ರಹಿತವಾಗಿರುತ್ತವೆ.
* ಭಾರತ ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿಯಿರುತ್ತದೆ.

| |
|---|
| * ಜನೇವರಿ ತಿಂಗಳು ಅತಿ ಶೀತವಾದ ಮಾಹೆಯಾಗಿರುತ್ತದೆ ಅಲ್ಲಲ್ಲಿ ಇಬ್ಬನಿ ಮತ್ತು ಕಾವಳಗಳು ಬಿಳುತ್ತವೆ. |
| 6. ಭಾರತದಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ?<br>* ಕಛನ ಪಶ್ಚಿಮ ಭಾಗ<br>* ರಾಜಸ್ಥಾನದ ಥಾರ್ ಮರುಭೂಮಿ ಹಾಗೂ ಅದರ ಸುತ್ತಲಿನ ಪಶ್ಚಿಮ ಪಂಜಾಬ್, ಹರಿಯಾಣ, ಗುಜರಾತ<br>* ಜಾಸ್ಕರ್ ಶ್ರೇಣಿಯ ಉತ್ತರ ಭಾಗ<br>* ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು<br>* ರಾಜಸ್ಥಾನದ ರೂಯ್ಲಿ |
| 7. ಭಾರತದಲ್ಲಿ ಅಧಿಕ ಮಳೆಯಾಗುವ ಪ್ರದೇಶಗಳನ್ನು ಹೆಸರಿಸಿ?<br>* ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ<br>* ಜಮ್ಮುನಿಂದ ಆರಂಭಗೊಂಡು ಹಿಮಾಚಲ ಪ್ರದೇಶ ಉತ್ತರ ಪ್ರದೇಶ ಉತ್ತರಭಾಗ, ಬಿಹಾರ ಮತ್ತು ಪಶ್ಚಿಮಬಂಗಾಳ<br>* ಈಶಾನ್ಯ ಭಾರತದ ರಾಜ್ಯಗಳು, ಮೇಘಾಲಯದ ಮಾಸಿನ್‌ರಾಮ್ ಈ ಭಾಗದಲ್ಲಿದೆ ಅಧಿಕ ಮಳೆಯಾಗುತ್ತದೆ.<br>* ಪಶ್ಚಿಮ ಸಮುದ್ರ ತೀರ ಪ್ರದೇಶ |

********* ಮುಕ್ತಾಯ*********

# .ಅಧ್ಯಾಯ-4
# ಭಾರತದ ಮಣ್ಣುಗಳು

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗಿದೆ?
ಉತ್ತರ : ನದಿಗಳ ಸಂಚಯನದಿಂದ ನಿರ್ಮಾಣಕೊಂಡ ಮಣ್ಣಿನಿಂದ ನಿರ್ಮಾಗೊಂಡಿದೆ.

2. ಕಪ್ಪು ಮಣ್ಣನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
ಉತ್ತರ : "ರೀಗರ್ ಮಣ್ಣು" ಮತ್ತು "ಕಪ್ಪು ಹತ್ತಿ ಮಣ್ಣು" ಎನ್ನುವರು.

3. ಕಪ್ಪು ಮಣ್ಣನ್ನು 'ಕಪ್ಪು ಹತ್ತಿ ಮಣ್ಣು' ಎಂದು ಏಕೆ ಕರೆಯುವರು?
ಉತ್ತರ : ಹತ್ತಿ ಬೆಳೆಗೆ ಈ ಮಣ್ಣು ಪ್ರಶಸ್ತವಾಗಿರುವದರಿಂದ 'ಕಪ್ಪು ಹತ್ತಿ ಮಣ್ಣು' ಎನ್ನುವರು.

4. ನೆಡುತೋಪ ಬೇಸಾಯಕ್ಕೆ ಯಾವ ಮಣ್ಣು ಸೂಕ್ತವಾಗಿದೆ?
ಉತ್ತರ : ಪರ್ವತ ಮಣ್ಣು

5. ಕೆಂಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?
ಉತ್ತರ : ಗ್ರಾನೈಟ್, ನೀಸ್ ಮತ್ತು ಸ್ಪಟಿಕ್ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ

6. ಕಪ್ಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?
ಉತ್ತರ : ಬಸಾಲ್ಟ್ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ.

7. ಯಾವ ಮಣ್ಣನ್ನು ಲ್ಯಾಟರೈಟ್ ಮಣ್ಣು ಎಂದು ಕರೆಯವರು?
ಉತ್ತರ : ಜಂಬಿಟ್ಟಿಗೆ ಮಣ್ಣು

8. ಮಣ್ಣಿನ ಸವೆತ ಎಂದರೇನು?
ಉತ್ತರ : ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿ ಹೋಗುವುದನ್ನು ಮಣ್ಣಿನ ಸವೆತ ಎನ್ನುವರು

9. ಮಣ್ಣಿನ ಸಂರಕ್ಷಣೆ ಎಂದರೇನು?
ಉತ್ತರ : ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದಕ್ಕೆ ಮಣ್ಣಿನ ಸಂರಕ್ಷಣೆ ಎನ್ನುವರು.

10. ಮರಭೂಮಿಯ ಮಣ್ಣು ಭಾರತದ ಯಾವ ಭಾಗದಲ್ಲಿ ಕಂಡು ಬರುತ್ತದೆ?
ಉತ್ತರ : ರಾಜಸ್ತಾನ, (ವಾಯುವ್ಯ ಭಾಗ)

11. ಪರ್ವತ ಮಣ್ಣು ಹೇಗೆ ಉತ್ಪತ್ತಿಯಾಗಿದೆ?
ಉತ್ತರ : ಜೈವಿಕ ವಸ್ತುಗಳು ಕೊಳೆಯುವದರಿಂದ ಈ ಮಣ್ಣು ಉತ್ಪತ್ತಿಯಾಗಿದೆ.

12. ಚಹಾ ಮತ್ತು ಕಾಫಿ ಬೆಳೆಗೆ ಯಾವ ಮಣ್ಣು ಸೂಕ್ತವಾಗಿದೆ?
ಉತ್ತರ : ಪರ್ವತ ಮಣ್ಣು

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳಾವುವು?

* ಮೆಕ್ಕಲು ಮಣ್ಣು
* ಕಪ್ಪು ಮಣ್ಣು
* ಕೆಂಪು ಮಣ್ಣು
* ಲ್ಯಾಟರೈಟ್ ಮಣ್ಣು
* ಮರಭೂಮಿ ಮಣ್ಣು
* ಪರ್ವತ ಮಣ್ಣು

2. ಕೆಂಪು ಮಣ್ಣಿನ ಗುಣಲಕ್ಷಣಗಳಾವುವು?

* ಕೆಂಪು ಬಣ್ಣವನ್ನು ಹೊಂದಿರುವುದು.
* ತೇವಾಂಶ ಸಂಗ್ರಹಣಾ ಸಾಮರ್ಥ್ಯ ಕಡಿಮೆ.
* ಗ್ರಾನೈಟ್, ನೀಸ್ ಮತ್ತು ಸ್ಫಟಿಕ್ ಶಿಲೆಗಳಿಂದ ಉತ್ಪತ್ತಿ
* ಮರಳಿನಾಂಶ ಹೆಚ್ಚು ಜೇಡಿಯ ಪ್ರಮಾಣ ಕಡಿಮೆ

3. ಭಾರತದಲ್ಲಿ ಕಪ್ಪು ಮಣ್ಣಿನ ಹಂಚಿಕೆಯನ್ನು ತಿಳಿಸಿ.

* ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ ಈ ಮಣ್ಣು ವ್ಯಾಪಕವಾಗಿ ಹರಡಿದೆ.
* ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ, ಗುಜರಾತ, ತಮಿಳನಾಡು
* ಸುಮಾರು 5.46 ಲಕ್ಷ ಚ.ಕಿ.ಮೀ ವಿಸ್ತೀರ್ಣದಲ್ಲಿ ಈ ಮಣ್ಣು ಹಂಚಿಕೆಯಾಗಿದೆ.

4. ಮಣ್ಣಿನ ಸವೆತ ಎಂದರೇನು? ಮಣ್ಣಿನ ಸವತಕ್ಕೆ ಕಾರಣಗಳೇನು?

**ಅರ್ಥ** : ಮಣ್ಣಿನ ಮೇಲ್ಭಾಗವು ವಿವಿಧ ಕಾರಣಗಳಿಂದ ಕೊಚ್ಚಿ ಹೋಗುವುದನ್ನು ಮತ್ತು ಮಣ್ಣಿನ ಫಲವತ್ತತೆ ಹಾಳಾಗುವುದನ್ನು ಮಣ್ಣಿನ ಸವೆತ ಎನ್ನುವರು

**ಮಣ್ಣಿನ ಸವೆತಕ್ಕೆ ಕಾರಣಗಳು:**

* ಅರಣ್ಯ ನಾಶ
* ಅವೈಜ್ಞಾನಿಕ ಬೇಸಾಯ
* ಸಾಕು ಪ್ರಾಣಿಗಳನ್ನು ಮೇಯಿಸುವುದು
* ವರ್ಗಾವಣೆ ಬೇಸಾಯ
* ಇಟ್ಟಿಗೆ, ಟೈಲ್ಸ, ಮತ್ತು ಮಡಿಕೆಗಳ ನಿರ್ಮಾಣ

5. ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು?

* ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
* ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳ ಹರಿಯುವ ಪಾತ್ರವು ಬದಲಾಗುತ್ತದೆ.
* ಜಲಾಶಯಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
* ಭೂಮಿಯಲ್ಲಿ ನೀರು ಇಂಗುವ ಪ್ರಮಾಣ.

6. ಮಣ್ಣಿನ ಸಂರಕ್ಷಣಾ ವಿಧಾನಗಳಾವುವು?

* ಕೊರಕಲು ನಿಯಂತ್ರಣ ಮತ್ತು ಮೆಟ್ಟಿಲು ಪಂಕ್ತಿ ಬೇಸಾಯ
* ಚೆಕ್ ಡ್ಯಾಮಗಳ ನಿರ್ಮಾಣ
* ಅರಣ್ಯ ರಕ್ಷಣೆ
* ಬದುಗಳ ನಿರ್ಮಾಣ
* ಸಮೋನ್ನತಿ ಕೃಷಿ
* ಪ್ರಾಣಿಗಳ ಮೇಯಿಸುವಿಕೆಯ ನಿಯಂತ್ರಣ

7. ಮೆಕ್ಕಲು ಮಣ್ಣಿನ ಗುಣಲಕ್ಷಣಗಳಾವುವು?

* ನದಿಗಳ ಸಂಚಯನದಿಂದ ಈ ಮಣ್ಣು ಉತ್ಪತ್ತಿಯಾಗಿದೆ.
* ಫಲವತ್ತಾದ ಮಣ್ಣು
* ಸಿಂಧೂ, ಗಂಗಾ, ಬಯಲು ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿದೆ.
* ತೀರ ಪ್ರದೇಶದಲ್ಲಿಯು ಈ ಮಣ್ಣು ಕಂಡು ಬರುತ್ತದೆ.

8. ಕೆಂಪು ಮಣ್ಣು ಮತ್ತು ಕಪ್ಪು ಮಣ್ಣುಗಳ ನಡುವಿನ ವ್ಯತ್ಯಾಸ ತಿಳಿಸಿ.

| ಕೆಂಪು ಮಣ್ಣು | ಕಪ್ಪು ಮಣ್ಣು |
|---|---|
| * ಈ ಮಣ್ಣು ಸ್ಪಟಿಕ ಶಿಲೆಗಳ ಶಿಥಿಲೀಕರಣದಿಂದ ಉಂಟಾಗುತ್ತದೆ.<br>* ಈ ಮಣ್ಣಿನಲ್ಲಿ ಕಬ್ಬಿಣ ಅಂಶವು ಕಬ್ಬಿಣದ ಆಕ್ಸೈಡ್ ಆಗಿ ಪರಿವರ್ತನೆ ಹೊಂದುತ್ತದೆ.<br>* ಈ ಮಣ್ಣಿನಲ್ಲಿ ರಾಗಿ ಅತಿ ಹೆಚ್ಚಾಗಿ ಬೆಳೆಯುತ್ತಾರೆ. | * ಈ ಮಣ್ಣು ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉಂಟಾಗುತ್ತದೆ.<br>* ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ.<br>* ಈ ಮಣ್ಣಿನಲ್ಲಿ ಅತಿ ಹೆಚ್ಚಾಗಿ ಹತ್ತಿ ಬೆಳೆಯುತ್ತಾರೆ. |

**ನೆನಪಿನಲ್ಲಿಡಬೇಕಾದ ಮುಖ್ಯ ಸಂಗತಿಗಳು**

1. “ರೀಗರ್ ಮಣ್ಣು” ………………………………… ಕಪ್ಪು ಮಣ್ಣು ಎಂದರ್ಥ
2. “ಡೆಕ್ಕನ್ ಟ್ರ್ಯಾಪ್” ………………………………… ಕಪ್ಪು ಮಣ್ಣಿನ ಪ್ರದೇಶ.
3. “ಜಂಬಿಟ್ಟಿಗೆ ಮಣ್ಣು” ………………………………… ಲ್ಯಾಟ್‌ರೈಟ್ ಮಣ್ಣು ಎಚಿದರ್ಥ/
4. ಕೆಂಪು ಮಣ್ಣು ……………………………… ರಾಗಿ ಬೆಳೆಗೆ ಉಪಯುಕ್ತಕಾರಿ.
5. ಕಪ್ಪು ಮಣ್ಣು ……………………………… ಹತ್ತಿ ಬೆಳೆಗೆ ಉಪಯುಕ್ತಕಾರಿ
6. ಮೆಕ್ಕಲು ಮಣ್ಣು ……………………………… ಸೆಣಬು ಬೆಳೆಗೆ ಉಪಯುಕ್ತಕಾರಿ
7. “ ಮರಭೂಮಿ ಮಣ್ಣು” ……………………………… ಖರ್ಜೂರ ಬೆಳೆಯಲು ಹೆಸರುವಾಸಿ
8. “ಜಂಬಿಟ್ಟಿಗೆ ಮಣ್ಣು” ……………………………… ಕಾಫಿ,ಟೀ, ಬೆಳೆಯು ಸಹಾಯಕಾರಿ.

# ಅಧ್ಯಾಯ–1
# ಅಭಿವೃದ್ಧಿ

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಅಭಿವೃದ್ಧಿ ಎಂದರೇನು?
ಉತ್ತರ : ಒಂದು ದೇಶದ ಎಲ್ಲರ ಆಶೋತ್ತರಗಳನ್ನು ಈಡೇರಿಸುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆಯನ್ನು ಅಭಿವೃದ್ಧಿ ಎಂದು ಕರೆಯುವರು.

2. ಅನಾಭಿವೃದ್ಧಿ ಎಂದರೇನು?
ಉತ್ತರ : ಅನಾಭಿವೃದಿ ಎಂಬ ಶಬ್ಧವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಿಲ ಸ್ಥಿತಿಯನ್ನು ಸೂಚಿಸುತ್ತದೆ.

3. ರಾಷ್ಟ್ರೀಯ ಆದಾಯ ಎಂದರೇನು?
ಉತ್ತರ: ಒಂದು ದೇಶದಲ್ಲಿ ಒಂದು ವರ್ಷದಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯವೇ ರಾಷ್ಟ್ರೀಯ ಆದಾಯ

4. ತಲಾ ವರಮಾನ ಎಂದರೇನು?
ಉತ್ತರ: ಒಂದು ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವೇ ತಲಾ ವರಮಾನ

5. ತಲಾ ವರಮಾನ ಹೇಗೆ ಕಂಡು ಹಿಡಿಯಲಾಗುತ್ತದೆ?
ಉತ್ತರ: ಒಂದು ದೇಶದ ರಾಷ್ಟ್ರೀಯ ವರಮಾನವನ್ನು ಅಲ್ಲಿನ ಜನಸಂಖ್ಯೆಯಿಂದ ಭಾಗಿಸಿದಾಗ ದೊರೆಯುವ ಭಾಗಲಬ್ದವೇ ತಲಾ ವರಮಾನ

6. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ಯಾವುದು?
ಉತ್ತರ : ವಿಶ್ವ ಬ್ಯಾಂಕ್ (ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ)

7. 2014ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಎಷ್ಟನೇ ಸ್ಥಾನ ಹೊಂದಿತ್ತು?
ಉತ್ತರ : 135ನೇ ಸ್ಥಾನ

8. 2011 ರಲ್ಲಿ ಭಾರತದಲ್ಲಿ ಲಿಂಗಾನುಪಾವು ಎಷ್ಟು ಇತ್ತು.?
ಉತ್ತರ : 945

9. ಮಹಿಳಾ ಸಬಲೀಕರಣ ಎಂದರೇನು?
ಉತ್ತರ: ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜೀಕಿಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದೇ ಮಹಿಳಾ ಸಬಲೀಕರಣ.

10. ಆರ್ಥಿಕ ಅಭಿವೃದ್ಧಿ ಎಂದರೇನು?
ಉತ್ತರ: ಒಂದು ದೇಶದ ಆರ್ಥಿಕ ಚಟುವಟಿಕೆಗಳ ವಿಸ್ತರಣೆಯನ್ನು ಆರ್ಥಿಕ ಅಭಿವೃದ್ಧಿ ಎನ್ನುವರು

11. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎಂದರೇನು?
ಉತ್ತರ : ಮಧ್ಯಮ ಮತ್ತು ಕಡಿಮೆ ವರಮಾನ ಹೊಂದಿದ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎನ್ನುವರು.

12. ಸಂಯುಕ್ತ ರಾಷ್ಟ್ರದ ಪ್ರಕಾರ ಅನಾಭಿವೃದ್ಧಿ ರಾಷ್ಟ್ರಗಳು ಎಂದರೇನು?
ಉತ್ತರ : "ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ, ಮತ್ತು ಪಶ್ಚಿಮ ಯುರೋಪನ್ ರಾಷ್ಟ್ರಗಳಿಗಿಂತ ಕಡಿಮೆ ನೈಜ ತಲಾವರಮಾನ ಹೊಂದಿರುವ ರಾಷ್ಟ್ರಗಳೇ ಅನಾಭಿವೃದ್ಧಿ ರಾಷ್ಟ್ರಗಳು ಎನ್ನುವರು

13. ಮಾನವ ಅಭಿವೃದ್ಧಿ ಸೂಚಿಗಳು ಎಂದರೇನು?
ಉತ್ತರ : ವ್ಯಕ್ತಿಗಳ ಜೀವಿತಾವಧಿ, ಸಾಕ್ಷರತೆಯ ಪ್ರಮಾಣ ಮತ್ತು ತಲಾ ವರಮಾನ ಇವುಗಳ ಸರಾಸರಿಯನ್ನು ಮಾನವ ಅಭಿವೃದ್ಧಿ ಸೂಚಿಗಳು ಎನ್ನುವರು.

14. ಲಿಂಗ ಅನುಪಾತ ಎಂದರೇನು?
ಉತ್ತರ : ಪ್ರತಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗ ಅನುಪಾತ ಎನ್ನುವರು.

15. ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿದೆ.ಏಕೆ?
ಉತ್ತರ : ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ಯಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಇದರಿಂದ ಲಿಂಗಾನುಪಾತ ಕುಸಿಯುತ್ತಿದೆ.

16. ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?
ಉತ್ತರ : ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

17. 2011ರ ಜನಗಣತಿಯ ಪ್ರಕಾರ ಪುರುಷ ಮತ್ತು ಮಹಿಳೆಯರ ಸಾಕ್ಷರತಾ ದರವು ಎಷ್ಟಿತ್ತು?
ಉತ್ತರ :
* ಮಹಿಳೆಯರ ಸಾಕ್ಷರತಾ ದರ ಶೇ. 65.46
* ಪುರುಷರ ಸಾಕ್ಷರತಾ ದರ ಶೇ.82.14

# ಅಧ್ಯಾಯ-1
# ಅಭಿವೃದ್ಧಿ

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಅಭಿವೃದ್ಧಿಯನ್ನು ವ್ಯಾಖ್ಯಾನಿಸಿ. ಅಭಿವೃದ್ಧಿಯ ಪ್ರಕ್ರಿಯೆಯನ್ನು ವಿವರಿಸಿ.

ಉತ್ತರ: ಒಂದು ಕ್ಷೇತ್ರದ ಪ್ರಗತಿಯನ್ನು ಸೂಚಿಸುವ ಸೂಚಕವೇ ಅಭಿವೃದ್ಧಿ. ಅಭಿವೃದ್ಧಿ ಪ್ರಕ್ರಿಯೆಯು ಉತ್ಪಾದಾನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಯನ್ನು ಸೂಚಿಸುತ್ತದೆ.

2. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?

ಉತ್ತರ:

ಅನಾಭಿವೃದ್ಧಿ ಎಂಬ ಶಬ್ದವು ಹಿಂದುಳಿದ ಪ್ರಗತಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.

* ಕಡಿಮೆ ತಲಾದಾಯ
* ನಿರುದ್ಯೋಗ
* ಬಡತನ
* ಜನಸಂಖ್ಯೆಯಲ್ಲಿ ಹೆಚ್ಚಳ
* ಅಸಮಾನತೆ
* ಸಂಪನ್ಮೂಲಗಳ ಸಮರ್ಪಕ ಸದ್ಬಳಕೆ ಇಲ್ಲದಿರುವುದು.

3. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತೀರಿ?

ಉತ್ತರ: ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ, ತಲಾದಾಯಗಳ ಮೂಲಕ ಅಭಿವೃದ್ಧಿಯನ್ನು ಮಾಪನ ಮಾಡುವ ಸೂಚ್ಯಂಕವೇ ಮಾನವ ಅಭಿವೃದ್ಧಿ ಸೂಚ್ಯಂಕ

ಈ ಕೆಳಕಂಡ ಮೂರು ಸೂಚಿಗಳ ಮೂಲಕ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕ ಹಾಕಬಹುದು

* ನಿರೀಕ್ಷಿತ ಜೀವಿತಾವಧಿ
* ಶೈಕ್ಷಣಿಕ ಸಾಧನೆ
* ತಲಾದಾಯ

4. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ?

ಉತ್ತರ:

* ಕೃಷಿಯ ಹಿಂದುಳಿಕೆ
* ನಿರುದ್ಯೋಗ
* ಅನಕ್ಷರತೆ
* ಜನಸಂಖ್ಯಾ ಸ್ಫೋಟ
* ಆರೋಗ್ಯದ ಕೊರತೆ
* ಸಾಮಾಜಿಕ ಭದ್ರತೆಯ ಕೊರತೆ
* ವಸತಿಯ ಕೊರತೆ

| |
|---|
| * ಆಹಾರದ ಕೊರತೆ |
| 5. ಲಿಂಗ ಸಮಾನತೆಯನ್ನು ಹೇಗೆ ಸಾಧಿಸಬಹುದು?<br>ಉತ್ತರ:<br>* ಮಹಿಳಾ ಸಾಕ್ಷರತೆ<br>* ಸಮಾನ ವೇತನ ಅವಕಾಶ<br>* ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ<br>* ಮಹಿಳಾ ಸಬಲೀಕರಣ<br>* ಮಹಿಳೆಯರ ವಿರುದ್ಧ ಹಿಂಸೆ ತಡೆಗಟ್ಟುವುದು.<br>* ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ |
| 6. ತಲಾ ವರಮಾನವು ಅಭಿವೃದ್ಧಿಯ ನೈಜಮಾಪಕವಲ್ಲ ಏಕೆ?<br>ಉತ್ತರ: ತಲಾ ವರಮಾನವು ಒಂದು ಬಹು ಜನಪ್ರಿಯ ಮಾನದಂಡವಾಗಿದ್ದರೂ ಅದು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲಾ, ಅಲ್ಲದೇ ಅದು ಆಹಾರ,ವಸತಿ,ಶಿಕ್ಷಣ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ. |
| 7. "ಮಹಿಳಾ ಸ್ವಸಹಾಯಕ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ" ಸಮರ್ಥಿಸಿ<br>ಉತ್ತರ:<br>* ಮಹಿಳೆಯರು ವ್ಯವಹಾರ ನಿರ್ವಹಿಸುವ ಸಾಮರ್ಥ್ಯ ಗಳಿಸಿರುತ್ತಾರೆ<br>* ಮಹಿಳೆಯರು ಆದಾಯ ಗಳಿಸುವ ಸಾಮರ್ಥ್ಯ ಗಳಿಸಿರುತ್ತಾರೆ<br>* ಆರ್ಥಿಕ ಚಟುವಟಿಕೆಯಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಪ್ರೇರೇಪಿಸುತ್ತದೆ<br>* ಸಹಕಾರ ತತ್ವವನ್ನು ಕಲಿಯುವ ಅವಕಾಶ ನೀಡುತ್ತೆದೆ |
| 8. ಅಭಿವೃದ್ಧಿ ಹೊಂದಿದೆ ಹಾಗೂ ಅಭಿವೃದ್ಧಿ ರಾಷ್ಟ್ರಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ? |

| ಅಭಿವೃದ್ಧಿ ಹೊಂದಿದ ರಾಷ್ಟ್ರಗಳು | ಅಭಿವೃದ್ಧಿ ಹೊಂದದ ರಾಷ್ಟ್ರಗಳು |
|---|---|
| * ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ<br>* ತಲವರಮಾನದಲ್ಲಿ ಹೆಚ್ಚಳ<br>* ಕಡಿಮೆ ನಿರುದ್ಯೋಗ<br>* ವೈದ್ಯಕೀಯ ಸೌಲಭ್ಯಗಳ ಲಭ್ಯತೆ<br>* ಹೆಚ್ಚಿನ ಸಾಕ್ಷರತೆ<br>* ಆಹಾರ, ವಸತಿ, ಬಟ್ಟೆಯ ಲಭ್ಯತೆ | * ಕಡಿಮೆ ರಾಷ್ಟ್ರೀಯ ಆದಾಯ<br>* ಕಡಿಮೆ ತಲಾ ವರಮಾನ<br>* ನಿರುದ್ಯೋಗ ಮಟ್ಟದಲ್ಲಿ ಹೆಚ್ಚಳ<br>* ವೈದ್ಯಕೀಯ ಸೌಲಭ್ಯ ಕೊರತೆ<br>* ಕಡಿಮೆ ಸಾಕ್ಷರತೆ<br>* ಆಹಾರ, ವಸತಿ, ಬಟ್ಟೆಯ ಕೊರತೆ |

# ಅಧ್ಯಾಯ-2
# ಗ್ರಾಮೀಣ ಅಭಿವೃದ್ಧಿ

## I. ಒಂದು ಅಂಕದ ಪ್ರಶ್ನೋತ್ತರಗಳು.

1. ಗ್ರಾಮೀಣಾಬಿವೃದ್ಧಿ ಅರ್ಥ ತಿಳಿಸಿ?
ಉತ್ತರ : ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಗ್ರಾಮ ಪ್ರದೇಶಗಳ ಏಳ್ಗೆಯನ್ನು ಗ್ರಾಮೀಣ ಅಭಿವೃದ್ಧಿಯೆಂದು ಕರೆಯುವರು.

2. ವಿಕೇಂದ್ರೀಕರಣ ಎಂದರೇನು?
ಉತ್ತರ : ಪ್ರತಿಯೋಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನವರು

3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ?
ಉತ್ತರ: ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ.

4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ?
ಉತ್ತರ: 'ಪ್ರಧಾನ ಮಂತ್ರಿ ಆವಾಸ್ ಯೋಜನೆ' ಅಂಬೇಡ್ಕರ್-ವಾಲ್ಮೀಕಿ ವಸತಿ ಯೋಜನೆ, ಆಶ್ರಯ ಯೋಜನೆ

5. 'ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ ಎಂದವರು ಯಾರು?
ಉತ್ತರ: ಮಹತ್ಮಾ ಗಾಂಧೀಜಿ

6. 2011 ಜನಗಣತಿಯ ಪ್ರಕಾರ ಎಷ್ಟು ಜನರು ಹಳ್ಳಿಗಳಲ್ಲಿ ವಾಸಿಸಿತ್ತಿದ್ದಾರೆ?
ಉತ್ತರ : 2011ರ ಜನಗಣತಿಯ ಪ್ರಕಾರ ಶೇ.68.84 ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ.

7. ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವೇನು?
ಉತ್ತರ : ಕೃಷಿಯ ಸ್ಥಗಿತತೆ ಮತತು ನಿಧಾನಗತಿಯ ಬೆಳೆವಣಿಗೆಯು ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವಾಗಿದೆ.

8. ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಯಾವುದನ್ನು ಕರೆದರು?
ಉತ್ತರ : ತಳಮಟ್ಟದಿಮದ ಯೋಜನೆ ನಿರೂಪಿಸುವಿಕೆ ತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯೂ ಇದಾಗಿದೆ. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.

9. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕೆ ಪುನುರುಜ್ಜೀವನ ಮಾಡಲಾಗಿದೆ?
ಉತ್ತರ: ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪುನುರುಜ್ಜೀವನ ಮಾಡಲಾಗಿದೆ

10. ಏಕರೂಪ ಪಂಚಾಯತ್ ರಾಜ್ ಸಂಸ್ಥೆಗಳು ಯಾವಾಗ ಅಸ್ಥಿತ್ವಕ್ಕೆ ಬಂದವು?
ಉತ್ತರ: 1993

11. ಸಂವಿಧಾನದ ಯಾವ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಯಿತು?
ಉತ್ತರ : 73ನೇಯ ತಿದ್ದುಪಡಿ ಕಾಯ್ದೆ.

12. ಕರ್ನಾಟಕದಲ್ಲಿ ಎಷ್ಟು ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯಿತಿಗಳಿವೆ?
ಉತ್ತರ : 30ಜಿಲ್ಲಾ ಪಂಚಾಯಿತಿಗಳು, 176ತಾಲ್ಲೂಕು ಪಂಚಾಯಿತಿಗಳು, ಮತ್ತು 6,022ಗ್ರಾಮ ಪಂಚಾಯಿಗಳಿವೆ.

13. 'ಭಾರತದ ನೈಜ ಅಭಿವೃದ್ದೀಯೆಂದರೆ, ಅದು ಗ್ರಾಮಮಗಳಿಗೆ ಅಭಿವೃದ್ಧಿ ಎಂದು ಹೇಳಿದವರು?
ಉತ್ತರ : ಮಹಾತ್ಮ ಗಾಂಧೀಜಿ

14. ಸಂವಿಧಾನದ 73ನೇಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ ಎಷ್ಟು ಹಂತದ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಿವೆ?
ಉತ್ತರ : ಮೂರು

15. ಪಂಚಾಯತ್ ಸಂಸ್ಥೆಗಳು ಯಾವ ತತ್ವಗಳ ಅಡಯಲ್ಲಿ ಕಾರ್ಯನಿರ್ವಹಿಸುತ್ತವೆ?
ಉತ್ತರ : ವಿಕೇಂದ್ರೀಕರಣ

16. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಯಾವುದು ಅಸ್ತಿತ್ವಕ್ಕೆ ತರಲಾಗಿದೆ.?
ಉತ್ತರ : ಮಹಿಳಾ ಸಸ್ವಹಾಯ ಸಂಘ

## ಅಧ್ಯಾಯ-2
# ಗ್ರಾಮೀಣ ಅಭಿವೃದ್ಧಿ

## II. ಎರಡು ಅಂಕದ ಪ್ರಶ್ನೋತ್ತರಗಳು.

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?
ಉತ್ತರ:
* ಬಹುತೇಕ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ
* ಬಡತನ ಹೆಚ್ಚಾಗಿದೆ
* ಮೂರನೇ ಒಂದು ಭಾಗದ ಜನರು ಕಡುಬಡತನದಲ್ಲಿದ್ದಾರೆ
* ಗ್ರಾಮೀಣ ಗುಡಿ ಕೈಗಾರಿಕೆಗಳು ನಶಿಸಿ ಹೋಗಿವೆ
* ಶೇಖಡಾ 60% ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದಾರೆ
* ರಾಷ್ಟ್ರೀಯ ಆದಾಯಕ್ಕೆ ಪ್ರಾಥಮಿಕ ವಲಯದ ಪಾಲು ನಿರಂತರವಾಗಿ ಕಡಿಮೆಯಾಗುತ್ತಿದೆ
* ನಗರ ಮತ್ತು ಹಳ್ಳಿಗಳ ನಡುವಿನ ಅಚಿತರ ದಿನೇ ದಿನೇ ಹೆಚ್ಚಾಗುತ್ತಿದೆ

2. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ತಿಳಿಸಿ?
ಉತ್ತರ:
* ಗ್ರಾಮೀಣ ಪ್ರದೇಶದ ಬಡತನ, ನಿರುದ್ಯೋಗ, ಅನಕ್ಷರತೆ ನಿರ್ಮೂಲನೆ ಮಾಡಲು
* ಇಲ್ಲಿನ ಜನರ ಜಞಾನ, ಕೌಶಲ್ಯ, ದುಡಿಯುವ ಸಾಮರ್ಥ್ಯ ಹೆಚ್ಚಿಸುವುದು
* ಗ್ರಾಮಗಳಿಗೆ ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಒದಗಿಸುವುದು
* ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿ
* ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ
* ಗ್ರಾಮದಲ್ಲಿನ ಹಿಂದುಳಿದ, ಪ.ಜಾತಿ/ಪ.ಪಂಗಡದ, ಕೃಷಿ ಕಾರ್ಮಿಕರ, ಬಡವರ ಉದ್ಧಾರ

3. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣ ಹಿನ್ನಲೆಯಲ್ಲಿ ತಿಳಿಸಿ?
ಉತ್ತರ:
* ಹಳ್ಳಿಯ ಆಡಳಿತಾಧಿಕಾರವನ್ನು ಗ್ರಾಮಸರಿಗೆ ವಹಿಸುವುದು.
* ಹಳ್ಳಿಯ ಅಭಿವೃದ್ಧಿಯ ಜವಾಬಾsರಿಯನ್ನು ಗ್ರಾಮಸರಿಗೆ ವಹಿಸುವುದು.
* ವಿಕೇಂದ್ರಿಕರಣದಿಂದ ಗ್ರಾಮಗಳು ಸ್ವಾವಲಂಬಿ, ಸ್ವಯಂಪೂರ್ಣ, ಸಮೃದ್ದಗೊಳ್ಳುವುವ
* ಗ್ರಾಮಗಳು ಸ್ವಾವಲಂಬಿ, ಸ್ವಯಂಪೂರ್ಣ, ಸಮೃದ್ದಗೊಳ್ಳುವುದನ್ನೇ "ಗ್ರಾಮ ಸ್ವರಾಜ್ಯ" ಎಂದು ಕರೆಯಲಾಗುತ್ತದೆ
* ವಿಕೇಂದ್ರಿಕರಣದಿಂದ ಎಲ್ಲಾ ರೀತಿಯ ಶೋಷಣೆ ತಡೆಯಬಹುದು
* ಮಾನವನ ಸ್ವಾತಂತ್ರ ಮತ್ತು ಘನತೆಯನ್ನು ವಿಕೇಂದ್ರಿಕರಣವು ಸಂಕರ್ಷಿಸುತ್ತದೆ.
* ಸಹಾನೂಭೂತಿ ಮತ್ತು ಸಹಕಾರದಂತಹ ಮಾನವೀಚಿಟು ಮೌಲ್ಯಗಳನ್ನು ವೃದ್ಧಿಸುತ್ತದೆ

4. ಗ್ರಾಮೀಣಾಭಿವೃದ್ಧಿಯ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ?

* ಗ್ರಾಮಗಳಿಗೆ ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಒದಗಿಸುವುದು
* ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿ
* ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ
* ಗ್ರಾಮದಲ್ಲಿನ ಹಿಂದುಳಿದ, ಪ.ಜಾತಿ/ಪ.ಪಂಗಡದ, ಕೃಷಿ ಕಾರ್ಮಿಕರ, ಬಡವರ ಉದ್ಧಾರ
* ಉದ್ಯೋಗ ಖಾತರಿ ಮತ್ತು ವಸತಿ ಯೋಜನೆಗಳ ಅನುಷ್ಠಾನ
* ಗ್ರಾಮೀಣ ವೃದ್ಧರು, ಅಂಗವಿಕಲರು, ವಿಧವೆಯರನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು.
* ಸುವರ್ಣ ಗ್ರಾಮೋದಯ ಯೋಜನೆ ಅನುಷ್ಠಾನ.

5. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳು ಯಾವುವು?

ಉತ್ತರ:

* ಮಾನವ ಸಂಪನ್ಮೂಲ ಅಭಿವೃದ್ಧಿ
* ಭೂ ಸ್ಮಧಾರಣೆ
* ವಿದ್ಯುತ್ ಶಕ್ತಿ, ನೀರಾವರಿ, ಹಣಕಾಸು, ಮಾರುಕಟ್ಟೆಗಳು, ಸಾರಿಗೆ , ಕೃಷಿ ಸಂಶೋಧನೆ ಮತ್ತು ವಿಸ್ತರಣೆ, ಹಾಗೂ ಮಾಹಿತಿ ಪ್ರಸರಣಗಳನ್ನೊಳಗೊಂಡ ಮೂಲಭೂತ ಸೌಕರ್ಯಗಳ ಅಭಿವೃದ್ಧಿ
* ಬಡತನ ನಿರ್ಮೂಲನೆಯ ನಿರ್ದಿಷ್ಟ ಯೋಜನೆಗಳು.

6. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಯಾವುವು?

ಉತ್ತರ:

* ಗ್ರಾಮ ಪಂಚಾಯಿತಿ, ತಾಲ್ಲೂಕಾ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿಗಳುಳ್ಳ ಮೂರು ಹಂತದ ಪಂಚಾಯಿತಿ ವ್ಯವಸ್ಥೆ ಇದ್ದು ಗ್ರಾಮ ಸಭೆಯು ಅದರ ತಳಹದಿಯಾಗಿದೆ.
* ನೇರ ಹಾಗೂ ನಿಯಮಿತ ಚುನಾವಣೆಗಳು
* ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಾತಿ ನೀಡಿಕೆ
* ಹಣಕಾಸು, ಆಡಳಿತಾತ್ಮಕ, ಮುಂಗಡಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿಗಳ ನೀಡಿಕೆ.
* ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ
* ಪಂಚಾಯತಿಯನ್ನು ವಿಸರ್ಜಿಸುವಾಗ ಅನುಸರಿಸಬೇಕಾದ ಕಟ್ಟು ನಿಟ್ಟಿನ ಕ್ರಮಗಳು ಮತ್ತು ವಿಸರ್ಜನೆಗೊಂಡ ಆರು ತಿಂಗಳುಗಳ ಒಳಗೇ ಕಡ್ಡಾಯ ಚುನಾವಣೆ ನಡೆಸುವುದು.

# ಅಧ್ಯಾಯ –1
# ಬ್ಯಾಂಕ್ ವ್ಯವಹಾರಗಳು

## ಬಹು ಆಯ್ಕೆಯ ಪ್ರಶ್ನೆಗಳು

1. ಬ್ಯಾಂಕುಗಳ ಬ್ಯಾಂಕು________________

A. ಮೈಸೂರು ಬ್ಯಾಂಕು B.ಸಹಕಾರಿ ಬ್ಯಾಂಕು

C. ಭೂ ಬ್ಯಾಂಕು **D. ರಿಸರ್ವ್ ಬ್ಯಾಂಕ್**

2. "ಬ್ಯಾಂಕುಗಳ ತಾಯಿ" ಎಂದು ಈ ಬ್ಯಾಂಕ್‌ನ್ನು ಕರೆಯುವರು________________

A. ಎಕ್ಸಿಸ್ ಬ್ಯಾಂಕ್ B. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

**C. ರಿಸರ್ವ್ ಬ್ಯಾಂಕ್** D. ಕಾರ್ಪೋರೇಶನ್ ಬ್ಯಾಂಕ್

3. ಬ್ಯಾಂಕುಗಳಲ್ಲಿ ತೆರೆಯಬಹುದಾದ ಖಾತೆಗಳ ಸಂಖ್ಯೆ________________

A. 05 **B. 04**

C. 03 D. 01

4. "ಕ್ರೆಡಿಟ್ ಕಾರ್ಡ್" ಎಂದರೆ________________

A. ಉಳಿತಾಯ ಕಾರ್ಡ್ **B. ಜಮಾ ಕಾರ್ಡ್**

C. ನಿಶ್ಚಿತ ಕಾರ್ಡ್ D. ಚಾಲ್ತಿ ಕಾರ್ಡ್

5. ಎ.ಟಿ.ಎಂ ಮೂಲಕ ಹಣ ಪಡೆಯಲು ಬಳಸಬಹುದಾದ ಕಾರ್ಡ್________________

A. ಸ್ಮಾರ್ಟ್ ಕಾರ್ಡ್ B. ಓರಿಜಿನಲ್ ಕಾರ್ಡ್

**C. ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್** D. ಎಲೆಕ್ಷನ್ ಮತ್ತು ಆಧಾರ ಕಾರ್ಡ್

6. ಭಾರತದ ಎಲ್ಲಾ ಬ್ಯಾಂಕುಗಳು ಇದರ ಹತೋಟಿಯಲ್ಲಿರುತ್ತವೆ________________

A. ವಿಜಯಾ ಬ್ಯಾಂಕ್ B. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

C. ಬ್ಯಾಂಕ್ ಆಫ್ ಪಂಜಾಬ್ **D. ರಿಸರ್ವ್ ಬ್ಯಾಂಕ್**

7. ನಿಗದಿತ ಅವಧಿಗೆ ಮುಂಚೆ ಹಣ ಪಡೆಯಲು ಸಾಧ್ಯವಿಲ್ಲ ಖಾತೆ________________

**A. ನಿಶ್ಚಿತ ಠೇವಣಿ ಖಾತೆ** B. ಉಳಿತಾಯ ಖಾತೆ

C. ಚಾಲ್ತಿ ಖಾತೆ D. ಆವರ್ತ ಖಾತೆ

8. ದಿನಕ್ಕೆ ಎಷ್ಟು ಬಾರಿಯಾದರೂ ಹಣ ಪಡೆಯಲು ಸಾಧ್ಯವಿಲ್ಲ ಖಾತೆ________________

A. ಆವರ್ತ ಬ್ಯಾಂಕ್ B. ಉಳಿತಾಯ ಖಾತೆ

**C. ಚಾಲ್ತಿ ಖಾತೆ** D. ನಿಶ್ಚಿತ ಖಾತೆ

ಪ್ರಸ್ತುತಿ : ಶ್ರೀ ಬಾಳೇಶ ಹತ್ತರಕಿ, ಸ.ಶಿ., ಸ.ಪ್ರೌ.ಶಾಲೆ, ಹಿರನಾಗಾಂವ ತಾ.ಬಸವಕಲ್ಯಾಣ, ಜಿ:ಬೀದರ, ಮೊ.ನಂ.9972032339

9. ಉಳಿತಾಯ ಖಾತೆ ಅಥವಾ ಚಾಲ್ತಿ ಖಾತೆಯ ಮೂಲಕ ಹಣ ಪಡೆಯಲು ನೀಡುವ ಪುಸ್ತಕ____________

A. ಪಾಸ ಪುಸ್ತಕ
B. ಅರ್ಜಿ ಪುಸ್ತಕ
C. ಚಲನ್ ಪುಸ್ತಕ
**D. ಚಕ್ ಪುಸ್ತಕ**

10. ಬ್ಯಾಂಕ್ ಮತ್ತು ಗ್ರಾಹಕರಿಗೂ ಇರುವ ಸಂಬಂಧಗಳಲ್ಲಿರುವ ಬಗೆಗಳು__________

A. 05
**B. 02**
C. 03
D. 04

11. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಈ ಇಲಾಖೆ ನೀಡುತ್ತದೆ____________

A. ರೈಲ್ವೆ ಇಲಾಖೆ
**B. ಅಂಚೆ ಇಲಾಖೆ**
C. ರಕ್ಷಣಾ ಇಲಾಖೆ
D.ರೆವೆನ್ಯೂ ಇಲಾಖೆ.

12. ಭಾರತದಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಂಖ್ಯೆ__________

**A. 20**
B. 19
C. 17
D. 21

13. ಎ.ಟಿ.ಎಂ ವಿಸ್ತರಿಸಿ ಬರೆದಾಗ____________

A. ಎನಿ ಟೈಮ್ ಮನಿ
**B. ಅಟೋ ಮ್ಯಾಟಿಕ್ ಟೆಲ್ಲರ್ ಮಷಿನ್**
C. ಆಲ್ ಟೈಮ್ ಮನಿ
D. ಮೇಲಿನ ಯಾವುದು ಅಲ್ಲ

14. ಬ್ಯಾಂಕುಗಳಿಗೆ ಇಷ್ಟು ವರ್ಷ ಇತಿಹಾಸವಿದೆ__________

A. 300 ವರ್ಷ
B. 400 ವರ್ಷ
**C. 200 ವರ್ಷ**
D. 500 ವರ್ಷ

13. ಭವಿಷ್ಯ ಕಾಲದಲ್ಲಿ ಒಂದು ನಿರ್ದಿಷ್ಟು ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುವ ಠೇವಣಿ____________

A. ನಿಶ್ಚಿತ ಠೇವಣಿ
B. ಉಳಿತಾಯ ಠೇವಣಿ
**C. ಆವರ್ತ ಠೇವಣಿ**
D. ಚಾಲ್ತಿ ಠೇವಣಿ

## ಅಧ್ಯಾಯ–1
## ಬ್ಯಾಂಕಿನ ವ್ಯವಹಾರಗಳು

### I. ಒಂದು ಅಂಕದ ಪ್ರಶ್ನೋತ್ತರಗಳು.

1. ಬ್ಯಾಂಕು ಎಂದರೇನು?
ಉತ್ತರ : ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದು ಠೇವಣಿಗಳನ್ನು ಸ್ವೀಕರಿಸಿ ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ನೀಡುವ ಸಂಸ್ಥೆ.

2. ಬ್ಯಾಂಕ ವ್ಯವಹಾರ ಎಂದರೇನು?
ಉತ್ತರ : ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕ ವ್ಯವಹಾರ ಎನ್ನುವರು.

3. ಬ್ಯಾಂಕ್ ಎಂಬ ಪದ ಹೇಗೆ ಉತ್ಪತ್ತಿಯಾಗಿದೆ?
ಉತ್ತರ : ಇಟಾಲಿಯನ್ ಭಾಷೆಯ "ಬ್ಯಾಂಕೊ" ಮತ್ತು ಫ್ರೆಂಚ್ ಭಾಷೆಯ "ಬ್ಯಾಂಕ್" ಪದದಿಂದ ಉತ್ಪತ್ತಿಯಾಗಿದೆ ಇದರ ಅರ್ಥ "ಬೆಂಚು" ಅಥವಾ ಹಣವನ್ನು ವಿನಿಮಯ ಮಾಡುವ ಟೇಬಲ್ ಎಂದರ್ಥ

4. ಯಾವ ಬ್ಯಾಂಕನ್ನು "ಬ್ಯಾಂಕುಗಳ ಬ್ಯಾಂಕು" ಅಥವಾ "ಬ್ಯಾಂಕುಗಳ ತಾಯಿ" ಎಂದು ಕರೆಯವರು?
ಉತ್ತರ : ರಿಜರ್ವ ಬ್ಯಾಂಕ್

5. ಬ್ಯಾಂಕ್ ಸಾಲ ಎಂದರೇನು?
ಉತ್ತರ: ಬ್ಯಾಂಕುಗಳ ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಳ್ಳುತ್ತವೆ ಮತ್ತು ಈ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗಿರಾಕಿಗಳಿಗೆ ಸಾಲವಾಗಿ ಕೊಡುತ್ತವೆ. ಈ ಸಾಲಗಳನ್ನು ಬ್ಯಾಂಕ್ ಸಾಲ ಎನ್ನುತ್ತೇವೆ.

6. ರಿಜರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಅಥವಾ ಬ್ಯಾಂಕುಗಳ ತಾಯಿ ಎಂದು ಕರೆಯವರು ಏಕೆ?
ಉತ್ತರ : ಭಾರತದ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಜರ್ವ್ ಬ್ಯಾಂಕಿನ ಹತೋಟಿಯಲ್ಲಿರುವುದರಿಂದ

7. ಯಾವ ಬ್ಯಾಂಕು ದೇಶದ ಕೇಂದ್ರ ಬ್ಯಾಂಕಾಗಿದೆ?
ಉತ್ತರ : ರಿಜರ್ವ್ ಬ್ಯಾಂಕ್

8. ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಯಾವುದು?
ಉತ್ತರ : ಅಂಚೆ ಕಚೇರಿಗಳು

9. ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ

| |
|---|
| ಹೊಂದಿರುವ ಜನರಿಗೆ ಸೂಕ್ತವಾದ ಖಾತೆ ಯಾವುದು?<br>ಉತ್ತರ: ಉಳಿತಾಯ ಖಾತೆ |
| 10. ಯಾವ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ?<br>ಉತ್ತರ : ಉಳಿತಾಯ ಖಾತೆಗೆ |
| 11. ವ್ಯಾಪಾರಸ್ಥರು ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರಿಗೆ ಸೂಕ್ತವಾದ ಖಾತೆ ಯಾವುದು?<br>ಉತ್ತರ : ಚಾಲ್ತಿ ಖಾತೆ |
| 12. ದಿನಕ್ಕೆ ಎಷ್ಟು ಭಾರಿಯಾದರು ವ್ಯವಹರಿಸಬಹುದಾದ ಖಾತೆ ಯಾವುದು?<br>ಉತ್ತರ : ಚಾಲ್ತಿ ಖಾತೆ |
| 13. ಯಾವ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ ಆದರೆ ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತವೆ?<br>ಉತ್ತರ : ಚಾಲ್ತಿ ಖಾತೆ |
| 14. ಭವಿಷ್ಯ ಕಾಲದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ದಿನದಂದು ಹಣ ಹಿಂದಕ್ಕೆ ಪಡೆಯಲು ತೆರೆಯಬಹುದಾದ ಖಾತೆ ಯಾವುದು?<br>ಉತ್ತರ : ಆವರ್ತ ಠೇವಣಿ ಖಾತೆ |
| 15. ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ,ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದವುಗಳನ್ನು ಕೊಳ್ಳಲು ಸೂಕ್ತವಾದ ಖಾತೆ ಯಾವುದು?<br>ಉತ್ತರ : ಆವರ್ತ ಠೇವಣಿ ಖಾತೆ |
| 16. ಯಾವ ಖಾತೆಯಲ್ಲಿ ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ?<br>ಉತ್ತರ : ನಿಶ್ಚಿತ ಠೇವಣಿ ಖಾತೆ |
| 17. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಯಾವ ಇಲಾಖೆ ನೀಡುತ್ತದೆ?<br>ಉತ್ತರ : ಅಂಚೆ ಇಲಾಖೆ |
| 18. ರಾಷ್ಟ್ರೀಕೃತ ಬ್ಯಾಂಕಿಗೆ ಒಂದು ಉದಾಹರಣೆ ಕೊಡಿ?<br>ಉತ್ತರ : ಕೆನರಾ ಬ್ಯಾಂಕ್ |
| 19. ಠೇವಣಿಯನ್ನು ನಿಗಧಿತ ಅವಧಿಗೆ ಇಡಬಹುದಾದ ಖಾತೆ ಯಾವುದು?<br>ಉತ್ತರ : ನಿಶ್ಚಿತ ಠೇವಣಿ ಖಾತೆ |

# ಅಧ್ಯಾಯ –1
# ಬ್ಯಾಂಕ ವ್ಯವಹಾರಗಳು

## II. ಮೂರು ಅಂಕದ ಪ್ರಶ್ನೋತ್ತರಗಳು.

1. ಬ್ಯಾಂಕುಗಳ ಕಾರ್ಯಗಳನ್ನು ಬರೆಯಿರಿ?
ಉತ್ತರ:
* ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು
* ಸಾರ್ವಜನಿಕರಿಗೆ ಸಾಲಗಳನ್ನು ವಿತರಿಸುವುದು
* ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾವಯಿಸುವುದು
* ಹುಂಡಿಗಳನ್ನು ಸೋಡಿ ಮಾಡುವುದು
* ಭದ್ರತಾ ಕಪಾಟುಗಳನ್ನು ಭಾಡಿಗೆಗೆ ಕೊಡುವುದು.
* ವಿದೇಶಿ–ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
* ಸರ್ಕಾರದ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುವುದು.

2. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು?
ಉತ್ತರ:
* ಜಮಾ ಕಾರ್ಡಗಳನ್ನು ಕೊಡುವುದು.
* ಖಾಸಗಿ ಸಾಲಗಳು
* ಮನೆ ಕಟ್ಟಲು/ವಾಹನ ಖರೀದಿಸಲು ಸಾಲ ಕೊಡುವುದು
* ಪರಸ್ಪರ ನಿಧಿಗಳನ್ನು ನಿರ್ವಹಿಸುವುದು
* ವ್ಯಾಪಾರಕ್ಕೆ ಬೇಕಾದ ಸಾಲಗಳು ಹಾಗೂ ಭದ್ರತಾ ಕಪಾಟುಗಳನ್ನು ಕೊಡುವುದು.
* ಭರವಸೆಯ ಸೇವೆಗಳು
* ಸಹಿಗಳಿಗೆ ಜವಾಬ್ದಾರಿ ಹಾಕುವುದು

3. ಬ್ಯಾಂಕಿನ ಅನುಕೂಲಗಳು /ಬ್ಯಾಂಕ್ ಖಾತೆ ತೆರೆಯುವುದರ ಪ್ರಾಮುಖ್ಯತೆ ಏನು?
ಉತ್ತರ:
* ಬ್ಯಾಂಕ್ ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
* ಬ್ಯಾಂಕ್ ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ
* ಬ್ಯಾಂಕ್ ಖಾತೆಯು ಸಾಲವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕ್ ಖಾತೆಯಿಂದ ಸಾಲ ಪಡೆಯಲು ಸಾಧ್ಯವಾಗುತ್ತದೆ.
* ಬ್ಯಾಂಕ್ ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ.
* ಬ್ಯಾಂಕ್ ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

4. ಬ್ಯಾಂಕ್ ಖಾತೆಯನ್ನು ತೆಗೆಯುವ ವಿಧಾನಗಳನ್ನು ತಿಳಿಸಿ?

ಉತ್ತರ :

* ಯಾವ ವಿಧವಾದ ಬ್ಯಾಂಕ್ ಕಾತೆಯನ್ನು ತೆಗಡಯಬೇಕೆಂಬುದನನು ನಿರ್ದರಿಸುವುದು.
* ನಿಮಗೆ ಅನುಕೂಲವಾದ ಬ್ಯಾಂಕಿಗೆ ತೆರಳಿ ಅಧಿಕಾರಿಯನನು ಸಂಪರ್ಕಿಸುವುದು.
* ಪ್ರಸ್ತಾವನೆ ಅಜಿ ನಮೂನೆಯನ್ನು ತುಂಬುವುದು.
* ಪರಿಚಿತರ ಉಲ್ಲೇಖವನ್ನು ಕೊಡುವುದು.
* ಬ್ಯಾಂಕ್ ಖಾಅತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
* ಪ್ರಾರಂಭಿಕ ಠೇವಣಿ –ಇಡುವುದು.

5. ಬ್ಯಾಂಕುಗಳ ವಿಧಗಳನ್ನು ಪಟ್ಟಿ ಮಾಡಿ?

ಉತ್ತರ:

* ಭಾರತೀಯ ರಿಜರ್ವ್ ಬ್ಯಾಂಕ್ (ಆರ್.ಬಿ.ಐ)
* ವಾಣಿಜ್ಯ ಬ್ಯಾಂಕ್‌ಗಳು
* ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ಗಳು
* ಭೂ ಅಭಿವೃದ್ಧಿ ಬ್ಯಾಂಕ್‌ಗಳು
* ಸ್ಥಳೀಯ ಬ್ಯಾಂಕ್‌ಗಳು
* ಸಹಕಾರಿ ಬ್ಯಾಂಕ್‌ಗಳ

6. ಬ್ಯಾಂಕಿನ ಗುಣ ಲಕ್ಷಣಗಳನ್ನು ಪಟ್ಟಿ ಮಾಡಿ?

ಉತ್ತರ:

* ಹಣದ ವಹಿವಾಟು.
* ಠೇವಣಿಗಳನ್ನು ಅಂಗೀಕರಿಸುತ್ತದೆ
* ಸಾಲಗಳನ್ನು ನೀಡುವುದು
* ಏಜೆನ್ಸಿ ಸೇವೆಗಳು
* ಲಾಭ ಮತ್ತು ಸೇವಾ ಭರವಸೆ
* ಬ್ಯಾಂಕಿಂಗೆ ವ್ಯವಹಾರ
* ಹೆಸರಿನ ಗುರುತು.

8. ಅಂಚೆ ಕಛೇರಿಗಳು ಸಲ್ಲಿಸುವ ಸೇವೆಗಳಾವುವು?

ಉತ್ತರ:

* ರಾಷ್ಟ್ರೀಯ ಉಳಿತಾಯ ಪತ್ರಗಳನ್ನುನೀಡುತ್ತದೆ.
* ಕಿಸಾನ್ ವಿಕಾಸ್ ಪತ್ರಗಳನ್ನು ನೀಡುತ್ತದೆ
* ಮಾಸಿಕ ಆವರ್ತ ಠೇವಣಿ ಖಾತೆಗಳನ್ನು ಒದಗಿಸುತ್ತವೆ.
* ಅಂಚೆ ಉಳಿತಾಯ ಖಾತೆಗಳನ್ನು ನಿರ್ವಹಿಸುತ್ತವೆ
* ವಿವಿಧ ನಿವೃತ್ತಿ ವೇತನಗಳನ್ನು ಪಾವತಿ ಮಾಡುವುದು.
* ಹಣ ವರ್ಗಾವಣೆಯನ್ನು ಮಾಡುತ್ತದೆ.
* ಅಂಚೆ ಜೀವ ವಿಮೆ ಸೇವೆಗಳನ್ನು ನೀಡುತ್ತದೆ.

9. ಬ್ಯಾಂಕು ಮತ್ತು ಗ್ರಾಹಕರಿಗೂ ಇರುವ ಸಂಬಂಧವನ್ನು ತಿಳಿಸಿ?
ಉತ್ತರ :
**ಸಾಮಾನ್ಯ ಸಂಬಂಧ :** ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ
* ಪ್ರಾಥಮಿಕ ಸಂಬಂಧ
* ಸಹಾಯಕ ಅಥವಾ ಉಪಕಾರ ಸಂಬಂಧ
* ಕಾರಬಾರಿ ಮತ್ತು ಮುಖ್ಯಸ್ಥನ ಸಂಬಂಧ

**ವಿಶೇಷ ಸಂಬಂಧ :** ಇದು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ
* ಚೆಕ್ಕುಗಳನ್ನು ಮನ್ನಣೆ ಮಾಡುವುದು
* ಗ್ರಾಹಕನ ಲೆಕ್ಕಗಳ ಗೌಪ್ಯತೆ ಕಾಪಾಡುವುದು.

10.ಬ್ಯಾಂಕಿನಲ್ಲಿ ತೆರೆಯಬಹುದಾದ ಪ್ರಮುಖ ಖಾತೆಗಳನ್ನು ತಿಳಿಸಿ?
ಉತ್ತರ:
* ಉಳಿತಾಯ ಖಾತೆ
* ಚಾಲ್ತಿ ಖಾತೆ
* ಆವರ್ತ ಠೇವಣಿ ಖಾತೆ
* ನಿಶ್ಚಿತ ಠೇವಣಿ ಖಾತೆ

11. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳ ನಡುವಿನ ವ್ಯತ್ಯಾಸ ಬರೆಯಿರಿ?

| ಉಳಿತಾಯ ಖಾತೆ | ಚಾಲ್ತಿ ಖಾತೆ |
|---|---|
| * ವೇತನ ಪಡೆಯುವವರು ಮತ್ತು ಸಣ್ಣ ಉಳಿತಾಯಗಾರರಿಗೆ ಸೂಕ್ತ. | * ಇದು ವ್ಯಾಪಾರಸ್ಥರು ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರಿಗೆ ಸೂಕ್ತ. |
| * ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುತ್ತವೆ. | * ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲಾ |
| * ದಿನಕ್ಕೆ ಎಷ್ಟು ಬಾರಿಯಾದರು ವ್ಯವಹರಿಸಲು ಬರುವುದಿಲ್ಲಾ. | * ದಿನಕ್ಕೆ ಎಷ್ಟು ಬಾರಿಯಾದರು ವ್ಯವಹರಿಸಬಹುದು. |

# ಅಧ್ಯಾಯ –2
# ಉದ್ಯಮಗಾರಿಕೆ

## I .ಬಹು ಆಯ್ಕೆಯ ಪ್ರಶ್ನೆಗಳು

1. ಅಪೊಲೋ ಆಸ್ಪತ್ರೆಗಳ ರೂವಾರಿ ________________

A. ನರೇಶ ಗೊಯಲ್ B.ವರ್ಗೀಸ್ ಕುರಿಯನ್

C. ಧೀರುಬಾಯಿ ಅಂಬಾನಿ **D. ಡಾ. ಪ್ರತಾಪ್ ರಡ್ಡಿ**

2. ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು ________________

A. ನಾರಾಯಣ ಮೂರ್ತಿ B. ಅಜೀಂ ಪ್ರೇಮಜಿ

**C. ನರೇಶ ಗೊಯಲ್** D. ಏಕ್ತಾಕಪೂರ್

3. ಬಿಳಿಕ್ರಾಂತಿಯ ಪಿತಾಮಹ ________________

A. ಧೀರುಬಾಯಿ ಅಂಬಾನಿ B. ಕಿರಣ್ ಮುಜುಮ್‌ದಾರ್ ಷಾ

C. ನಾರಾಯಣ ಮೂರ್ತಿ **D. ವರ್ಗೀಸ್ ಕುರಿಯನ್**

4. ಇನ್‌ಫೊಸಿಸ್ ತಂತ್ರಜ್ಞಾನ ನಿಗಮದ ಸ್ಥಾಪಕರು________________

**A. ನಾರಾಯಣ ಮೂರ್ತಿ** B. ಅಜೀಂ ಪ್ರೇಮಜಿ

C. ಡಾ. ಪ್ರತಾಪ್ ರಡ್ಡಿ D. ಏಕ್ತಾಕಪೂರ್

5. 'ರಿಲಾಯನ್ಸ್'ನ ಸ್ಥಾಪಕರು ________________

A. ಅಜೀಂ ಪ್ರೇಮಜಿ **B. ಧೀರುಬಾಯಿ ಅಂಬಾನಿ**

C. ಕಿರಣ್ ಮುಜುಮ್‌ದಾರ್ ಷಾ D. ವರ್ಗೀಸ್ ಕುರಿಯನ್

6. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು ________________

A. ಏಕ್ತಾಕಪೂರ್ B. ನಾರಾಯಣ ಮೂರ್ತಿ

**C. ಅಜೀಂ ಪ್ರೇಮಜಿ** D. ಧೀರುಬಾಯಿ ಅಂಬಾನಿ

7. 2001 ರಲ್ಲಿ ಶ್ರೇಷ್ಠ ಉದ್ಯಮಿ ಪ್ರಶಸ್ತಿ ಪಡೆದವರು ________________

A. ಕಿರಣ್ ಮುಜುಮ್‌ದಾರ್ ಷಾ **B. ಏಕ್ತಾಕಪೂರ್**

C. ಡಾ. ಪ್ರತಾಪ್ ರಡ್ಡಿ D. ಧೀರುಬಾಯಿ ಅಂಬಾನಿ

8. ಬಯೋಕಾನ್ ನಿಗಮದ ಸ್ಥಾಪಕರು____________

**A. ಕಿರಣ್ ಮುಜಮ್‌ದಾರ್ ಷಾ** B. ಡಾ. ಪ್ರತಾಪ್ ರಡ್ಡಿ

C. ನಾರಾಯಣ ಮೂರ್ತಿ D. ವರ್ಗೀಸ್ ಕುರಿಯನ್

9. NASDAQ ನೊಂದಾಯಿತಗೊಂಡ ತಂತ್ರಜ್ಞಾನ ಸಂಸ್ಥೆ ________________

A. ವಿಪ್ರೋ B. ನಾಸಾ

**C. ಇನ್‌ಫೋಸಿಸ್** D. ಬಯೋಕಾನ್_

10. ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರು ____________

**A. ಏಕ್ತಾಕಪೂರ್** B. ಕಿರಣ್ ಮುಜಮ್‌ದಾರ್ ಷಾ

C. ಧೀರುಬಾಯಿ ಅಂಬಾನಿ D. ನಾರಾಯಣ ಮೂರ್ತಿ

11. ಭಾರತದ ಸಮ್ಮೇಳನ ಸಂಸ್ಥೆಯನ್ನು ಹುಟ್ಟುಹಾಕಿದವರಲ್ಲಿ ಪ್ರಮುಖರು__________

A. ನರೇಶ ಗೊಯಲ್ B.ವರ್ಗೀಸ್ ಕುರಿಯನ್

**C. ಧೀರುಬಾಯಿ ಅಂಬಾನಿ** D. ಡಾ. ಪ್ರತಾಪ್ ರಡ್ಡಿ

12. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯಾದ ವರ್ಷ ____________

**A. 1978** B. 1974

C. 1986 D. 1991

13. ಲಕ್ಷಾಂತರ ಲೀಟರ್ ಹಾಲಿನ ಹೊಳೆ ಹರಿಸುವುದರ ಮೂಲಕ ಹೆಸರು ವಾಸಿಯಾದವರು__

A. ನಾರಾಯಣ ಮೂರ್ತಿ **B. ವರ್ಗೀಸ್ ಕುರಿಯನ್**

C. ನರೇಶ ಗೊಯಲ್ D. ಏಕ್ತಾಕಪೂರ್

14. ಸಂಶೋಧನೆ ಮತ್ತು ಅಭಿವೃದ್ಧಿ ಸೇವೆಯಲ್ಲಿ ದೊಡ್ಡ ಸ್ವಾಯತ್ತ ಸಂಸ್ಥೆ ____________

**A. ವಿಪ್ರೋ ತಂತ್ರಜ್ಞಾನ ಸಂಸ್ಥೆ** B. ನಾಸಾ

C. ಇನ್‌ಫೋಸಿಸ್ D. ಬಯೋಕಾನ್

13. ಭಾರತದ ಆರೋಗ್ಯ ಕ್ಷೇತ್ರದಲ್ಲಿ ವೈದ್ಯಶಾಲೆಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರು__

A. ನರೇಶ ಗೊಯಲ್ B.ವರ್ಗೀಸ್ ಕುರಿಯನ್

C. ಧೀರುಬಾಯಿ ಅಂಬಾನಿ **D. ಡಾ. ಪ್ರತಾಪ್ ರಡ್ಡಿ**

# ಅಧ್ಯಾಯ-2
# ಉದ್ಯಮಗಾರಿಕೆ

## II. ಒಂದು ಅಂಕದ ಪ್ರಶ್ನೋತ್ತರಗಳು.

1. ಉದ್ಯಮಿ ಎಂಬ ಪದವು ಯಾವ ಭಾಷೆಯ ಯಾವ ಪದದಿಂದ ಬಂದಿದೆ?
ಉತ್ತರ: ಫ್ರೆಂಚ್ ಭಾಷೆಯ 'ಎಂಟ್ರಿ ಫ್ರೆಂಡ್'

2. ಉದ್ಯಮಿ ಎಂದರೆ ಯಾರು?
ಉತ್ತರ : ಒಂದು ಆರ್ಥಿಕ ಚಟುವಟಿಕೆಯನ್ನು ಕೈಗೊತ್ತಿಕೊಳ್ಳುವವರೇ ಉದ್ಯಮಿ

3. ಉದ್ಯಮಗಾರಿಕೆ ಎಂದರೇನು?
ಉತ್ತರ : ಒಬ್ಬ ಉದ್ಯಮಿಯ ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳೆ ಉದ್ಯಮಗಾರಿಕೆ

4. ಫ್ರೆಂಚ್ ಪದ "ಎಂಟ್ರಪ್ರೆಂಡೆ" ಪದದ ಅರ್ಥವೇನು?
ಉತ್ತರ: ಯಾವುದಾದರೂ ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವುದು.

5. ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು ಯಾರು?
ಉತ್ತರ : ನರೇಶ್ ಗೊಯಲ್

6.'ಅಪೊಲೋ' ಆಸ್ಪತ್ರೆಗಳನ್ನು ಪ್ರಾರಂಬಿಸಿದವರು ಯಾರು?
ಉತ್ತರ : ಡಾ. ಪ್ರತಾಪ್ ರಡ್ಡಿ

7. ಬಿಳಿಕಾಂತ್ರಿಯು ಪಿತಮಾಹ ಎಂದು ಯಾರನ್ನು ಕರೆಯಲಾಗಿದೆ?
ಉತ್ತರ : ವರ್ಗೀಸ್ ಕುರಿಯನ್

8. ಭಾರತದಲ್ಲಿ ಇನ್‌ಫೊಸಿಸ್ ತಂತ್ರಜ್ಞಾನ ನಿಗಮ ಪ್ರಾರಂಭಿಸಿದವರು ಯಾರು?
ಉತ್ತರ : ನಾರಾಯಣ ಮೂರ್ತಿ

9.ರಿಲಾಯನ್ಸ್" ನ ಸ್ಥಾಪಕರು ಯಾರು?
ಉತ್ತರ: ಧೀರೂಬಾಯಿ ಅಂಬಾನಿ

10.ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು ಯಾರು?
ಉತ್ತರ: ಅಜೀಂ ಪ್ರೇಮ್‌ಜಿ

11. 2001 ರಲ್ಲಿ ವರ್ಷದ ಶ್ರೇಷ್ಠ ಉದ್ಯಮಿ ಪ್ರಶಸ್ತಿ ಪಡೆದವರು ಯಾರು?
ಉತ್ತರ : ಏಕ್ತಾ ಕಪೂರ್

12. ಬಯೋಕಾನ್ ನಿಗಮದ ಸ್ಥಾಪಕರು ಯಾರು?
ಉತ್ತರ : ಕಿರಣ್ ಮುಜುಮ್‌ದಾರ್ ಷಾ

13. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನಯಾದ ವರ್ಷ ಯಾವುದು?
ಉತ್ತರ: ಕ್ರಿ.ಶ.1978ರಲ್ಲಿ

14. ಭಾರತದ ಅತಿ ದೊಡ್ಡ ಆಂತರಿಕ ವಾಯುಮಾರ್ಗ ಯಾವುದು?
ಉತ್ತರ: ಜೆಟ್ ವಾಯುಮಾರ್ಗ

15. NASDAQ ನೋಂದಾಯಿತಗೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ ಯಾವುದು?
ಉತ್ತರ: ಇನ್‌ಫೋಸಿಸ್ ತಂತ್ರಜ್ಞಾನ ನಿಗಮ

16. ಭಾರತದ ಸಮ್ಮೇಳನ ಸಂಸ್ಥೆಯನ್ನು ಹುಟ್ಟುಹಾಕಿದವರಲ್ಲಿ ಅತ್ಯಂತ ಪ್ರಮುಖರು ಯಾರು?
ಉತ್ತರ: ಧೀರುಬಾಯಿ ಅಂಬಾನಿ

17. ಸಂಶೋಧನೆ ಮತ್ತು ಅಭಿವೃದ್ಧಿ ಸೇವೆಯಲ್ಲಿ ಅತ್ಯಂತ ದೊಡ್ಡ ಸ್ವಾಯತ್ತ ಸಂಸ್ಥೆ ಯಾವುದು?
ಉತ್ತರ: ವಿಪ್ರೋ ತಂತ್ರಜ್ಞಾನ ಸಂಸ್ಥೆ

18. ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರು ಯಾರು?
ಉತ್ತರ : ಏಕ್ತಾಕಪೂರ್

19. ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ ಎಂದು ಯಾರನ್ನು ಕರೆಯಲಾಗುತ್ತದೆ?
ಉತ್ತರ: ಏಕ್ತಾ ಕಪೂರ್

# ಅಧ್ಯಾಯ –2
# ಉದ್ಯಮಗಾರಿಕೆ

## III. ಮೂರು ಅಂಕದ ಪ್ರಶ್ನೋತ್ತರಗಳು.

1. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯ ಉದ್ದೇಶವೇನು?

ಉತ್ತರ: * ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು.
* ಗ್ರಾಮಾಂತರ ಕೈಗಾರಿಕೆಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರಿಕರಿಸುವುದು.

2. ಒಬ್ಬ ವ್ಯಕ್ತಿ ಒಂದು ಉದ್ದಿಮೆ ಸ್ಥಾಪಿಸಲು ಇರುವ ಯಾವುದಾದರೂ ಎರಡು ಕ್ಷೇತ್ರಗಳು ಹೆಸರಿಸಿ.

ಉತ್ತರ: * ಜಾಹಿರಾತು ಸೇವಾ ಸಂಸ್ಥೆಗಳು
* ಫೋಟೋ ತೆಗೆಯುವ ಕೇಂದ್ರಗಳು

3. ಉದ್ಯಮಗಾರಿಕೆಗೆ ಸಾಲ ನೀಡುವ 2 ಸಂಸ್ಥೆಗಳನನು ಹೆಸರಿಸಿ.

ಉತ್ತರ: * ಭಾರತದ ಕೈಗಾರಿಕಾ ಅಭಿವೃದ್ಧಿ
* ಅಮದು–ರಫು ಬ್ಯಾಂಕ್ (ಎಕ್ಸಿಂ ಬ್ಯಾಂಕ್)

4. ಉದ್ಯಮಿಗಳು ಎರಡು ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.

ಉತ್ತರ: * ಜಿಲ್ಲಾ ಕೈಗಾರಿಕೆ ಕೇಂದ್ರಗಳು
* ಕೈಗಾರಿಕಾ ಪ್ರದೇಶಗಳು

5. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?

ಉತ್ತರ :
* ಸೃಜನಾತ್ಮಕ್
* ತಂಡವನ್ನು ಕಟ್ಟುವುದು.
* ಸಮಸ್ಯೆ ಪರಿಹಾರ
* ನಷ್ಟ ಭರಿಸಲು ಸಿದ್ದ
* ನಾಯಕತ್ವ
* ಆತ್ಮವಿಶ್ವಾಸ
* ನಿರ್ಧಾರ ಕೈಗೊಳ್ಳುವುದು.

6. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.

ಉತ್ತರ:
* ಉದ್ಯಮಿಯು ದೇಶದ ನಿವ್ವಳ ಉತ್ಪನ್ನವನ್ನು ಹೆಚ್ಚಿಸುತ್ತಾರೆ.
* ವಿದೇಶಿ ವ್ಯಾಪಾರ ವೃದ್ಧಿಸಲು ಸಹಕಾರಿಯಾಗಿರುತ್ತಾರೆ
* ದೇಶದ ಸಂಪನ್ಮೂಲ ಸದುಪಯೋಗವಾಗಲು ಕಾರಣರಾಗಿದ್ದಾರೆ
* ಉಳಿತಾಯವನ್ನು ಬಂಡವಾಳವಾಗಿ ಪರಿವರ್ತಿಸಿ ಲಾಭ ಗಳಿಸಲು ಸಹಕರಿಸುತ್ತಾರೆ.
* ಉದ್ಯಮಿಗಳ ಸಾಮರ್ಥ್ಯ ಮತ್ತು ಪ್ರಚೋದನೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ.
* ಸಂಪನ್ಮೂಲಗಳ ಸದುಪಯೋಗ ಮಾಡಿಕೊಳ್ಳುತ್ತಾರೆ.

7. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ?
ಉತ್ತರ:
* ಇದು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ.
* ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯವಾಗಿದೆ.
* ಕಷ್ಟದ ಕೆಲಸವನ್ನು ಗುರುತಿಸಿ ಕಾರ್ಯರೂಪಕ್ಕೆ ತರುವುದಾಗಿದೆ.
* ನಷ್ಟಗಳನ್ನು ಲೆಕ್ಕಾಚಾರ ಹಾಕಿ ಲಾಭ ಪಡೆಯುವುದಾಗಿದೆ.

8. ಉದ್ಯಮಿಯ ಕಾರ್ಯಗಳು ಯಾವುವು?
ಉತ್ತರ:
* ವ್ಯಾಪಾರ ಚಟುವಟಿಕೆಗಳನ್ನು ಯೋಜನೆಗಳ ಮೂಲಕ ಆರಂಭಿಸುತ್ತಾನೆ.
* ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
* ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ
* ತನ್ನ ಉದ್ಯಮದ ಹಣಕಾಸಿನ ಆಯವ್ಯಯ ನಿಭಾಯಿಸುತ್ತಾನೆ.
* ಕಷ್ಟ–ನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರುಸುತ್ತಾನೆ.
* ಸೂಕ್ತವಾದ ನಿರ್ಧಾರ ಕೈಗೊಳ್ಳುತ್ತಾನೆ
* ಸೂಕ್ತವಾದ ಮಾರ್ಗದರ್ಶನ ಮಾಡುತ್ತಾನೆ.

****ಮುಕ್ತಾಯ****